

ರಂಜನೆ ಬೋಧನೆ ಪ್ರಚೋದನೆ


ಲಂಕೇಶ್

ಜನವರಿ 27, 2010 ರೂ. 12/-

ಹೊಳೆಗೆ ಹೊಸನೀರು
ಎನ್.ಕೆ. ಹನುಮಂತಯ್ಯ


'ರತ್ನ'ಕ್ಕೆ ಕಳಂಕ



ಡ್ಡಿಯ 'ನೈಸ್' ಡೀಲ್



BBMP ಅಶೋಕ್ ಕಟ್ಟಾ ಡಕಾಯತಿ



ಸ್ವಾಮಿ ಅಸ್ವಸ್ಥ ಪೀಠಕ್ಕೆ ಪೈಪೋಟಿ



ಲಾಭಕ್ಕಾಗಿ ವಿಷ್ಣು ಭಜನೆ

	ಬ್ಯಾಂಕಿನ ಅಧ್ಯಕ್ಷ	ಹಿಂದಿನ ಹುದ್ದೆ	ಅವಧಿ
	ಯೂಜಿನ್ ಮೇಯರ್	ಲಾಜಾರ್ಡ್ ಫೆರೇಸ್‌ನ ಪಾರ್ಟ್‌ನರ್	1946
	ಜಾನ್.ಜೆ.ಮೆಕ್ಲಾ	ಯುದ್ಧ ಕಾರ್ಯದರ್ಶಿ	1947-49
	ಯೂಜಿನ್.ಆರ್.ಬ್ಲಾಕ್	ಚೇಸ್ ನ್ಯಾಷನಲ್ ಬ್ಯಾಂಕ್‌ನ ಉಪಾಧ್ಯಕ್ಷ	1949-63
	ಜಾರ್ಜ್.ಡಿ.ವುಡ್ಸ್	ಬೋಸ್ಟನ್ ಕಾರ್ಪೊರೇಷನ್ನಿನ ಅಧ್ಯಕ್ಷ	1963-68
	ರಾಬರ್ಟ್ ಮ್ಯಾಕ್‌ನಮಾರ	ರಕ್ಷಣಾ ಕಾರ್ಯದರ್ಶಿ	1968-81
	ಆಲ್ಡೆನ್ ಕೌಸೆನ್	ಅಮೆರಿಕನ್ ಬ್ಯಾಂಕಿನ ಸಿ.ಇ.ಒ	1981-84
	ಬಾರ್ಬರ್.ಬಿ.ಕೊಮ್ಬಲ್	ಅಮೆರಿಕದ ಕಾಂಗ್ರೆಸ್ಸಿನ ಸದಸ್ಯ	1984-91
	ಲೆವಿಸ್ ಪ್ರಿಸ್ಟನ್	ಜೆ.ಪಿ.ಮೋರ್ಗಾನ್ ಸಂಸ್ಥೆಯ ಸಿ.ಇ.ಒ	1991-95
	ಜೇಮ್ಸ್ ವುಲ್ಫೆನ್ಸನ್	ಸಾಲೊಮೊನ್ ಬ್ರದರ್ಸ್ ಕಂಪನಿ	1995-2005
	ಪಾಲ್ ವುಲ್ಫೋವಿಟ್ಜ್	1992ರಲ್ಲಿ ಅಮೆರಿಕ ಇರಾಕ್ ಮೇಲೆ ನಡೆಸಿದ ಯುದ್ಧದ ವಿನ್ಯಾಸಕ	2005-2007
	ರಾಬರ್ಟ್ ಜೋಲಿಕ್	ಅಮೆರಿಕದ ಗೃಹ ಮಂತ್ರಿ ಮತ್ತು 2007ರಿಂದ 2006ರಲ್ಲಿ ಅಮೆರಿಕದ ವಾಣಿಜ್ಯ ಮಂತ್ರಿ	

ವಿಶ್ವ ಬ್ಯಾಂಕ್ ಎಂಬ ಅಮೆರಿಕದ ನಾಲ್ಕನೇ ಸೈನ್ಯ




ಹಲವು ಪಂಡಿತರ ಪಾಲಿಗೆ ವಿಶ್ವ ಬ್ಯಾಂಕೆಂದರೆ ಬಡದೇಶಗಳಿಗೆ ಬೇಕಿದ್ದನ್ನು ಕೊಡುವ ಕಾಮಧೇನು. ಬಡದೇಶಗಳಿಗೆ ಬೇಕಾಗಿರುವ ತಂತ್ರಜ್ಞಾನ, ಬಂಡವಾಳ, ಪರಿಣತಿ ಎಲ್ಲವನ್ನೂ ಉದಾರವಾಗಿ ಒದಗಿಸಲೆಂದೇ ವಿಶ್ವ ಬ್ಯಾಂಕ್ ಎಂಬ ಸಂಸ್ಥೆಯನ್ನು ಸ್ಥಾಪಿಸಲಾಗಿದೆಯೆಂದು ಎಲ್ಲ ಬಡದೇಶಗಳ ಸರ್ಕಾರಗಳು ವಾದಿಸುತ್ತಾ ವಿಶ್ವ ಬ್ಯಾಂಕಿನ ಶರತ್ತುಗಳಿಗೆ ಒಳಪಟ್ಟು ತಾವು ತೆಗೆದುಕೊಳ್ಳುವ ಸಾಲಗಳನ್ನು ಸಮರ್ಥಿಸುತ್ತವೆ. ಭಾರತದ ಸರ್ಕಾರಗಳು ಮಾತ್ರವಲ್ಲ, ಸರ್ಕಾರಿ ಕೃಪಾಪೋಷಿತ ಬುದ್ಧಿಜೀವಿಗಳು ಮತ್ತು ಕೆಲವು ಅಮಾಯಕ ಬುದ್ಧಿಜೀವಿಗಳೂ ವಿಶ್ವ ಬ್ಯಾಂಕನ್ನು ಬಡದೇಶಗಳ ಉದ್ಧಾರಕ್ಕೆ ಜನ್ಮತಾಳಿರುವ ಕುಬೇರನ ಸಂಸ್ಥೆಯೆಂದೇ ಪ್ರಚಾರ ಮಾಡುತ್ತಾರೆ.

ಆದರೆ ವಿಶ್ವ ಬ್ಯಾಂಕಿನ ಶರತ್ತುಗಳ ಪರಿಣಾಮಗಳನ್ನು ಕಂಡ ಬಳಿಕ ಅದರಲ್ಲಿ ಕೆಲಸ ಮಾಡುತ್ತಿದ್ದ ಡೇವಿಸನ್ ಬುದ್ಧು ಚೆರಿಲ್ ಪಾಯರ್ ಹಾಗೂ ಇತ್ತೀಚಿನ ತನಕ ವಿಶ್ವ ಬ್ಯಾಂಕಿನ ಅಧ್ಯಕ್ಷನಾಗಿ ಕೆಲಸ ಮಾಡುತ್ತಿದ್ದ ಜೋಸೆಫ್ ಸ್ಟಿಗ್ಲಿಟ್ ಎಲ್ಲರೂ ಆ ಸಂಸ್ಥೆಯಿಂದ ಹೊರಬಂದು ವಿಶ್ವ ಬ್ಯಾಂಕಿನ ಅಸಲಿ ಹುನ್ನಾರಗಳನ್ನು ಜಗತ್ತಿನ ಮುಂದೆ ಎಳೆಎಳೆಯಾಗಿ ಬಿಡಿಸಿಟ್ಟಿದ್ದಾರೆ. ವಿಶ್ವ ಬ್ಯಾಂಕಿನ ಶರತ್ತುಗಳಿಂದಾಗಿ ವಿನಾಶದ ಅಂಚಿನಲ್ಲಿರುವ ಜನಸಮುದಾಯಗಳಿಗೆ ವಿಶ್ವ ಬ್ಯಾಂಕ್ ಹಾಗು ಅದರ ಹಿಂದಿನ ಸಾಮ್ರಾಜ್ಯಶಾಹಿ ಆಸಕ್ತಿಗಳ ಬಗ್ಗೆ ಮತ್ತು ವಿಶ್ವಬ್ಯಾಂಕ್ ಹಿಂದಿರುವ ಅಮೆರಿಕನ್ ಸಾಮ್ರಾಜ್ಯಶಾಹಿ ಹಿತಾಸಕ್ತಿಗಳಿಗೆ ಮಾನವೀಯ ಮುಖವಾಡವನ್ನು ತೊಡಿಸಲಾಗಿದೆ. ಆದ್ದರಿಂದ ಮೊದಲಿಗೆ ಈ ಮುಖವಾಡವನ್ನು ಕಿತ್ತೊಗೆಯುವ ಅಗತ್ಯವಿದೆ.

ವಾಸ್ತವವಾಗಿ ವಿಶ್ವಬ್ಯಾಂಕ್ ಎಂಬುದು ವಿಶ್ವದ ಬ್ಯಾಂಕೇನೂ ಅಲ್ಲ, ಬದಲಿಗೆ ಅದು ಅಮೆರಿಕನ್ ಸಾಮ್ರಾಜ್ಯಶಾಹಿ ವಿಸ್ತರಣೆಯ ಆರ್ಥಿಕ ದಾಳವಾಗಿದೆ. ವಿಶ್ವದ 183 ದೇಶಗಳು ಬ್ಯಾಂಕಿನ ಸದಸ್ಯ ರಾಷ್ಟ್ರಗಳೆಂಬುದು ನಿಜವೇ. ಆದರೆ ಅವುಗಳಿಗೆ ಬ್ಯಾಂಕಿನ ನೀತಿ ನಿರ್ಧಾರಗಳಲ್ಲಿ ಯಾವುದೇ ಪಾಲಿಲ್ಲ, ನಿರ್ಧಾರಗಳನ್ನು ತೆಗೆದುಕೊಳ್ಳಲು ವಿಶ್ವ ಬ್ಯಾಂಕಿನಲ್ಲಿ ಒಂದು ಬೋರ್ಡ್ ಇರುವುದು ನಿಜವಾದರೂ, ಆ ಬೋರ್ಡಿನಲ್ಲಿ ಎಲ್ಲಾ ದೇಶಗಳಿಗೂ ಒಂದಲ್ಲ ಒಂದು ರೀತಿಯಲ್ಲಿ ಪ್ರಾತಿನಿಧ್ಯ ವಿದ್ದರೂ, ಒಂದು ದೇಶಕ್ಕೆ ಒಂದು ಓಟು ಎಂಬ ನೀತಿ ಅಲ್ಲಿಲ್ಲ, ಬದಲಾಗಿ ಆಯಾ ದೇಶದ ಆರ್ಥಿಕತೆಯ ಗಾತ್ರವನ್ನು ಆಧರಿಸಿ ಓಟಿನ ಪ್ರಮಾಣ ತೀರ್ಮಾನವಾಗುತ್ತದೆ.





ಉದಾಹರಣೆಗೆ ವಿಶ್ವ ಬ್ಯಾಂಕಿನ ಬೋರ್ಡಿನಲ್ಲಿ ನಡೆಯುವ ಓಟಿಂಗ್‌ನಲ್ಲಿ 24 ಅರಬ್ ದೇಶಗಳನ್ನು ಒಟ್ಟು ಸೇರಿಸಿ ಕೇವಲ 2 ಓಟಾದರೆ, ಭಾರತಕ್ಕೆ ಪೂರ್ತಿ ಒಂದಂಕೆಯ ಓಟೂ ಇಲ್ಲ. ಪ್ರಪಂಚದ 160 ದೇಶಗಳನ್ನು ಒಟ್ಟು ಸೇರಿಸಿ ಶೇ.57ರಷ್ಟು ಓಟಿದ್ದರೆ ಪ್ರಪಂಚದ ಕೇವಲ 30 ದೇಶಗಳಿಗೆ ಶೇ.43 ರಷ್ಟು ಓಟಿದೆ. ಅದರಲ್ಲಿ ಅಮೆರಿಕದ ಪಾಲೇ ಶೇ. 16.4ರಷ್ಟು. ಇವು ಯಾವುವೂ ವಿಶ್ವ ಬ್ಯಾಂಕಿನಿಂದ ಸಾಲ ತೆಗೆದುಕೊಳ್ಳುವ ದೇಶಗಳಲ್ಲ, ಸಾಲ ತೆಗೆದುಕೊಳ್ಳುವ ದೇಶಗಳಿಗೆ ಸಾಲದ ರೀತಿನೀತಿಗಳ ಬಗ್ಗೆ ತೀರ್ಮಾನ ಮಾಡುವ ಯಾವುದೇ ಅಧಿಕಾರವಿಲ್ಲ, ಉದಾಹರಣೆಗೆ ಪಶ್ಚಿಮ ಆಫ್ರಿಕದ 24 ದೇಶಗಳನ್ನು ಒಟ್ಟು ಸೇರಿಸಿ ಶೇ.5.4ರಷ್ಟು ಓಟಿದೆ. ಆದರೆ ಆ ದೇಶಗಳಲ್ಲಿ ಬ್ಯಾಂಕಿನ 450ಕ್ಕೂ ಹೆಚ್ಚಿನ ಯೋಜನೆಗಳಿವೆ. ಆದರೆ ಈ ದೇಶಗಳಿಗೆ ತಮ್ಮ ದೇಶದ ಜನತೆಯ ಬದುಕಿನ ಮೇಲೆ ನೇರ ಪರಿಣಾಮ ಉಂಟು ಯೋಜನೆಗಳ ಬಗ್ಗೆ ತೀರ್ಮಾನ ಮಾಡುವ ಯಾವುದೇ ಅಧಿಕಾರವಿಲ್ಲ ಅಷ್ಟೇ.

ಅದೇರೀತಿ ಭಾರತದಲ್ಲಿರುವ ವಿಶ್ವ ಬ್ಯಾಂಕಿನ ಯೋಜನೆಗಳ ಪ್ರಧಾನ ರೂವಾರಿಗಳು ಅಮೆರಿಕನ್ನರೆ ಹೊರತು ಭಾರತೀಯರಲ್ಲ. ಏಕೆಂದರೆ ವಿಶ್ವ ಬ್ಯಾಂಕ್ ಎಂಬುದು ಅಮೆರಿಕ ಬಂಡವಾಳ ಹೂಡಿಕೆಗೆ ವಿಶ್ವದ ಗವಾಕ್ಷಗಳನ್ನು ಬಲವಂತವಾಗಿ ತೆರೆದಿಡುವ ಮತ್ತೊಂದು ಸೈನ್ಯ. ಇಲ್ಲಿ ನಡೆಯುವ ಯುದ್ಧ ಬೇರೆ ಬಗೆಯದು. ಆದ್ದರಿಂದಲೇ ವಿಶ್ವ ಬ್ಯಾಂಕ್ ಸ್ಥಾಪನೆಯಾದಾಗಿನಿಂದಲೂ ಅದರ ಅಧ್ಯಕ್ಷರಾಗುತ್ತಿರುವುದು ಅಮೆರಿಕನ್ನರೆ ಹೊರತು ಪ್ರಪಂಚದ ಯಾವುದೇ ಇತರ ದೇಶದವರಲ್ಲ. ಅಮೆರಿಕನ್ನರೆಂದರೆ ಕೇವಲ ಅಮೆರಿಕನೆಂದೂ ಅಲ್ಲ, ಒಂದೋ ಆತ ಅಮೆರಿಕದ ಸೈನಿಕ ಮಂಡಲದ ಅಧಿಕಾರಿ ಅಥವಾ ಅದರ ಆರ್ಥಿಕ ಮಂಡಲದ ಅಧಿಕಾರಿ. ಅದರ ಮೊದಲ ಅಧ್ಯಕ್ಷನಾಗಿದ್ದ ಯೂಜಿನ್ ಮೇಯರ್ ಅಮೆರಿಕದ ಬಿಸಿನೆಸ್ ಸಂಸ್ಥೆಯಾದ ಲಾಜಾರ್ಡ್ ಫೆರೇಸ್‌ನ ಪಾರ್ಟ್‌ನರ್ ಆಗಿದ್ದರೆ ಎರಡನೇ ಅಧ್ಯಕ್ಷ ಜಾನ್.ಜೆ.ಮೆಕ್ಲಾ ಯುದ್ಧ ಕಾರ್ಯದರ್ಶಿಯಾಗಿದ್ದ. ಮೂರನೆಯವ ಯೂಜಿನ್. ಆರ್.ಬ್ಲಾಕ್ ಚೇಸ್ ನ್ಯಾಷನಲ್ ಬ್ಯಾಂಕ್‌ನ ಉಪಾಧ್ಯಕ್ಷನಾಗಿದ್ದರೆ ನಾಲ್ಕನೆಯವ ಬೋಸ್ಟನ್ ಕಾರ್ಪೊರೇಷನ್ನಿನ ಅಧ್ಯಕ್ಷನಾಗಿದ್ದ ಜಾರ್ಜ್.ಡಿ.ವುಡ್ಸ್. ಐದನೆಯವನಂತೂ ಅತ್ಯಂತ ಕುಖ್ಯಾತಿ ಪಡೆದಿದ್ದ ಅಮೆರಿಕದ ರಕ್ಷಣಾ ಕಾರ್ಯದರ್ಶಿ ರಾಬರ್ಟ್ ಮ್ಯಾಕ್‌ನಮಾರ. ಆರನೆಯವ ಅಮೆರಿಕನ್ ಬ್ಯಾಂಕಿನ ಸಿ.ಇ.ಒ ಆಗಿದ್ದ ಆಲ್ಡೆನ್ ಕೌಸೆನ್, ಏಳನೆಯವ ಅಮೆರಿಕದ ಕಾಂಗ್ರೆಸ್ಸಿನ ಸದಸ್ಯನಾಗಿದ್ದ ಬಾರ್ಬರ್ .ಬಿ.ಕೊಮ್ಬಲ್, ಎಂಟನೆಯವ ಪ್ರಪಂಚದ ಕುಖ್ಯಾತ ಅಮೆರಿಕ ಶೇರು ಕಂಪನಿಯಾದ ಜೆ.ಪಿ.ಮೋರ್ಗಾನ್ ಸಂಸ್ಥೆಯ ಸಿ.ಇ.ಒ ಆಗಿದ್ದ ಲೆವಿಸ್ ಪ್ರಿಸ್ಟನ್, ಒಂಭತ್ತನೆಯವ ಸಾಲೊಮೊನ್ ಬ್ರದರ್ಸ್ ಕಂಪನಿಯ ಸದಸ್ಯನಾಗಿದ್ದ ಜೇಮ್ಸ್ ವುಲ್ಫೆನ್ಸನ್. ಹಾಗೂ ಮೊನ್ನೆ ಅವರ ಜಾಗಕ್ಕೆ ಬಂದ ಮಹಾಶಯನಾದ ಪಾಲ್ ವುಲ್ಫೋವಿಟ್ಜ್ 1992ರಲ್ಲಿ ಅಮೆರಿಕ ಇರಾಕ್ ಮೇಲೆ ನಡೆಸಿದ ಯುದ್ಧದ ವಿನ್ಯಾಸಕ.

ಇದು ವಿಶ್ವ ಬ್ಯಾಂಕಿನ ಇತಿಹಾಸ. ವಿಶ್ವ ಬ್ಯಾಂಕ್ ಈಗ ನಮ್ಮ ಬಜೆಟ್ಟಿನಲ್ಲೂ ಅಧಿಕೃತವಾಗಿ ಮೂಗು ತೂರಿಸುತ್ತಿದೆ. ಅಮೆರಿಕದ ಸೈನ್ಯ ಸಹಕಾರದ ಹೆಸರಲ್ಲಿ ಭಾರತವನ್ನು ಸುತ್ತುವರೆಯುತ್ತಿದ್ದರೆ ವಿಶ್ವ ಬ್ಯಾಂಕ್ ಆರ್ಥಿಕ ಸಹಕಾರದ ಹೆಸರಲ್ಲಿ ಭಾರತದ ಆರ್ಥಿಕತೆಯನ್ನು ಆವರಿಸುತ್ತಿದೆ. ಬ್ರಿಟಿಷರು 250 ವರ್ಷಗಳ ಹಿಂದೆ ಮಾಡಿದ್ದು ಇದನ್ನೆ, ಆಗ ಅದನ್ನು ವಸಾಹತೀಕರಣ ಎಂದು ಕರೆಯಲಾಗುತ್ತಿತ್ತು. ಈಗ ಅದನ್ನೇ ಅಮೆರಿಕದವರು ನಯವಾಗಿ ಮಾಡುತ್ತಿದ್ದರೆ ಅದನ್ನು 'ಸ್ನೇಹ ಸಹಕಾರ', '21ನೇ ಶತಮಾನದ ಮೈತ್ರಿ' ಎಂದೆಲ್ಲಾ ಕರೆಯಲಾಗುತ್ತದೆ. ಎಲ್ಲಿಯತನಕ ಇದನ್ನು ನವ ರೀತಿಯ ವಸಾಹತೀಕರಣ ಎಂದು ಅರ್ಥಮಾಡಿಕೊಳ್ಳಲಾಗುವುದಿಲ್ಲವೋ ಅಲ್ಲಿಯವರೆಗೆ ಸ್ವಾತಂತ್ರ್ಯದ ಹೆಸರಿನ ಪರಾಧೀನತೆ ಮುಂದುವರೆಯುತ್ತಲೇ ಇರುತ್ತದೆ. ●

ವಿಶ್ವಬ್ಯಾಂಕಿನ ಓಟು ಶೇರುಗಳು

ದೇಶ	ಓಟು ಶೇರು (ಶೇ.)	ನಿರ್ದೇಶಕರ ಸಂಖ್ಯೆ
ಅಮೆರಿಕ	16.4	1
ಇತರ ಜಿ-7 ದೇಶಗಳು	26.6	6
ಸಾಲ ಪಡೆಯದ ಶ್ರೀಮಂತ ದೇಶಗಳು	18.2	7
ಇತರ ಎಲ್ಲಾ ದೇಶಗಳು	38.8	10

ನೋ ಕಾಮೆಂಟ್ಸ್

"ಈ ಪೀಳಿಗೆಯವರು ಭ್ರಷ್ಟಾಚಾರ ನಿರ್ಮೂಲನೆ ಮಾಡುತ್ತಾರೆ ಎಂಬುದು ಕನಸಿನ ಮಾತು. ಭವಿಷ್ಯದ ಪೀಳಿಗೆಯಿಂದ ಅದು ಸಾಧ್ಯವಾಗಬಹುದು ಎಂಬ ಭರವಸೆ ನನಗಿದೆ."

-ಲೋಕಾಯುಕ್ತ ಸಂತೋಷ್ ಹೆಗ್ಡೆ

"ಅಭಿವೃದ್ಧಿ ಬೇಡವೆಂದು ಯಾವ ಜಿಲ್ಲೆಯವರು ಒಟ್ಟಿಗೆ ಹೇಳಿದರೂ ನಾವು ಅಲ್ಲಿಗೆ ಕೈ ಹಾಕಲ್ಲ"

-ಯಡಿಯೂರಪ್ಪ

"ಗ್ರಹಣವನ್ನು ಬರಿಗಣ್ಣಿನಿಂದ ನೋಡಬಾರದು. ಆದರೆ ಗ್ರಹಣದ ದಿನ ಟಿವಿಯನ್ನು ಬರಿಗಣ್ಣಿನಿಂದ ನೋಡುವುದು ಗ್ರಹಣವನ್ನು ನೋಡುವುದಕ್ಕಿಂತ ಅಪಾಯಕಾರಿ. ಏಕೆಂದರೆ ಎಲ್ಲಾ ಟಿವಿಗಳು ಗ್ರಹಣ ನೋಡಿದರೆ ಇಲ್ಲದ ಅಪಾಯ ಸಂಭವಿಸುತ್ತದೆ ಎಂದು ಇಲ್ಲದ ಮೂಢನಂಬಿಕೆಗಳನ್ನು ಬಿತ್ತುತ್ತಿರುತ್ತವೆ"

-ನಾಗೇಶ್ ಹೆಗಡೆ

"ಬಿಬಿಎಂಪಿ ಹಗರಣಗಳನ್ನೆಲ್ಲಾ ಬಯಲುಗೊಳಿಸುತ್ತಾ ಹೋದರೆ ಜನ ವ್ಯವಸ್ಥೆ ಬಗ್ಗೆ ವಿಶ್ವಾಸವನ್ನಾ ಕಳೆದುಕೊಂಡುಬಿಡುವ ಅಪಾಯವಿದೆ. ಹೀಗಾಗಿ ವಿರೋಧ ಪಕ್ಷಗಳು ಮತ್ತು ಮಾಧ್ಯಮಗಳು ಇಂಥವನ್ನೆಲ್ಲಾ ಇಷ್ಟೂ ಮಾಡಬಾರದು"

-ಡಾ. ಅಶ್ವತ್ಥ್‌ನಾರಾಯಣ, ಬಿಜೆಪಿ-ಎಂಎಲ್‌ಎ

ನಂಬಿದ್ರೆನಂಬಿ ಬಿಟ್ರೆಬಿಡಿ

"ಯಥಾಸ್ಥಿತಿಯನ್ನು ಉಳಿಸಿಕೊಳ್ಳಲು ಬಳಸುವ ಹಿಂಸೆಯೂ ಗಮನಿಸಬೇಕಾದದ್ದೇ! ಈ ಅರ್ಥದಲ್ಲಿ ಗಾಂಧಿ ಹಿಟ್ಲರ್‌ಗಿಂತ ಕ್ರೂರಿಯಾಗಿದ್ದರು ಎಂಬುದು ನನ್ನ ಅಭಿಪ್ರಾಯ. ಗಾಂಧಿ ಕೊಲೆಗಳನ್ನು ಬೆಂಬಲಿಸುತ್ತಿರಲಿಲ್ಲ, ಆದರೆ ಅವರು ಬ್ರಿಟಿಷ್ ಸಾಮ್ರಾಜ್ಯವಾದಿಗಳು ದೀರ್ಘಕಾಲ ಭಾರತದಲ್ಲುಳಿಯಲು ಸಹಕರಿಸಿದರು."

-ಸ್ಲಾವ್ಹೋವ್ ಜೈಜೆಕ್, ಅಮೆರಿಕದ ಎಡಪಂಥೀಯ ವಿದ್ವಾಂಸ

"ಮಾರುಕಟ್ಟೆಯ ನಿರೀಕ್ಷೆಗಳನ್ನೆಲ್ಲಾ ಹುಸಿಗೊಳಿಸಿ ಕೈಗಾರಿಕೆ ಚೇತರಿಸಿಕೊಳ್ಳುತ್ತಿದೆ. ಇದು ಆರ್ಥಿಕ ಚೇತರಿಕೆಯ ಸ್ಪಷ್ಟ ಲಕ್ಷಣವಾಗಿದೆ."

-ಆನಂದ್ ಶರ್ಮ, ಕೇಂದ್ರ ಸಚಿವ

"ನೀವು ಗೆರೆ ಎಳೆದು ಭೂಮಿಯನ್ನು ವಿಭಜನೆ ಮಾಡಿದ್ದೀರಿ. ಆದರೆ ಆಕಾಶದಲ್ಲಿ ಗೆರೆ ಎಳೆಯಲು ಸಾಧ್ಯವೇ? ಗಾಳಿಯನ್ನು ವಿಭಜಿಸಿ ಅದಕ್ಕೆ ಹಿಂದೂ ಗಾಳಿ, ಮುಸ್ಲಿಂ ಗಾಳಿ ಎಂದು ವಿಭಜಿಸಲು ಸಾಧ್ಯವೇ?"

-ಜೈನಮುನಿ ತರುಣಸಾಗರ

ಆ ಕೃಷ್ಣದೇವರಾಯನ ಕಾಲದಲ್ಲೂ ರೈತ ಭಿಕಾರಿಯೇ, ಈ ಕೃಷ್ಣದೇವರಾಯನ ಕಾಲದಲ್ಲೂ ಭಿಕಾರಿಯೇ!

"ಬಳ್ಳಾರಿಗೆ ಈಗ ದಿನಕ್ಕೆ ಏನಿಲ್ಲವೆಂದರೂ 15-16 ಹೆಲಿಕಾಪ್ಟರ್‌ಗಳು, ದೇಶ-ವಿದೇಶದ 5-6 ವಿಮಾನಗಳು ಹಾರಾಡುತ್ತವೆ. ಕೈಗಾರಿಕೋದ್ಯಮದಲ್ಲಿ ಅಸಾಮಾನ್ಯ ಸಾಧನೆ ಮಾಡಿರುವ ಜಿಂದಾಲ್, ಮಿತ್ತಲ್‌ಗಳು ಬಳ್ಳಾರಿಯತ್ತ ದೃಷ್ಟಿ ನೆಟ್ಟಿದ್ದಾರೆ. ಇದರರ್ಥ ವಿಜಯನಗರದ ಗತವೈಭವ ಮರುಕಳಿಸುತ್ತಿದೆ ಎಂದೇ ಅಲ್ಲವೇ?"

-ಜನಾರ್ದನ ರೆಡ್ಡಿ

ಹೆತ್ತವರಿಗೆ ಯಾಕೆ ಹೆಗ್ಗಣ ಮುದ್ದಾಗುತ್ತಿಲ್ಲ ಎಂಬುದೇ ಪ್ರಶ್ನೆ!

"ನೈಸ್ ನಾನು ಹೆತ್ತ ಕೂಸು ನಿಜ. ಆದರೆ ಆ ನಂತರ ಆ ಕೂಸನ್ನು ಮುದ್ದಾಡಿ ಅಡ್ಡದಾರಿಗೆ ಇಳಿಸಿದವರ್‍ಯಾರು?"

-ದೇವೇಗೌಡ

ಅಧಿಕಾರಕ್ಕಾಗಿ ಉಗಿಸಿಕೊಳ್ಳಲೂ ತಯಾರು!

"ದೇವೇಗೌಡರ ವಿರುದ್ಧ ನಾವು ದಂಗೆ ಏಳುವುದು, ಚಳವಳಿ ಮಾಡುವುದೂ ಬೇಡ. ಅವರು ನನ್ನನ್ನು ಅವಾಚ್ಯ ಶಬ್ದಗಳಿಂದ ಬೈದಿರುವುದರಿಂದ ಜನರಲ್ಲಿ ನಮ್ಮ ಬಗ್ಗೆ ಅನುಕಂಪ ಉಂಟಗಿದೆ. ಇದನ್ನೇ ಬಿಬಿಎಂಪಿ ಚುನಾವಣೆಯಲ್ಲೂ ಬಳಸಿಕೊಳ್ಳೋಣ."

-ಯಡಿಯೂರಪ್ಪ

ಇಂಥಾ 'ಸಂಶೋಧಕರು' ಇರುವವರೆಗೆ ಕನ್ನಡ ಉದ್ಧಾರವಾಗಲ್ಲ!

"ಕನ್ನಡ ಭಾಷೆಯು ಅನ್ಯ ಭಾಷೆಗಳ ಪ್ರಭಾವಕ್ಕೊಳಗಾಗದ ಅನನ್ಯ ಭಾಷೆ."

- ಚಿಮೂ

ವಿಜ್ಞಾನಕ್ಕೂ ಜನಿವಾರ ತೊಡಿಸಿದರೆ ಹೀಗೇ ಆಗುವುದು

"ಖಗ್ರಾಸ ಸೂರ್ಯ ಗ್ರಹಣದ ಹಿನ್ನೆಲೆಯಲ್ಲಿ ಈ ತಿಂಗಳ 15ರಂದು ಶಾಲಾ-ಕಾಲೇಜುಗಳಿಗೆ ರಜಾ ಘೋಷಿಸಲು ಸರ್ಕಾರ ಚಿಂತನೆ ನಡೆಸಿದೆ."


-ಪತ್ರಿಕಾ ವರದಿ

ದಲಿತರ ಜಗಳ ಧಣಿಗಳಿಗೇ ಲಾಭ!

"ಮುಸ್ಲಿಂ ಹಾಗೂ ಕ್ರೈಸ್ತರಾಗಿ ಮತಾಂತರಗೊಂಡಿರುವ ಮಂದಿಗೆ ಪರಿಶಿಷ್ಟ ಜಾತಿಯ ಸ್ಥಾನಮಾನ ನೀಡಬೇಕೆಂಬ ನ್ಯಾಯಮೂರ್ತಿ ರಂಗನಾಥ ಮಿಶ್ರಾ ಆಯೋಗದ ಶಿಫಾರಸ್ಸಿನಿಂದ ದಲಿತರಿಗೆ ಘೋರ ಅನ್ಯಾಯ ಮಾಡಿದಂತಾಗುತ್ತದೆ."

- ಮಾದಾರ ಚನ್ನಯ್ಯ ಸ್ವಾಮೀಜಿ

ರಾಜ್ಯಕ್ಕೆ ಗ್ರಹಣ ಹಿಡಿಸಿದ ಬಿಜೆಪಿ




ಕಂಡಹಾಗೆ

ಗೌರಿ ಲಂಕೇಶ್

ಈ ಸಂಚಿಕೆ ಸಂಕ್ರಾಂತಿ ದಿನದಂದೇ ಪ್ರಿಂಟ್‌ಗೆ ...ಗುತ್ತಿರುವ ಸಂದರ್ಭದಲ್ಲಿ ಕನ್ನಡಿಗರ ಮತ್ತು ...ಟಕದ ಪರಿಸ್ಥಿತಿಯ ಬಗ್ಗೆ ಯೋಚಿಸುತ್ತಿದ್ದೇನೆ. ಒಂದೆಡೆ ...ೀಣ ಪ್ರದೇಶಗಳಲ್ಲಿ ಬೆಳೆದ ಕಬ್ಬು, ಎಳ್ಳು, ...ಯಿಯಿಂದಾಗಿ ರೈತರಿಗೇನು ಹೆಚ್ಚು ಲಾಭ ಬಂದಿಲ್ಲ, ...ದೆಡೆ ಸಕ್ಕರೆ ಸೇರಿದಂತೆ ಎಲ್ಲದರ ಬೆಲೆ ಗಗನಕ್ಕೇರಿರು...ಂದ ನಗರವಾಸಿಗಳ ಕೈಗಳಿಗೂ ಅವು ಎಟುಕುತ್ತಿಲ್ಲ.

...ಂತಹ ವೈರುಧ್ಯಗಳು ಇಲ್ಲಿಗೇ ನಿಲ್ಲುವುದಿಲ್ಲ. ...-ಅಂದರೆ ಜನವರಿ 14 ರ-ದಿ ಹಿಂದೂ ಪತ್ರಿಕೆಯಲ್ಲಿ ...ಗೊಂಡಿರುವ -ಸಂಪಾದಕೀಯ ಹೀಗೆಂದು ಹೇಳುತ್ತದೆ: ...ತದ ಆರ್ಥಿಕ ಪರಿಸ್ಥಿತಿ ಚೆನ್ನಾಗಿ ಚೇತರಿಸಿಕೊಂಡಿರು...ಂದ ಅಮೆರಿಕದ ಡಾಲರ್ ಮುಂದೆ ಭಾರತದ ...ಯಿ ಗಟ್ಟಿಗೊಂಡು 45.34 ಗೆ ಏರಿದೆ." ಆದರೆ ... ಹಿಂದೂ ಪತ್ರಿಕೆಯ ಮುಖಪುಟ ವರದಿ ಹೀಗೆ ...ತ್ತದೆ: "ಡಿಸೆಂಬರ್ ತಿಂಗಳಲ್ಲಿ ಹಣದುಬ್ಬರ ಶೇ. 2...ಕ್ಕೆ ಏರಿದ್ದರಿಂದ ಸಾಮಾನ್ಯ ಜನರಿಗೆ ಅಗತ್ಯ ...ಳನ್ನು ಕೊಳ್ಳಲಾಗುತ್ತಿಲ್ಲ. ಇದರ ಬಗ್ಗೆ ಕೇಂದ್ರ ...ರ ಆತಂಕಗೊಂಡು ಪ್ರಧಾನಿ ಮನಮೋಹನ್ ... ಅವರು ಎಲ್ಲಾ ಮುಖ್ಯಮಂತ್ರಿಗಳ ಸಹಕಾರ ... ಇದೇ ತಿಂಗಳಲ್ಲಿ ತುರ್ತು ಸಭೆ ...ಲಿದ್ದಾರೆ."

...ಂತಹ ಕಷ್ಟಕರ ಪರಿಸ್ಥಿತಿಯಲ್ಲಿ ...ಸುಗ್ಗಿಯ ಹಬ್ಬವಾದ ...ತಿಯನ್ನು ...ಸುತ್ತಿರುವಾಗಲೇ ...ಾರಣೆಗಳು ...ಹಾರ ನಡೆಸಿ ...ಟ್ಯಂತರ ...ಯಿಗಳ ...ನ್ನೇ ನಡೆಸಿದ್ದಾರೆ. ...ಳೂರಿನ ...ನಗರ ...ಯಲ್ಲಿ ...ತ್ರಿಯೇ 3,248 ...ಯಿಗಳ ...ಾರಿ ಟೆಂಡರ್ ... ಮುಗಿದು ...ದೆ. ರಾಜಧಾನಿಯ ...ದ್ಧಿಗೆಂದು 19 ...ಜನೆಗಳಿಗೆ ...ಾಗಿರುವ ಈ ... ನಿಗದಿಯಲ್ಲಿ ... ಕೋಟ್ಯಂತರ ...ಕ್ಕೆ ...ಯಿಸಿರಬೇಕು, ... ದಿನಗಳಲ್ಲಿ ಇನ್ನೆಷ್ಟು ...ಗುಳುಂ



ತಿಂಡಿಪೋತ ಯಡ್ಡಿ...

ಆಗಬಹುದೆಂದು ಯೋಚಿಸಿದರೇ ಇದೆಷ್ಟು ದೊಡ್ಡ ಹಗರಣ ಎಂದು ಅರಿವಾಗುತ್ತದೆ. ಈ ಹಗರಣದ ಹಿಂದಿರುವ 'ದೇಶಪ್ರೇಮಿ' ಪಕ್ಷವಾದ ಬಿಜೆಪಿ ನಾಯಕರ ಕೈವಾಡ ಕುರಿತು ಈ ಸಂಚಿಕೆಯಲ್ಲಿ ವಿವರವಾದ ವರದಿ ಇದೆ.

ಮುಖ್ಯಮಂತ್ರಿ ಯಡಿಯೂರಪ್ಪನ ಸರ್ಕಾರದಲ್ಲಿ ಎಷ್ಟರಮಟ್ಟಿಗೆ ಜಾತಿವಾದ ಮತ್ತು ಕೋಮುವಾದ ತಾಂಡವವಾಡುತ್ತಿದೆ ಎಂಬುದನ್ನು ಈಗ ಘೋಷಿತವಾಗಿರುವ 'ಕರ್ನಾಟಕ ರತ್ನ' ಪ್ರಶಸ್ತಿಗಳೂ ಸಾರುತ್ತಿವೆ. ದೇ. ಜವರೇಗೌಡ ಓರ್ವ ಜಾತಿವಾದಿ ಮತ್ತು ಭ್ರಷ್ಟ ಎಂಬುದರ ಬಗ್ಗೆ ಯಾವ ಅನುಮಾನಗಳೂ ಇಲ್ಲ. 'ವಿಶ್ವಮಾನವ' ಸಂದೇಶ ನೀಡಿದ್ದ ಕುವೆಂಪು ಅವರನ್ನೇ ತನ್ನ ಜಾತಿವಾದಕ್ಕೆ ಬುನಾದಿಯನ್ನಾಗಿಸಿಕೊಂಡು ಬೆಳೆದ ಇಂತಹ ವ್ಯಕ್ತಿಯನ್ನು ಕೂಡ ರಾಜ್ಯದ 'ರತ್ನ'ವನ್ನಾಗಿಸಿದ್ದು ಯಡಿಯೂರಪ್ಪನ ಅಜ್ಞಾನ ಮತ್ತು ಒಕ್ಕಲಿಗರನ್ನು ಬಿಜೆಪಿ ಕಡೆಗೆ ಓಲೈಸಲು ಮಾಡಿರುವ ಹುನ್ನಾರವನ್ನು ಎತ್ತಿ ತೋರಿಸುತ್ತದೆ.

ವೀರೇಂದ್ರ ಹೆಗ್ಗಡೆ ಕೂಡ ಸಮಾಜ ಸೇವೆ ಮತ್ತು ಗ್ರಾಮೀಣಾಭಿವೃದ್ಧಿ ಎಂಬ ಮುಖವಾಡ ತೊಟ್ಟು ತನ್ನ ವೈಯಕ್ತಿಕ ಸಾಮ್ರಾಜ್ಯವನ್ನು ವಿಸ್ತರಿಸಿಕೊಂಡಿರುವ, ಬಿಜೆಪಿಯ ಕೋಮುವಾದಕ್ಕೆ ಕುಮ್ಮಕ್ಕು ಕೊಡುತ್ತಾ ಬಂದಿರುವ ಸೋಗಲಾಡಿ. ಈ ಮನುಷ್ಯನನ್ನೂ ಈಗ ರಾಜ್ಯದ 'ರತ್ನ' ಸ್ಥಾನಕ್ಕೆ ಯಡಿಯೂರಪ್ಪ ಏರಿಸಿದ್ದಾರೆ!


ಈ ಹಿಂದೆ 'ಕರ್ನಾಟಕ ರತ್ನ' ಪ್ರಶಸ್ತಿ ವಿಜೇತರಾದ ಕುವೆಂಪು ಮತ್ತು ರಾಜಕುಮಾರ್ ತರಹದವರೆಲ್ಲಿ, ಈ ದೇಜಗೌ ಮತ್ತು ವೀರೇಂದ್ರ ಹೆಗ್ಗಡೆ ಎಲ್ಲಿ?! ಈ ಕುರಿತಂತೆಯೂ ಈ ಬಾರಿ ವರದಿ ಮಾಡಿದ್ದೇವೆ.

ಇನ್ನು ಮಾಜಿ ಪ್ರಧಾನಿ ದೇವೇಗೌಡರು ಆವೇಶದ ಕ್ಷಣದಲ್ಲಿ ಉಪಯೋಗಿಸಿದ ಪದಗಳನ್ನೇ ಗುರಾಣಿ ಮಾಡಿಕೊಂಡು ಯಡಿಯೂರಪ್ಪ ರಾಜಕೀಯ ಲಾಭ ಪಡೆಯಲು ನೋಡುತ್ತಿದ್ದಾರಲ್ಲದೆ, ಆ ಮೂಲಕ ಬಿಎಂಐಸಿ ಎಂಬ ಸಾವಿರಾರು ಎಕರೆಗಳು-ಕೋಟ್ಯಂತರ ರೂಪಾಯಿಗಳ ಯೋಜನೆಯ ಹಿಂದಿರುವ ಅವ್ಯವಹಾರಗಳನ್ನು ಮರೆಮಾಡಲು ಯತ್ನಿಸುತ್ತಿದ್ದಾರೆ.

ದೇವೇಗೌಡರು ಉಪಯೋಗಿಸಿದ ಬೈಗುಳದ ಪದಪುಂಜಗಳನ್ನು ಯಾರೂ ಸಮರ್ಥಿಸಲಾಗುವುದಿಲ್ಲ ನಿಜ. ಆದರೆ ಬಿಎಂಐಸಿ ಯೋಜನೆಯಲ್ಲಿ ಕನ್ನಡದ ರೈತಾಪಿಗಳಿಗೆ ಅನ್ಯಾಯವಾಗುತ್ತಿರುವುದೂ ಅಷ್ಟೇ ನಿಜವಲ್ಲವೆ? ಬಿಜೆಪಿ ರಾಜ್ಯದಲ್ಲಿ ಅಧಿಕಾರ ಪಡೆದಾಗಿನಿಂದಲೂ ಬಿಎಂಐಸಿ ಯೋಜನೆಯ ನೈಸ್ ಕಂಪನಿ ಪರ ನಿಂತಿರುವುದು, ಆ ಕಂಪನಿಯ ಎಲ್ಲ ಅಕ್ರಮಗಳನ್ನು ಸಕ್ರಮಗೊಳಿಸುತ್ತಿರುವುದು, ನ್ಯಾಯಾಲಯಗಳ ತೀರ್ಪುಗಳು ಬಿಎಂಐಸಿ ಪರ ಬರುವಂತೆ ಷಡ್ಯಂತ್ರ ನಡೆಸಿರುವುದೂ ನಿಜವಲ್ಲವೆ?

ಕಳೆದ ಹದಿನೈದು ವರ್ಷಗಳಿಂದ ಸಾಗಿಬಂದಿರುವ ಈ ವಿವಾದಿತ ಯೋಜನೆ ಅದೆಷ್ಟು ತಿರುವುಗಳನ್ನು ಪಡೆಯುತ್ತಾ ಬಂದಿದೆ ಎಂದರೆ ಅದರ ಪೂರ್ಣ ಪಾಠ ಗೊತ್ತಿರುವುದು ಪ್ರಾಯಶಃ ದೇವೇಗೌಡರಿಗೆ ಮತ್ತು ನೈಸ್ ಕಂಪನಿಯ ಮುಖ್ಯಸ್ಥರಿಗೆ.

ಇಂತಹ ದೊಡ್ಡ ಪ್ರಮಾಣದ ಯೋಜನೆ ಬಗ್ಗೆ ಸಂಪೂರ್ಣ ಚರ್ಚೆ ಎಂದೂ ನಡೆದಿಲ್ಲ. ಸಾವಿರಾರು ರೈತರನ್ನು ಒಕ್ಕಲೆಬ್ಬಿಸಲಿರುವ ಈ ರಸ್ತೆಯ ಬಗ್ಗೆ ರೈತಾಪಿಗಳೊಂದಿಗೆ ಮಾತುಕತೆ ನಡೆದಿಲ್ಲ. ಅನ್ಯಾಯವಾದವರ ಪರವಾಗಿ ಸರ್ಕಾರ ಎಂದೂ ನಿಂತಿಲ್ಲ. ಇವತ್ತು ತಮ್ಮ ರಾಜಕೀಯ ಹಿತಾಸಕ್ತಿಯೊಂದಿಗೇ ದೇವೇಗೌಡರು ಆ ರೈತಾಪಿಗಳ ಪರ ನಿಂತಿದ್ದರೆ ಅದರಲ್ಲಿ ತಪ್ಪೇನು? ಚರ್ಚೆ ನಡೆಸಲು ಯಡಿಯೂರಪ್ಪನಿಗೆ ಹಿಂಜರಿಕೆ ಏಕೆ? ಬಿಎಂಐಸಿ



ಬಗೆಗಿನ ಸಂಪೂರ್ಣ ಮಾಹಿತಿಯನ್ನು ಸಾರ್ವಜನಿಕರ ಮುಂದೆ ಯಾಕೆ ಇಡುತ್ತಿಲ್ಲ?

ಇವತ್ತು ರಾಜ್ಯ ಸರ್ಕಾರ ಎಷ್ಟು ಅದಕ್ಷತೆಯಿಂದ ಮತ್ತು ಅವಿವೇಕದಿಂದ ಕಾರ್ಯನಿರ್ವಹಿಸುತ್ತಿದೆ ಎಂದು ನೋಡಿದರೆ ಬೇಸರವಾಗುತ್ತದೆ. ಒಂದೆಡೆ ವ್ಯಭಿಚಾರಿ ಮಂತ್ರಿ ರೇಣುಕಾಚಾರ್ಯ ಪೊಲೀಸರಿಗೆ ಸಿಗುತ್ತಿಲ್ಲ ಎಂದು ಸರ್ಕಾರ ನ್ಯಾಯಾಲಯದ ಮುಂದೆ ವಾದಿಸಿ ಒಂದು ಕೇಸ್‌ನಿಂದ ಆತ ಖುಲಾಸೆ ಆಗುವಂತೆ ಮಾಡಿದೆ. ಇನ್ನೊಂದು ಪ್ರಕರಣದಲ್ಲಿ ಪೊಲೀಸರಿಗೆ ಬೇಕಾಗಿರುವ ರಾಮಚಂದ್ರಾಪುರ ಮಠದ ಜಗದೀಶ ಶರ್ಮ ಸಾರ್ವಜನಿಕ ಸಭೆಯ ವೇದಿಕೆಯನ್ನೇರಿ ಎಲ್ಲರ ಮುಂದೆ ಮೆರೆದಿದ್ದಾನೆ. ಅಮಾಯಕ ಹುಡುಗಿಯರಿಗೆ ಲೈಂಗಿಕ ಕಿರುಕುಳ ನೀಡಿದ ಆರೋಪ ಹೊತ್ತಿರುವ ಈ ಶರ್ಮಾನನ್ನೂ ಪೊಲೀಸರು ಬಂಧಿಸಿಲ್ಲ.


ಉನ್ನತ ಶಿಕ್ಷಣದಂತಹ ಮಹತ್ವದ ಜವಾಬ್ದಾರಿ ಹೊತ್ತಿರುವ ಅರವಿಂದ ಲಿಂಬಾವಳಿ ಎಂಬ ಸಚಿವ ಎಂತಹ ಬುದ್ಧಿಹೀನನೆಂದರೆ ಸಭೆಯೊಂದರಲ್ಲಿ "ನಾನು ಹಿಂದೂ ಧರ್ಮವನ್ನು ನಂಬುತ್ತೇನೆ. ಅದರ ಪ್ರಕಾರ ಜನವರಿ 15 ರಂದು ಸೂರ್ಯಗ್ರಹಣ ಸಂಭವಿಸುವುದರಿಂದ ಆ ದಿನ ಸರ್ಕಾರಿ ಸೇವೆಗೆ ಯಾರೂ ಸೇರಬೇಡಿ" ಎಂದು ನೂತನವಾಗಿ ಉಪನ್ಯಾಸಕರಾಗಿ ನೇಮಕಗೊಂಡವರಿಗೆ ಪುಕ್ಕಟೆ ಸಲಹೆ ನೀಡಿದ್ದಾರೆ.

ನಮ್ಮ ಸಂವಿಧಾನದ ಪ್ರಕಾರ ಮೌಢ್ಯವನ್ನು ಹೋಗಲಾಡಿಸಿ, ಎಲ್ಲರಲ್ಲೂ ವೈಜ್ಞಾನಿಕ ಮನೋಭಾವ ಮೂಡುವಂತೆ ನೋಡಿಕೊಳ್ಳುವುದು ಈ ದೇಶದ ಎಲ್ಲಾ ಪ್ರಜೆಗಳ ಜವಾಬ್ದಾರಿಯಾಗಿದೆ. ಆದರೆ ಹೋಮಹವನಗಳಲ್ಲಿ ಮುಳುಗಿರುವ ಯಡ್ಡಿಯಿಂದಾಗಲಿ, ವಾಸ್ತು ನಂಬಿ ತಮ್ಮ ಸರ್ಕಾರಿ ಮನೆಗಳ ರಿಪೇರಿಗಾಗಿ ಸಾರ್ವಜನಿಕರ ಕೋಟ್ಯಂತರ ಹಣವನ್ನು ಚೆಲ್ಲಿರುವ ಚಡ್ಡಿ ಮುಖ್ಯಮಂತ್ರಿಗಳಿಂದಾಗಲಿ, ಗ್ರಹಣ ಮತ್ತು ರಾಹುಕಾಲದಂತಹ ಮೌಢ್ಯಗಳಲ್ಲಿ ನಂಬಿರುವ ಲಿಂಬಾವಳಿ ತರಹದ ಸಚಿವನಿಂದಾಗಲೀ, ಈ ರಾಜ್ಯ ಉದ್ಧಾರವಾಗಲು ಸಾಧ್ಯವೇ?

ಗ್ರಾಮೀಣ ರೈತಾಪಿಗಳ ನೆಮ್ಮದಿಯ ಹಬ್ಬವಾದ ಸಂಕ್ರಾಂತಿಯಂದು ಈ ರಾಜ್ಯಕ್ಕೆ ಬಿಜೆಪಿ ಸರ್ಕಾರವು ಗ್ರಹಣದ ರೂಪದಲ್ಲಿ ಅದೆಂತಹ ಶನಿಯಾಗಿ ವಕ್ಕರಿಸಿದೆ ನೋಡಿ....!

ಮೊಲೀಸರು ವಿದೇಶಿಯರನ್ನು ನಡೆಸಿಕೊಳ್ಳುವ ರೀತಿಯಿದು


'ರಾಷ್ಟ್ರೀಯ ಭದ್ರತೆ' ಎಂಬುದು ನಮ್ಮ ಪೊಲೀಸರಿಗೆ ತಮ್ಮ ಅಧಿಕಾರವನ್ನು ಯದ್ವಾತದ್ವಾ ಚಲಾಯಿಸುವುದಕ್ಕೆ ಸಿಕ್ಕಿರುವ ನೆಪವಾಗಿ ಪರಿವರ್ತನೆಗೊಂಡಿರುವುದು ಇಂದಿನ ವಿಪರ್ಯಾಸ. ಅದರಲ್ಲೂ ವಿದೇಶಿಯರಾದರಂತೂ ಅವರನ್ನು ನಮ್ಮ ಪೊಲೀಸರು ಯಾವುದೇ ಕಾನೂನು, ನೀತಿನಿಯಮಗಳನ್ನು ಪರಿಪಾಲಿಸದೇ ಕೊಡಬಾರದ ಹಿಂಸೆ ಕೊಟ್ಟು ಗೋಳು ಹೊಯ್ದುಕೊಳ್ಳುತ್ತಾರೆ. ವಿದೇಶಿಯರು ಕಾನೂನುಬದ್ಧವಾಗಿಯೇ ನಮ್ಮ ದೇಶವನ್ನು ಪ್ರವೇಶಿಸಿ, ಈ ನೆಲದ ಯಾವುದೇ ಕಾನೂನನ್ನು ಉಲ್ಲಂಘಿಸದೇ ಇದ್ದರೂ ರಾಷ್ಟ್ರೀಯ ಭದ್ರತೆಯ ನೆಪವೊಡ್ಡಿ ಅವರನ್ನು ಬಂಧಿಸುವ, ಸ್ವದೇಶಕ್ಕೆ ಮರಳಿಸುವ ಕೃತ್ಯಗಳನ್ನು ಪೊಲೀಸರು ಮಾಡುತ್ತಲೇ ಇರುತ್ತಾರೆ. ಅದಕ್ಕೆ ಇತ್ತೀಚಿನ ಉದಾಹರಣೆಯೆಂದರೆ ನಿತು ಸಿಂಗ್ ಬಂಧನದ ಪ್ರಕರಣ.



ನಿತು ಸಿಂಗ್ ಮೂಲತಃ ನೇಪಾಳಿ ಮೂಲದವಳು. ಆಕೆ ಭಾರತಕ್ಕೆ ಬಂದು ಪೂಣೆಯಲ್ಲಿರುವ ಫಿಲ್ಮ್ ಅಂಡ್ ಟೆಲಿವಿಷನ್ ಇನ್‌ಸ್ಟಿಟ್ಯೂಟ್ ಆಫ್ ಇಂಡಿಯಾದಲ್ಲಿ ಅಂತಿಮ ವರ್ಷದ ಡಿಗ್ರಿ ಓದುತ್ತಿದ್ದಳು. ಹಾಗೆ ನೋಡಿದರೆ ಆಕೆ ಕಾನೂನು ಬದ್ಧವಾಗಿಯೇ ಈ ದೇಶವನ್ನು ಪ್ರವೇಶಿಸಿ, ಈ ನೆಲದ ಕಾನೂನನ್ನು ಎಲ್ಲೂ ಮುರಿಯದೇ ತನ್ನ ಪಾಡಿಗೆ ತಾನು ಓದಿಕೊಂಡಿದ್ದಳು. 2009ರ ಡಿಸೆಂಬರ್ 5ರಂದು ಆಕೆಯಿದ್ದ ಹಾಸ್ಟೆಲ್‌ಗೆ ನುಗ್ಗಿದ ಪೊಲೀಸರು ಯಾವುದೇ ವಾರೆಂಟ್ ಇಲ್ಲದೇ, ಮುನ್ಸೂಚನೆಯನ್ನೂ ಕೊಡದೆ ಆಕೆಯನ್ನು ಬಂಧಿಸಿ ಕರೆದುಕೊಂಡು ಹೋದರು. ಮುಂಬೈನಲ್ಲಿ ಒಂದು ದಿನ ಇಟ್ಟುಕೊಂಡು ಆಕೆಯ ಪೂರ್ವಾಪರಗಳನ್ನು ಕಲೆಹಾಕಿ ಮರುದಿನವೇ ಆಕೆಯನ್ನು ನೇಪಾಳಕ್ಕೆ ಓಡಿಸಿಬಿಟ್ಟರು.

ವಿದೇಶಿ ಪ್ರಜೆಗಳನ್ನು ಬಲವಂತವಾಗಿ ಅವರ ದೇಶಕ್ಕೆ ವಾಪಾಸ್ಸು ಕರೆದೊಯ್ದು ಅಲ್ಲಿನ ಸರ್ಕಾರದ ವಶಕ್ಕೆ ಒಪ್ಪಿಸುವ ಅಧಿಕಾರವನ್ನು ನಮ್ಮ ಪೊಲೀಸರಿಗೆ ವಿದೇಶಿಯರ ಕಾಯ್ದೆ ಸೆಕ್ಷನ್ 3 (2) (ಸಿ) ಒದಗಿಸುತ್ತದೆ. ಆದರೂ ಹಾಗೆ ಮಾಡುವ ಮೊದಲು ಸಾಮಾನ್ಯವಾಗಿ ಅದರ ಹಿಂದಿರುವ ಕಾರಣಗಳನ್ನು ಒದಗಿಸಲಾಗುತ್ತದೆ. ಉದಾಹರಣೆಗೆ ವಿದೇಶಿಯರು ಕಾನೂನುಬಾಹಿರವಾಗಿ ದೇಶ ಪ್ರವೇಶಿಸಿರಬೇಕು, ವೀಸಾ ಅವಧಿ ಮುಗಿದ ಮೇಲೂ ಸ್ವದೇಶಕ್ಕೆ ವಾಪಾಸ್ಸಾಗದೇ ಇಲ್ಲೇ ಉಳಿದುಕೊಂಡಿರಬೇಕು, ಅವರು ಈ ನೆಲದಲ್ಲಿ ಯಾವುದಾದರೂ ಅಪರಾಧವೆಸಗಿ ಶಿಕ್ಷೆಗೆ ಗುರಿಯಾಗಿದ್ದರೆ ಶಿಕ್ಷಾ ಅವಧಿ ಮುಗಿದಿರಬೇಕು ಅಥವ ಅವರು ಈ ದೇಶದಲ್ಲಿದ್ದರೆ ದೇಶದ ಕಾನೂನು ಸುವ್ಯವಸ್ಥೆಗೆ ಧಕ್ಕೆ ಬರುತ್ತದೆಂದು ಯಾವುದಾದರೂ ಮಂತ್ರಿಗೆ ಅನ್ನಿಸಿರಬೇಕು. ಅಂಥ ಸಂದರ್ಭದಲ್ಲಿ ಬಲವಂತವಾಗಿ ಕಳಿಸಿಕೊಡಲಾಗುತ್ತದೆ.

ಆದರೆ, ನಿತು ವಿಚಾರದಲ್ಲಿ ಅದ್ಯಾವುದೂ ಆಗಿರಲಿಲ್ಲ. ಆದರೂ ಆಕೆಯನ್ನು ಬಂಧಿಸಿ ನೇಪಾಳಕ್ಕೆ ಕಳಿಸಿಕೊಡಲಾಯಿತು. ಆಕೆಯ ಬಂಧನದ ವಿಚಾರ ಗೌಪ್ಯವಾಗಿಯೇ ಇತ್ತು, ಆದರೂ ಆಂಗ್ಲ ಪತ್ರಿಕೆಯೊಂದು ಅದನ್ನು ಹೇಗೋ ಬಹಿರಂಗಗೊಳಿಸುವಲ್ಲಿ ಯಶಸ್ವಿಯಾದ್ದರಿಂದ ಆಕೆಯನ್ನು ಯಾಕೆ ಬಂಧಿಸಲಾಯಿತು ಎಂಬ ವಿವರಣೆಯನ್ನು ಕೊಡುವುದು ಪೊಲೀಸರಿಗೂ ಅನಿವಾರ್ಯವಾಯಿತು. ಅಸಲಿಗೆ ಆಕೆ ಯಾವ ತಪ್ಪನ್ನೂ ಮಾಡಿರದಿದ್ದರಿಂದ ಕಾರಣ ಕೊಡುವುದು ಪೊಲೀಸರಿಗೆ ಕಷ್ಟವಾಯಿತು. ತಕ್ಷಣ ಅವರು ಮೊರೆ ಹೊಕ್ಕಿದ್ದು 'ರಾಷ್ಟ್ರೀಯ ಭದ್ರತೆ' ಎಂಬ ನೆಪವನ್ನು! ಪೂಣೆ ಪೊಲೀಸರು 'ಆಕೆ ದೇಶವಿರೋಧಿ ಚಟುವಟಿಕೆಯಲ್ಲಿ ತೊಡಗಿದ್ದಳು. ಹಾಗಾಗಿ ಬಂಧಿಸಿ ಅವರ ದೇಶಕ್ಕೆ ಕರೆದೊಯ್ದು ಬಿಡಲಾಯಿತು' ಎಂದಷ್ಟೇ ಹೇಳಿ ಕೈತೊಳೆದುಕೊಂಡರು. ಆದರೆ, ಯಾವ ರೀತಿಯಲ್ಲಿ ಆಕೆ ರಾಷ್ಟ್ರವಿರೋಧಿ ಚಟುವಟಿಕೆಗಳಲ್ಲಿ ತೊಡಗಿದ್ದಾಳೆಂಬುದನ್ನಾಗಲೀ, ಈ ನೆಲದ ಯಾವ ಕಾನೂನನ್ನು ಆಕೆ ಹೇಗೆ ಉಲ್ಲಂಘಿಸಿದ್ದಾಳೆಂಬುದನ್ನಾಗಲೀ ಯಾರೂ ವಿವರಿಸಲಿಲ್ಲ. ನಗರದ ಡೆಪ್ಯೂಟಿ ಪೊಲೀಸ್ ಕಮೀಷನರ್ (ಸ್ಪೆಷಲ್ ಬ್ರಾಂಚ್) ಅವರನ್ನು ಕೇಳಿದರೆ 'ನಿತು ಸಿಂಗ್ ದೇಶವಿರೋಧಿ ಚಟುವಟಿಕೆಗಳಲ್ಲಿ ತೊಡಗಿದ್ದಳಾದ್ದರಿಂದ ಆಕೆಯನ್ನು ನೇಪಾಳಕ್ಕೆ ಕಳುಹಿಸಲಾಗಿದೆ. ಇದು ಅತ್ಯಂತ ಉನ್ನತ ಮಟ್ಟದ ಗೌಪ್ಯ ಕಾರ್ಯಾಚರಣೆ. ಇದರಲ್ಲಿ ಅನೇಕ ಭದ್ರತಾ ಮತ್ತು ಗೂಢಚರ್ಯೆ ಏಜೆನ್ಸಿಗಳು ಭಾಗಿಯಾಗಿವೆ. ವಿವರಗಳನ್ನು ಕೊಡಲಾಗುವುದಿಲ್ಲ' ಎಂದಷ್ಟೇ ಹೇಳಿ ಸುಮ್ಮನಾದರು. ಆಕೆ ನಿಜಕ್ಕೂ ದೇಶವಿರೋಧಿ ಚಟುವಟಿಕೆಗಳಲ್ಲಿ ತೊಡಗಿದ್ದರೆ ಆಕೆಯ ಮೇಲೆ ಯಾಕೆ ಕ್ರಿಮಿನಲ್ ಕೇಸು ಹೂಡಲಿಲ್ಲ? ಯಾಕೆ ನ್ಯಾಯಾಲಯದಲ್ಲಿ ವಿಚಾರಣೆ ನಡೆಸುವುದಕ್ಕೆ ಅವಕಾಶ ಕೊಡಲಿಲ್ಲ? ಒಂದೇ ದಿನದಲ್ಲಿ ಯಾಕೆ ನೇಪಾಳಕ್ಕೆ ಕಳುಹಿಸಿ ಕೊಡಲಾಯಿತು? ಈ ಯಾವ ಪ್ರಶ್ನೆಗಳಿಗೂ ಮುಂಬೈ ಪೊಲೀಸರ ಬಳಿ ಉತ್ತರವಿಲ್ಲ. ಇದನ್ನು ಕೆದಕುತ್ತಾ ಹೋದರೆ ಬೇರೆಯದೇ ಅಸಲೀ ಚಿತ್ರಣ ತೆರೆದುಕೊಳ್ಳುತ್ತದೆ.



ಕುಮಾರ್ ಬುರಡಿಕಟ್ಟಿ


ವಾಸ್ತವದಲ್ಲಿ ನಿತುಸಿಂಗ್ ನೇಪಾಳಿ ಚುನಾಯಿತ ಸಂವಿಧಾನ ಸಭೆಯ ಸದಸ್ಯರಾದ ಅಮರೇಶ್ ಸಿಂಗ್ ಅವರ ಪತ್ನಿ. ಅಮರೇಶ್ ಸಿಂಗ್ ನೇಪಾಳಿ ಕಾಂಗ್ರೆಸ್ ಪಕ್ಷದ ಉನ್ನತ ನಾಯಕರಲ್ಲಿ ಒಬ್ಬ ಕೂಡ. ಅಲ್ಲದೇ ನೇಪಾಳದಲ್ಲಿ ರಾಜಕೀಯ ಅಸ್ಥಿರತೆಯುಂಟಾದಾಗ ತನ್ನ ಪಕ್ಷ, ಯುನೈಟೆಡ್ ಕಮ್ಯೂನಿಸ್ಟ್ ಪಾರ್ಟಿ (ಮಾವೋವಾದಿ) ಹಾಗೂ ಭಾರತ ಸರ್ಕಾರಗಳ ನಡುವೆ ಚರ್ಚೆಗಳ ಸಂದರ್ಭದಲ್ಲಿ ಮಧ್ಯವರ್ತಿಯಾಗಿ ಕೆಲಸ ಮಾಡಿದವರು. ಈ ಬಿಕ್ಕಟ್ಟಿನಲ್ಲಿ ಭಾರತದ ಗೂಢಚರ್ಯೆ ಸಂಸ್ಥೆ ರಾ (Research and Analysis Wing - RAW) ಕುತ್ತಿಗೆಯ ತನಕ ಭಾಗವಹಿಸಿತ್ತಾದ್ದರಿಂದ ರಾ ಅಧಿಕಾರಿಗಳಿಗೂ ಅಮರೇಶ್ ಸಿಂಗ್‌ಗೂ ಬಹಳ ನಿಕಟ ಬಾಂಧವ್ಯ ಏರ್ಪಟ್ಟಿತ್ತು. ಅಮರೇಶ್ ಸಿಂಗ್ ಮತ್ತು ಆತನ ಪತ್ನಿ ನಿತುಳ ನಡುವೆ ವಿರಸವೇರ್ಪಟ್ಟಿದ್ದರಿಂದ ಅವರಿಬ್ಬರೂ ಕಳೆದೊಂದು ವರ್ಷದಿಂದ ಬೇರೆಯಾಗಿಯೇ ಇದ್ದರು. ಅಮರೇಶ್ ಸಿಂಗ್ ಈಗ ತನಗಿದ್ದ ಅಧಿಕಾರ ಮತ್ತು ರಾ ಅಧಿಕಾರಿಗಳ ಸಂಪರ್ಕ ಬಳಸಿಕೊಂಡು ಆಕೆಯನ್ನು ಬಲವಂತವಾಗಿ ನೇಪಾಳಕ್ಕೆ ಕರೆಸಿಕೊಂಡಿದ್ದಾನೆ. ನಮ್ಮ ಪೊಲೀಸರು ಅದನ್ನು ತಿರುಚಿ ಆಕೆ ರಾಷ್ಟ್ರವಿರೋಧಿ ಚಟುವಟಿಕೆಗಳಲ್ಲಿ ತೊಡಗಿರುವ ಹಣೆಪಟ್ಟಿ ಹಚ್ಚಿ ಕಳಿಸಿಕೊಟ್ಟಿದ್ದಾರೆ.

ಈ ವಿಚಾರವನ್ನು ಕೆಲವು ಸಂಘಸಂಸ್ಥೆಗಳು, ಮಹಿಳಾ ಸಂಘಟನೆಗಳು ಕೇಂದ್ರ ಗೃಹ ಸಚಿವಾಲಯದ ತನಕ ತೆಗೆದುಕೊಂಡು ಹೋಗಿದ್ದರಿಂದ ಈಗ ಗೃಹ ಸಚಿವ ಪಿ.ಚಿದಂಬರಂ 'ತನಿಖೆ'ಗೆ ಆದೇಶಿಸಿದ್ದಾರೆ. ವಾಸ್ತವ ಏನೆಂದರೆ ಈದರಲ್ಲಿ Research and Analysis Wing - RAW, Aviation Research Centre ಮತ್ತು National Technical Research Organisation ಮುಂತಾದ ಗೂಢಚರ್ಯೆ ಸಂಸ್ಥೆಗಳು ನೇರವಾಗಿ ಭಾಗವಹಿಸಿವೆ. ಅವ್ಯಾವೂ ಕೇಂದ್ರ ಗೃಹ ಸಚಿವಾಲಯದ ಅಡಿಯಲ್ಲಿ ಕಾರ್ಯನಿರ್ವಹಿಸುವುದಿಲ್ಲ, ಅವೆಲ್ಲಾ ನೇರವಾಗಿ ಪ್ರಧಾನ ಮಂತ್ರಿಗಳ ಸಚಿವಾಲಯ, ರಾಷ್ಟ್ರೀಯ ಭದ್ರತಾ ಸಲಹೆಗಾರ ಹಾಗೂ ಕ್ಯಾಬಿನೆಟ್ ಕಾರ್ಯಕಾರಿ ಮಂಡಳಿಗಳ ಅಡಿಯಲ್ಲಿ ಕಾರ್ಯ ನಿರ್ವಹಿಸುತ್ತವೆ. ತಿಂಗಳುಗಟ್ಟಲೇ, ವರ್ಷಗಟ್ಟಲೇ ತನಿಖೆ ನಡೆದ ಮೇಲೆ "ಅದು ಗೃಹ ಸಚಿವಾಲಯದ ಅಡಿಯಲ್ಲಿ ಬರುವುದಿಲ್ಲ" ಎಂಬ ವರದಿ ಬರುತ್ತದೆ. ಅಷ್ಟುಹೊತ್ತಿಗೆ ಈ ವಿಚಾರ ಇನ್ನೂ ಬಿಸಿಯಾಗಿದ್ದರೆ ಸಂಬಂಧಪಟ್ಟ ಇಲಾಖೆಯಿಂದ ತನಿಖೆಗೆ ಆದೇಶ ಬರುತ್ತದೆ. ಅವೆಲ್ಲಾ ತನಿಖೆ ನಡೆಸಿ ವರದಿ ಸಲ್ಲಿಸುವಷ್ಟರಲ್ಲಿ ನಿತುಸಿಂಗ್ ಮುದುಕಿಯಾಗಿರುತ್ತಾಳೆ! ಇದು ನಮ್ಮ ರಾಜಕೀಯ ವ್ಯವಸ್ಥೆ! ●


2010ರ ಮಹಾನ್ ಸುಳ್ಳು!

2010ನೇ ವರ್ಷದ ಮಹಾನ್ ಸುಳ್ಳು ಯಾವುದೆಂದು ಪತ್ತೆ ಹಚ್ಚುವುದಕ್ಕೆ ಸ್ಪರ್ಧೆಯನ್ನೇನಾದರೂ ಏರ್ಪಡಿಸಿದರೆ ಅದರಲ್ಲಿ ಇಂಡಿಯನ್ ಎಕ್ಸ್‌ಪ್ರೆಸ್ ಎಂಬ ಆಂಗ್ಲ ಪತ್ರಿಕೆ ಹೇಳಿರುವ "ವಿದರ್ಭಾದಲ್ಲಿ ರೈತರ ಆತ್ಮಹತ್ಯೆಗಳು ಕಡಿಮೆಯಾಗಿರುವುದಕ್ಕೆ ಬಿಟಿ ಹತ್ತಿ ಕಾರಣ" ಎಂಬ ಸುಳ್ಳೇ ಪ್ರಥಮ ಸ್ಥಾನ ಗಳಿಸಬಹುದೇನೋ?

ಇಂಡಿಯನ್ ಎಕ್ಸ್‌ಪ್ರೆಸ್ ಪತ್ರಿಕೆ ತನ್ನ ಜನವರಿ 9ರ ಸಂಚಿಕೆಯಲ್ಲಿ ಮಹಾರಾಷ್ಟ್ರದ ವಿದರ್ಭಾ ಪ್ರಾಂತ್ಯದಲ್ಲಿ ಕಳೆದ ನಾಲ್ಕು ವರ್ಷಗಳಲ್ಲಿ ಇದೇ ಮೊದಲ ಬಾರಿಗೆ ಒಂದು ಸಾವಿರಕ್ಕಿಂತ ಕಡಿಮೆ ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆಂದು ವರದಿ ಮಾಡಿದೆ. 2006ನೇ ಇಸ್ವಿಗೆ ಹೋಲಿಸಿದರೆ ಇದು ಶೇ.34ರಷ್ಟು ಕಡಿಮೆಯಾಗಿದ್ದು ಇದಕ್ಕೆ ಮೂರು ಪ್ರಧಾನ ಕಾರಣಗಳನ್ನು ಕೊಟ್ಟಿದೆ: ರೈತರ ಮೇಲಿದ್ದ 1300 ಕೋಟಿ ರೂಪಾಯಿಗಳ ಸಾಲವನ್ನು ಮನ್ನಾ ಮಾಡಿದ್ದು, ರೈತರು ಬಿಟಿ ಹತ್ತಿಯನ್ನು ಬೆಳೆಯಲು ಪ್ರಾರಂಭಿಸಿದ್ದು ಹಾಗೂ ಮಾರುಕಟ್ಟೆಯಲ್ಲಿ ರೈತರ ಬೆಳೆಗಳಿಗೆ ಸೂಕ್ತ ಬೆಲೆ ಸಿಕ್ಕಿದ್ದು. ಮೊದಲನೇ ಮತ್ತು ಮೂರನೇ ಕಾರಣಗಳ ನಡುವೆ ಬಿಟಿ ಹತ್ತಿಯ ಕಾರಣವನ್ನು ಬಹಳ ಚಾಣಾಕ್ಷತನದಿಂದ ತುರುಕಲಾಗಿದೆ! ಇನ್ನೂ ಸ್ಪಷ್ಟವಾಗಿ ಹೇಳಬೇಕೆಂದರೆ, ವಿದರ್ಭಾ ಪ್ರಾಂತ್ಯದಲ್ಲಿ ರೈತರ ಆತ್ಮಹತ್ಯೆಗಳು ಹೆಚ್ಚಾಗುವುದಕ್ಕೆ ಇರುವ ಪ್ರಮುಖ ಕಾರಣಗಳಲ್ಲಿ ರೈತರು ಬಿಟಿ ಹತ್ತಿಯನ್ನು ಅನಿವಾರ್ಯವಾಗಿ ಬೆಳೆಯಬೇಕಿರುವ ದುಸ್ಥಿತಿಯನ್ನು ತಂದಿಟ್ಟಿರುವುದೂ ಒಂದು. ಈಗ ಅದನ್ನೇ ಆತ್ಮಹತ್ಯೆಗಳ ನಿವಾರಕ, ರೈತರೋದ್ಧಾರಕ ಎಂದು ಇಂಡಿಯನ್ ಎಕ್ಸ್‌ಪ್ರೆಸ್ ಪತ್ರಿಕೆ ಬಿಂಬಿಸುತ್ತಿದೆ. ಇದು ಬಿಟಿ ಹತ್ತಿಗೆ ಹತ್ತಿರುವ 'ರೈತನಾಶಕ' ಎಂಬ ಕಳಂಕವನ್ನು ತೊಡೆದು ಹಾಕಿ, ಅದರ ಮಾರುಕಟ್ಟೆಯನ್ನು ವಿಸ್ತರಿಸುವುದಕ್ಕಾಗಿ ನಡೆಸುತ್ತಿರುವ ಹುನ್ನಾರವಲ್ಲದೇ ಮತ್ತೇನಲ್ಲ.




ಮಹಾರಾಷ್ಟ್ರದ ನಾಗಪೂರ್ ಡಿವಿಜನ್‌ನ ಭಂಡಾರ, ಚಂದ್ರಪೂರ್, ಗಡ್ಚಿರೋಲಿ, ಗೋಂದಿಯ, ನಾಗಪುರ್, ವಾರ್ಧಾ ಜಿಲ್ಲೆಗಳು ಹಾಗೂ ಅಮ್ರಾವತಿ ಡಿವಿಜನ್‌ನ ಅಕೋಲ, ಅಮ್ರಾವತಿ, ಬುಲ್ದಾನ, ವಾಶಿಮ ಮತ್ತು ಯವತ್ಮಾಲ್ ಜಿಲ್ಲೆಗಳನ್ನೊಳಗೊಂಡ ವಿಶಾಲ ವಿದರ್ಭಾ ಪ್ರದೇಶ ಇತ್ತೀಚಿನ ವರ್ಷಗಳಲ್ಲಿ ತುಂಬಾ ಹೆಸರುವಾಸಿಯಾಗಿರುವುದು ರೈತರ ಆತ್ಮಹತ್ಯೆಗಳಿಗೆ. ಕಿತ್ತು ತಿನ್ನುವ ಬಡತನ, ನಿರುದ್ಯೋಗ, ಹಿಂದುಳಿದಿರುವಿಕೆ ಮುಂತಾದವುಗಳ ಜೊತೆಗೆ ರೈತರ ಆತ್ಮಹತ್ಯೆಗಳೂ ಸೇರಿಕೊಂಡು ಆ ಪ್ರಾಂತ್ಯವನ್ನು ಅಕ್ಷರಶಃ ಭೂಮಿಯ ಮೇಲಿನ ನರಕವನ್ನಾಗಿ ಮಾಡಿಟ್ಟಿವೆ. ರೈತರ ಆತ್ಮಹತ್ಯೆಗಳಿಗೆ ಪ್ರಧಾನವಾಗಿ ಕಾರಣವಾಗಿರುವ ಅಂಶಗಳೆಂದರೆ ಬೆಳೆದ ಬೆಲೆಗೆ ಮಾರುಕಟ್ಟೆಯಲ್ಲಿ ಸೂಕ್ತ ಬೆಲೆ ಸಿಗದಿರುವುದು, ಸರ್ಕಾರದಿಂದ ಸಬ್ಸಿಡಿ, ಕಡಿಮೆ ಬಡ್ಡಿದರದಲ್ಲಿ ಸಾಲಸೌಲಭ್ಯಗಳಂಥ ಯಾವುದೇ ಸಹಾಯಹಸ್ತ ಸಿಗದಿರುವುದು ಹಾಗೂ ಬಿಟಿ ಹತ್ತಿ.



ಬಿಟಿ ಹತ್ತಿ ಬಗ್ಗೆ ಕಳೆದ ಹತ್ತು ವರ್ಷಗಳಿಂದ ಭಾರಿ ಚರ್ಚೆ ನಡೆಯುತ್ತಿದೆ. ಬೀಜ ಮಾರುಕಟ್ಟೆಯಲ್ಲಿ ಏಕಸ್ವಾಮ್ಯ ಸಾಧಿಸುವುದಕ್ಕಾಗಿ ರೈತ ವಿರೋಧಿಯಾಗಿರುವ ಈ ವಿಷಕಾರಿ ಬೀಜವನ್ನು ಮಾರಾಟ ಮಾಡಲಾಗುತ್ತಿದೆ, ಅದನ್ನು ನಿಷೇಧಿಸಬೇಕೆಂದು ಹತ್ತಾರು ರೈತ ಸಂಘಟನೆಗಳು, ಪ್ರಗತಿಪರ ಬುದ್ಧಿಜೀವಿಗಳು ಸರ್ಕಾರದೊಂದಿಗೆ ಜಗಳವಾಡುತ್ತಲೇ ಬಂದಿದ್ದಾರೆ. ಕರ್ನಾಟಕದಲ್ಲೂ ನಂಜುಂಡಸ್ವಾಮಿಯವರ ನೇತೃತ್ವದಲ್ಲಿ ರೈತ ಸಂಘ ದೊಡ್ಡ ಮಟ್ಟದ ಹೋರಾಟ ನಡೆಸಿತ್ತು, ಆದರೆ ಈ ಯಾವ ಕೂಗಿಗೂ ಕಿವಿಗೊಡದ ಸರ್ಕಾರ ಅದಕ್ಕೆ ಅನುಮತಿ ಕೊಟ್ಟಿದೆ. ಪರಿಣಾಮವಾಗಿ ರೈತರು ಈಗ ಬೀಜ ಸ್ವಾತಂತ್ರ್ಯವನ್ನು ಕಳೆದುಕೊಂಡು ಬಿಟಿ ಹತ್ತಿಯ ದಾಸರಾಗಬೇಕಾಗಿ ಬಂದಿದೆ.

ವಿದರ್ಭಾ ಪ್ರಾಂತ್ಯ ಹತ್ತಿ ಬೆಳೆಗೆ ಸೂಕ್ತವಾಗಿರುವುದರಿಂದ ಬಹುತೇಕ ರೈತರು ಪಾರಂಪರಿಕವಾಗಿ ಹತ್ತಿಯನ್ನೇ ತಮ್ಮ ಮೂಲ ಬೆಳೆಯನ್ನಾಗಿ ಮಾಡಿಕೊಂಡು ಬಂದಿದ್ದರು. ಅಲ್ಲಿಗೆ ಲಗ್ಗೆಯಿಟ್ಟಿರುವ ಬಿಟಿ ಹತ್ತಿ ರೈತರು ಬಿತ್ತುತ್ತಿದ್ದ ಪಾರಂಪರಿಕ ಹತ್ತಿಬೀಜಗಳನ್ನು ಮಾರುಕಟ್ಟೆಯಿಂದ ಓಡಿಸಿ ಏಕಸ್ವಾಮ್ಯ ಸಾಧಿಸಿದೆ. ಭಾರಿ ಇಳುವರಿ ಬರುತ್ತೆ, ಖರ್ಚು ಕಡಿಮೆ, ಪರಿಸರ ಸ್ನೇಹಿ ಎಂದೆಲ್ಲಾ ರೈತರನ್ನು ನಂಬಿಸಿ ಬಿಟಿ ಹತ್ತಿಯನ್ನು ವ್ಯವಸ್ಥಿತವಾಗಿ ಮಾರಾಟ ಮಾಡಲಾಯಿತು. ಇವೊತ್ತು ಪರಿಸ್ಥಿತಿ ಎಲ್ಲಿಗೆ ಹೋಗಿದೆಯೆಂದರೆ ವಿದರ್ಭಾ ಪ್ರಾಂತ್ಯದಲ್ಲಿ ನೀವು ಯಾವುದೇ ಆಗ್ರೋ ಅಂಗಡಿಗೆ ಹೋದರೂ ಬೇರೆ ಹತ್ತಿ ಬೀಜಗಳು 100 ಗ್ರಾಮ್‌ಗಿಂತ ಹೆಚ್ಚು ಸಿಗುವುದಿಲ್ಲ. ಹೀಗಾಗಿ, ರೈತರು ಅನಿವಾರ್ಯವಾಗಿ ಬಿಟಿ ಹತ್ತಿ ಬೀಜಗಳನ್ನೇ ಖರೀದಿಸಿ ಬೆಳೆಯಬೇಕಾದ ದುಸ್ಥಿತಿ ಬಂದೊದಗಿದೆ. ಸಾಲಸೋಲ ಮಾಡಿ ಬಿಟಿ ಹತ್ತಿ ಖರೀದಿಸಿ ಬಿತ್ತಿ, ಅದನ್ನು ಬೆಳೆಸುವುದಕ್ಕಾಗಿ ಅಪಾರ ದುಡ್ಡು ಖರ್ಚು ಮಾಡಿದರೂ ಕಂಪೆನಿ ಹೇಳಿದಂತೆ ಸರಿಯಾದ ಇಳುವರಿಯೇ ಬರುತ್ತಿಲ್ಲ. ಪರಿಣಾಮವಾಗಿ ರೈತರು ಸಾಲದ ಶೂಲಕ್ಕೆ ಸಿಕ್ಕು ಹತಾಶೆಯಿಂದ ನೇಣಿಗೆ ಕೊರಳೊಡ್ಡುತ್ತಿದ್ದಾರೆ. ಉದಾಹರಣೆಗೆ, ವಿದರ್ಭಾ ಪ್ರಾಂತ್ಯದ ಮುಕುತ್ಬಾನ್ ಎಂಬ ಹಳ್ಳಿಯಲ್ಲಿ ಐವತ್ತೈದು ವರ್ಷದ ಲಕ್ಷ್ಮಣ್ ಚೆಲ್ಪೆಲ್ವಿಯಾರ್ ಎಂಬ ರೈತ ತನ್ನ ಆರು ಎಕರೆ ಜಮೀನಿನಲ್ಲಿ ಬಿಟಿ ಹತ್ತಿ ಬಿತ್ತಿ 50,000 ರೂಪಾಯಿ ಖರ್ಚು ಮಾಡಿ ಬೆಳೆದರೆ ಆತನಿಗೆ ಸಿಕ್ಕಿದ್ದು ಕೇವಲ ಹದಿನೈದು ಸಾವಿರ ರೂಪಾಯಿ! ಹಿಂದುಮುಂದು ನೋಡದೇ ಆತ ಕಳೆದ ವರ್ಷ ಕೀಟನಾಶಕ ಕುಡಿದು ಆತ್ಮಹತ್ಯೆ ಮಾಡಿಕೊಂಡ. ಅಷ್ಟೇ ಅಲ್ಲ, ಆ ಬೀಜದಲ್ಲಿರುವ ವಿಷಕಾರಿ ಅಂಶ ಅನೇಕರೈತರ, ಜಾನುವಾರುಗಳ ಜೀವವನ್ನೇ ಬಲಿತೆಗೆದುಕೊಂಡಿದೆ. ಕಳೆದ ವರ್ಷ ಜೂನ್‌ನಲ್ಲಿ ಆಂಧ್ರಪ್ರದೇಶದ ನಾಲ್ಕು ಹಳ್ಳಿಗಳಲ್ಲಿ ಬಿಟಿ ಹತ್ತಿಯನ್ನು ತಿಂದ ಸುಮಾರು 1800 ಕುರಿಗಳು ಸತ್ತುಹೋಗಿದ್ದನ್ನಿಲ್ಲಿ ನೆನಪಿಸಿಕೊಳ್ಳಬಹುದು. ಬಿಟಿ ಹತ್ತಿಯು ಅಕ್ಕಪಕ್ಕದ ಬೇರೆ ಬೆಳೆಗಳನ್ನೂ ನಾಶಪಡಿಸುವುದರಿಂದ ಅನಿವಾರ್ಯವಾಗಿ ಎಲ್ಲರೂ ಅದನ್ನೇ ಬೆಳೆಯಬೇಕಾದ ಪರಿಸ್ಥಿತಿ ಏರ್ಪಟ್ಟಿದೆ. ದೇಶದಲ್ಲಿ ಅತ್ಯಂತ ಹೆಚ್ಚು ಬಿಟಿ ಹತ್ತಿ ಬೆಳೆಯುತ್ತಿರುವುದು ವಿದರ್ಭಾ ಪ್ರಾಂತ್ಯದಲ್ಲೇ. ಅಂತೆಯೇ ದೇಶದಲ್ಲಿ ಅತಿ ಹೆಚ್ಚು ಆತ್ಮಹತ್ಯೆಗಳಾಗುತ್ತಿರುವುದೂ ವಿದರ್ಭಾದಲ್ಲೇ!

ಈಗ ವಿದರ್ಭಾದಲ್ಲಿ ರೈತರ ಆತ್ಮಹತ್ಯೆಗಳು ಕಡಿಮೆಯಾಗಿರುವುದಕ್ಕೆ ಹಲವಾರು ಕಾರಣಗಳ ಜೊತೆಗೆ ಪ್ರಮುಖವಾದದ್ದೇನೆಂದರೆ ಅಲ್ಲಿನ ರೈತರು ಸಾಮೂಹಿಕವಾಗಿ ಬಿಟಿ ಹತ್ತಿ ಬೆಳೆಯುವುದನ್ನು ನಿಲ್ಲಿಸಿ ಸೊಯಾಬೀನ್ ಬೆಳೆಯುವುದಕ್ಕೆ ಪ್ರಾಂಭಿಸಿರುವುದು. ಲಭ್ಯ ಅಂಕಿಅಂಶಗಳ ಪ್ರಕಾರ ವಿದರ್ಭಾದ ಕೆಲವು ಹಳ್ಳಿಗಳಲ್ಲಿ ಒಟ್ಟು ಐದು ಸಾವಿರಕ್ಕಿಂತ ಹೆಚ್ಚು ರೈತರು ಬಿಟಿ ಹತ್ತಿಯನ್ನು ನಿಲ್ಲಿಸಿ ಸೋಯಾಬೀನ್ ಬೆಳೆಯುತ್ತಿದ್ದಾರೆ. ಇದರಿಂದ ಅವರ ಆರ್ಥಿಕ ಪರಿಸ್ಥಿತಿಯೂ ಸುಧಾರಣೆಯಾಗಿದ್ದನ್ನು ಕಂಡು ಇನ್ನಿತರ ರೈತರೂ ಅದೇ ದಾರಿ ತುಳಿಯಲಾರಂಭಿಸಿದ್ದಾರೆ. ಎಲ್ಲಿಯತನಕ ಬಿಟಿ ಹತ್ತಿಗೆ ದಾಸರಾಗಿರುತ್ತೇವೆಯೋ ಅಲ್ಲಿಯತನಕ ಸಂಕಷ್ಟ ತಪ್ಪಿದ್ದಲ್ಲ ಎಂಬುದನ್ನು ಮನಗಂಡ ರೈತರು ಈ ರೀತಿ ಬಿಟಿ ಹತ್ತಿಗೆ ವಿದಾಯ ಹೇಳುತ್ತಿರುವುದು ಅವರ ಪರಿಸ್ಥಿತಿಯನ್ನು ಸುಧಾರಿಸಿದೆ. ಅದು ಆತ್ಮಹತ್ಯೆಯ ಪ್ರಮಾಣ ಇಳಿಯುವುದಕ್ಕೂ ಕಾರಣವಾಗಿದೆ. ಈ ವಾಸ್ತವಾಂಶವನ್ನು ಮರೆಮಾಚಿ ಕೊಲೆಗಡುಕ ಬಿಟಿ ಹತ್ತಿಯನ್ನು ರೈತರೋದ್ಧಾರಕ, ರೈತರ ಆತ್ಮಹತ್ಯೆ ನಿವಾರಕ ಎಂದು ಬಿಂಬಿಸುತ್ತಿರುವ ಇಂಡಿಯನ್ ಎಕ್ಸ್‌ಪ್ರೆಸ್ ಪತ್ರಿಕೆ ಈ ಮಹಾನ್ ಸುಳ್ಳು ಹೇಳುವುದಕ್ಕೆ ಬಿಟಿ ಹತ್ತಿ ಕಂಪೆನಿಯಿಂದ ಎಷ್ಟು ದುಡ್ಡು ತಿಂದಿರಬೇಡ? ಆ ಮೂಲಕ ಬಿಟಿ ಹತ್ತಿ ನಡೆಸುತ್ತಿರುವ ರೈತರ ಕೊಲೆಗಳಿಗೆ ಪತ್ರಿಕೆ ಸಾಥ್ ನೀಡಿದಂತಾಗುವುದಿಲ್ಲವೆ? ●



ರಾಷ್ಟ್ರೀಯ ಕ್ರೀಡೆಗೆ ಇಂಥ ದುಸ್ಥಿತಿ!

ರಾಷ್ಟ್ರೀಯ ಹಾಕಿ ತಂಡಕ್ಕೂ ಹಾಗೂ ಹಾಕಿ ...ತ ಆಡಳಿತವನ್ನು ನಿಯಂತ್ರಿಸುವ ಹಾಕಿ ಇಂಡಿಯ ...ಕಾರಿಗಳ ನಡುವಿನ ಜಟಾಪಟಿ ಅಪಾಯಕಾರಿ ...ಗೆ ಬಂದು ನಿಂತಿದೆ. ತಮಗೆ ನ್ಯಾಯಯುತವಾಗಿ ...ಕಿರುವ ದಿನದ ಭತ್ಯೆಯನ್ನು ನೀಡುವತನಕ ತಾವು ...ಸಕ್ಕೆ ಹಾಜರಾಗುವುದಿಲ್ಲ ಎಂದು ರಾಷ್ಟ್ರೀಯ ಹಾಕಿ ...ದ ಆಟಗಾರರು ಪಟ್ಟು ಹಿಡಿದು ಕುಳಿತಿದ್ದರೆ, ... ಹತ್ತಿರ ಕೊಡುವುದಕ್ಕೆ ಅಷ್ಟು ದುಡ್ಡಿಲ್ಲ ಎಂದು ... ಇಂಡಿಯ ಅಧಿಕಾರಿಗಳು ಕೈಚೆಲ್ಲಿ ಕುಳಿತಿದ್ದಾರೆ. ...ಗಾರರು ದಿನದ ಮೇಲೆ ದಿನದ ಗಡುವುಗಳನ್ನು ...ತ್ತಾ ಮುಷ್ಕರ ಮುಂದುವರೆಸಿದ್ದರೆ ಅಧಿಕಾರಿಗಳು ... ಬರದಿದ್ದರೆ ಹೊಸ ತಂಡವನ್ನು ರಚಿಸಿ ವಿಶ್ವಕಪ್‌ನಲ್ಲಿ ...ಸುತ್ತೇವೆ ಎಂದು ಬೆದರಿಕೆಯೊಡ್ಡಿದ್ದಾರೆ. ಆಟಗಾರರು ... ಪ್ರಾತಿನಿಧ್ಯ ಕೊಡುವುದಕ್ಕಿಂತ ಹೆಚ್ಚಾಗಿ ದುಡ್ಡಿಗೆ ...ತ್ವ ಕೊಡುತ್ತಿದ್ದಾರೆಂದು ಹಾಕಿ ಇಂಡಿಯಾದ ಅಧ್ಯಕ್ಷ ...ೋಕ್ ಕೆ ಮಟ್ಟೂ ಬಿಕ್ಕಟ್ಟಿನ ಸಂಪೂರ್ಣ ಹೊಣೆ ...ಯನ್ನು ಆಟಗಾರರ ಮೇಲೆ ಹಾಕುತ್ತಿದ್ದಾರೆ.

...ನ್ನೇನು ವಿಶ್ವಕಪ್ ಹಾಕಿ ಚಾಂಪಿಯನ್‌ಷಿಪ್ ...ವಳಿಗಳು ಪ್ರಾರಂಭವಾಗುವುದಕ್ಕೆ ಕೆಲವೇ ತಿಂಗಳು ...ಯಿರುವಾಗ, ಅದರಲ್ಲೂ ಈ ಪಂದ್ಯಾವಳಿಗಳನ್ನು ... ದೇಶದಲ್ಲೇ ನಡೆಸಿಕೊಡುವ ಜವಾಬ್ದಾರಿಯನ್ನು ...ತ ಹೊತ್ತುಕೊಂಡಿರುವಾಗ ಇಂಥ ಜಗಳ ...ದ್ದಿರುವುದು ನಿಜಕ್ಕೂ ಹಾಕಿ ಅಭಿಮಾನಿಗಳಲ್ಲಿ ... ಮೂಡಿಸಿದೆ. ಅಷ್ಟೇಅಲ್ಲ, ಭಾರತದ ರಾಷ್ಟ್ರೀಯ ...ಯಾದ ಹಾಕಿ ಭಾರತದ ನೆಲದಲ್ಲೇ ಅವಸಾನ ...ಗೆ ಸಾಗುತ್ತಿರುವುದಕ್ಕೆ ದ್ಯೋತಕವಾಗಿದೆ.

...ಂದೆಡೆ ಕ್ರಿಕೆಟ್ ಆಟಗಾರರು ನೂರಾರು ಕೋಟಿ ... ಮಾಡುತ್ತಿದ್ದರೆ ಹಾಕಿ ಆಟಗಾರರು ತಮಗೆ ...ಕಿರುವ ದಿನದ ಭತ್ಯೆಯನ್ನು ಬೇಡುವ ದೈನೇಸಿ ... ಬಂದಿದ್ದಾರೆಂದರೆ ಈ ಆಟವನ್ನು ಎಷ್ಟರಮಟ್ಟಿಗೆ ...ಕ್ಷಿಸಲಾಗುತ್ತಿದೆ ಎಂಬುದನ್ನು ಅರ್ಥ ಮಾಡಿ ...ಬಹುದು.

...ಂದು ಕಾಲದಲ್ಲಿ ಅಂತಾರಾಷ್ಟ್ರೀಯ ಹಾಕಿ ಲೋಕ ... ಅನಭಿಷಿಕ್ತ ದೊರೆಯಂತೆ ಆಳಿದ ಭಾರತದ ...ತಂಡ, ಎಂಟು ಬಾರಿ ವಿಶ್ವಕಪ್ ಗೆದ್ದು ದಾಖಲೆ ...ದ ಭಾರತದ ಹಾಕಿ ತಂಡ ಇಂದು ಎಂಥ ...ಗೆ ಬಂದು ನಿಂತಿದೆಯೆಂದರೆ ಕಳೆದ ಬಾರಿಯ ...ಪಿಕ್ಸ್‌ನಲ್ಲಿ ಅರ್ಹತಾ ಸುತ್ತಿನಲ್ಲೇ ಸೋತು ಅನರ್ಹ ... ಮನೆಗೆ ಮರಳಿತು. ಈಗ ರಾಷ್ಟ್ರೀಯ ತಂಡದ ...ರರಿಗೆ ಭತ್ಯೆ ಕೊಡುವುದಕ್ಕೂ ದುಡ್ಡಿಲ್ಲ! ಇದಕ್ಕೆಲ್ಲಾ ...ಾಗಿ ಹೊಣೆಯಾಗಿರುವುದು ಹಾಕಿ ಆಡಳಿತವೇ ...ತು ಆಟಗಾರರಲ್ಲ. ಈ ಹಿಂದೆ ಹಾಕಿ ಆಟವನ್ನು ...ಂತ್ರಿಸುತ್ತಿದ್ದ ಭಾರತ ಹಾಕಿ ಫೆಡರೇಶನ್ ಹಾಗೂ ...ಬ್ಬರಿ ಹದಿನಾಲ್ಕು ವರ್ಷಗಳ ಕಾಲ ಈ ಫೆಡರೇಶನ್ ... ಆಳಿದ ಕೆ.ಪಿ.ಎಸ್. ಗಿಲ್ ಅವರೇ ಭಾರತ ...ತ ಈ ಅವನತಿಗೆ ಪ್ರಧಾನ ಹೊಣೆಗಾರರು. ಮಾಜಿ ...ೀಸ್ ಅಧಿಕಾರಿಯಾದ ಗಿಲ್ ಹಾಕಿ ಆಟವನ್ನು ...ದ್ಧಿಗೊಳಿಸುವುದಕ್ಕೆ, ಉತ್ತಮ ಪ್ರದರ್ಶನ ತೋರು ... ಆಟಗಾರರನ್ನು ತಯಾರು ಮಾಡುವುದಕ್ಕೆ ...ವಹಿಸಿದ್ದಕ್ಕಿಂತ ವಯಕ್ತಿಕ ವರ್ಚಸ್ಸು, ದುಡ್ಡು ...ರಕ್ಕಾಗಿ ಹಂಬಲಿಸಿದ್ದೇ ಹೆಚ್ಚು. ಒಲಂಪಿಕ್ಸ್‌ನಿಂದ ... ಹೊರಬಿದ್ದ ತಕ್ಷಣವೇ ಗಿಲ್ ಕೂಡ ಫೆಡರೇಶನ್ ... ಹೊರಬೀಳಬೇಕಾಯಿತು. ಇಂಡಿಯನ್ ಹಾಕಿ ...ೇಶನ್ ಜಾಗದಲ್ಲಿ ಹಾಕಿ ಇಂಡಿಯ ಬಂದಿತು; ... ಜಾಗದಲ್ಲಿ ಅಶೋಕ್ ಕೆ ಮಟ್ಟು ಬಂದರು. ... ಮೂಲತಃ ಏನೂ ಬದಲಾವಣೆಯಾಗಿಲ್ಲ, ಅದಕ್ಕೆ ... ತಿಕ್ಕಾಟವೇ ಸಾಕ್ಷಿ.


...ರತ ಹಾಕಿ ತಂಡವನ್ನು ಅವನತಿಯೆಡೆಗೆ ...ದೂರ ಸಾಗಿಸಿದ ಗಿಲ್, ಈಗ ಅದೇ ದಾರಿಯಲ್ಲಿ ...ಡೆಯುತ್ತಿರುವ ಮಟ್ಟೂ! ಭಾರತ ಹಾಕಿ ಉದ್ಧಾರ ...ತೆಯೆ! ●

ಸಚಿವ ಹರತಾಳು ಪಕ್ಕ ಕಾಮುಕ ಜಗದೀಶ್ ಶರ್ಮಾ
ವಾರೆಂಟ್ ಇದ್ದರೂ ಬಂಧಿಸಲಿಲ್ಲ!

ರಾಮಚಂದ್ರಾಪುರ ಮಠದ ಸ್ವಾಮಿ ರಾಘವೇಶ ಮತ್ತಾತನ ನೆಂಟ-ಭಂಟ ಕಾಮುಕ ಜಗದೀಶ್ ಶರ್ಮಾನ ರಕ್ಷಣೆಗೆ ಬಿಜೆಪಿ ಸರ್ಕಾರ ನಿಂತಿರುವುದು ಮೊನ್ನೆ ಸಾಗರದಲ್ಲಿ ಜಗಜ್ಜಾಹೀರಾಗಿ ಹೋಗಿದೆ.

ತಲೆಮೇಲೆ ಬಂಧನದ ವಾರೆಂಟ್ ಹೊತ್ತಿರುವ ಕಾಮುಕ ಜಗದೀಶ್ ಶರ್ಮಾ ತಲೆ ತಪ್ಪಿಸಿಕೊಂಡು ತಿರುಗುತ್ತಿದ್ದಾನೆ. ಆದ್ದರಿಂದ ಪೊಲೀಸರಿಗೆ, 'ಜಗದೀಶ್ ಶರ್ಮಾ ಸಿಗುತ್ತಿಲ್ಲ' ಎಂದು ಸರ್ಕಾರವೇ ನಾಟಕ ಆಡುತ್ತ ಕಾಮುಕನನ್ನು ರಕ್ಷಣೆ ಮಾಡುತ್ತಿದೆ. ಅದಕ್ಕೆ ಪುರಾವೆ ಯೆಂಬಂತೆ ಆಹಾರ ಮತ್ತು ನಾಗರಿಕ ಪೂರೈಕೆ ಸಚಿವ ಹರತಾಳು ಹಾಲಪ್ಪನ ಪಕ್ಕದಲ್ಲಿ ಕುಳಿತು, ಬಹಿರಂಗ ಸಭೆಯಲ್ಲಿ ಚೀರಾಡಿದ ಜಗದೀಶ್ ಶರ್ಮನನ್ನು ಯಾವ ಪೊಲೀಸರು ಮುಟ್ಟಲೇ ಇಲ್ಲ. ಆತನ ಮೇಲೆ ವಾರೆಂಟ್ ಇದ್ದುದನ್ನು ಜನ ನೆನಪಿಸಿದರೂ ಪೊಲೀಸರು ತೆಪ್ಪಗೆ ಇದ್ದರು. ಅಂದರೀಗ ರಾಮಚಂದ್ರಪುರ ಮಠದ ರಕ್ಷಣೆಗೆ ಸರ್ಕಾರವೇ ನಿಂತಂತಾಗಿದೆ. ಅದೂ ಓಪನ್ ಆಗಿ!

ಜನವರಿ 12ರಂದು ಸಾಗರದ ಚೆಡ್ಡಿಗಳೆಲ್ಲ ಸೇರಿ 'ಧರ್ಮ ರಕ್ಷಾ ಸಮಿತಿ' ಎಂಬ ಹೆಸರಿನಡಿ ಬಹಿರಂಗ ಸಭೆ ಮಾಡಿದವು. ರಾಮಚಂದ್ರಾಪುರ ಮಠದ ರಾಘವೇಶ ಮತ್ತು ಜಗದೀಶ್ ಶರ್ಮಾರ ಪರ ಸದಭಿಪ್ರಾಯ ಸೃಷ್ಟಿಸಲೆಂದೇ ಈ ಸಮಾವೇಶ ನಡೆಸಲಾಯ್ತು. ವೇದಿಕೆಯ ಮೇಲೆ ಸಚಿವ ಹರತಾಳು ಹಾಲಪ್ಪ, ಸಾಗರದ ಶಾಸಕ ಬೇಳೂರು ಗೋಪಾಲಕೃಷ್ಣ, ನಗರಸಭೆ ಅಧ್ಯಕ್ಷ ಟಿ.ಡಿ. ಮೇಘರಾಜರಿದ್ದರು. ಸಚಿವ ಹರತಾಳು




ಜಗದೀಶ್ ಶರ್ಮಾ

ಪಕ್ಕದಲ್ಲಿ ಆಸೀನನಾಗಿದ್ದ ಕಾಮುಕ ಜಗದೀಶ್ ಶರ್ಮಾ ತನ್ನ ವಿರುದ್ಧ ಷಡ್ಯಂತ್ರ ನಡೆದಿದೆ, ತಾನು ಪರಮ ಪವಿತ್ರ ಎಂದೆಲ್ಲ ಹಾರಾಡುತ್ತಿದ್ದರೆ ಪೊಲೀಸರು ಮಾತ್ರ ಆಕಳಿಸುತ್ತಾ ನಿಂತಿದ್ದರು. ಸಚಿವ ಹರತಾಳು, ಶಾಸಕ ಗೋಪಾಲ ಕೃಷ್ಣರೇ ಕಾಮುಕನ ಜೊತೆ ಕುಳಿತಿರುವಾಗ ಪಾಪ ಪೊಲೀಸರಾದರೂ ಏನು ಮಾಡುತ್ತಾರೆ? ಅದೂ ಸಚಿವ, ಶಾಸಕರೇ ಜಗದೀಶ್ ಶರ್ಮಾನ ಪರ ಬಹಿರಂಗವಾಗಿ ಸರ್ಟಿಫಿಕೇಟ್ ನೀಡುವಾಗ ಪೊಲೀಸರಿಗಾದರೂ ಧೈರ್ಯ ಎಲ್ಲಿ ಬರುತ್ತದೆ?

ಒಂದೂವರೆ ಸಾವಿರದಷ್ಟು ಬಿಜೆಪಿ ಕಾರ್ಯಕರ್ತರನ್ನು ಸೇರಿಸಿ ರಾಘವೇಶ, ಶರ್ಮಾರ ಪರ ಬೊಂಬಡಾ ಬಜಾಯಿಸಿದ ಈ ಸಮಾವೇಶಕ್ಕೆ ಸಾಗರದ ಹವ್ಯಕರು ಅತೀ ನೀರಸವಾಗಿ ಪ್ರತಿಕ್ರಿಯಿಸಿಬಿಟ್ಟರು. ಅಂದರೆ ಈಗ ರಾಘವೇಶನ ಪರ ಬ್ರಾಹ್ಮಣರೂ ಇಲ್ಲ, ಬ್ರಾಹ್ಮಣೇತರರೂ ಇಲ್ಲವಾಗಿದೆ. ಇಂತಹವನ ರಕ್ಷಣೆಗೆ ನಿಂತಿರುವ ಬಿಜೆಪಿಯ ಬಗ್ಗೆ ಹವ್ಯಕರೂ ಅಸಹ್ಯಪಟ್ಟುಕೊಳ್ಳುತ್ತಿದ್ದಾರೆ.

ರಾಮಚಂದ್ರಾಪುರ ಮಠವು ನಡೆಸುತ್ತಿದ್ದ ಶ್ರೀಮಾತಾ ಗುರುಕುಲದಲ್ಲಿ ರಾಘವೇಶನ ಸಂಬಂಧಿ ಜಗದೀಶ್ ಶರ್ಮಾ ಎಳೆಬಾಲೆಯರ ಮೇಲೆ ನಡೆಸುತ್ತಿದ್ದ ಲೈಂಗಿಕ ಶೋಷಣೆ ಬಯಲಾದಾಗಿನಿಂದಲೂ ಬಿಜೆಪಿ ಸರ್ಕಾರ ಶರ್ಮಾನ ರಕ್ಷಣೆ ಮಾಡುತ್ತಲೇ ಬಂದಿದೆ. ವೀಣಾ ಹೆಗಡೆ ಮತ್ತು ವಾಸುದೇವ ಹೆಗಡೆ ಎಂಬ ದಂಪತಿಗಳು ಪತ್ರಿಕಾಗೋಷ್ಠಿ ನಡೆಸಿ ಜಗದೀಶ್ ಶರ್ಮಾ ತಮ್ಮ ಮಗಳ ಮೇಲೆ ನಡೆಸಿದ ಲೈಂಗಿಕ



ಹಾಲಪ್ಪ

ದೌರ್ಜನ್ಯವನ್ನು ಬಹಿರಂಗ ಮಾಡಿದ ಮೇಲೆ ಮಾನವಂತರೆಲ್ಲ ಅಸಹ್ಯಪಟ್ಟಿದ್ದರು. ಹೀಗೆ ಶ್ರೀಮಾತಾ ಕುಲ ತೊರೆದ ಸುಮಾರು 30 ಬಾಲೆಯರೂ ಲೈಂಗಿಕ ಕಿರುಕುಳ ಅನುಭವಿಸಿದ್ದಾರೆ. ಹೆಗಡೆ ದಂಪತಿಗಳು ಶರ್ಮಾನ ವಿರುದ್ಧ ದೂರು ದಾಖಲಿಸಿದ ಮೇಲಷ್ಟೇ ಪೊಲೀಸರು ಕಾಟಾಚಾರಕ್ಕೆಂಬಂತೆ ಎಫ್‌ಐಆರ್ ಹಾಕಿ, ಬಂಧನದ ವಾರೆಂಟ್ ಹೊರಡಿಸಿದರು. ಆದರೆ ಆರಾಮಾಗೇ ಓಡಾಡುವ ಶರ್ಮಾನನ್ನು ಬಂಧಿಸುತ್ತಲೇ ಇಲ್ಲ.

ಆತ ತಪ್ಪಿಸಿಕೊಂಡಿದ್ದಾನೆ ಎಂದು ಹೇಳುತ್ತಾ ಬಂದಿದ್ದ ಪೊಲೀಸರಿಗೆ ಆತ ಬಹಿರಂಗ ಸಮಾವೇಶದಲ್ಲಿ ಪಾಲ್ಗೊಂಡರೂ ಬಂಧಿಸಲಾಗುವುದಿಲ್ಲ. ಸಮಾವೇಶ ನಡೆಸಿದ ಚೆಡ್ಡಿಗಳು ರಾಘವೇಶ ಶರ್ಮಾನ ಹುಳುಕು ಬಯಲು ಮಾಡಿದ ಪತ್ರಿಕೆಗಳನ್ನೆಲ್ಲ ಸುಟ್ಟು ಮಜಾ ಅನುಭವಿಸಿ, ಕಾಮುಕನ ಬಾಲಂಗೋಚಿಗಳಂತೆ ವರ್ತಿಸಿದರು.

ಕಾಮುಕನ ರಕ್ಷಣೆಗೆ ಸರ್ಕಾರವೇ ನಿಲ್ಲುವುದು, ಸ್ತ್ರೀಮಾತೆಯರ ರಕ್ಷಕರೆಂಬಂತೆ ಪೋಸು ಕೊಡುವ ಸಂಘಪರಿವಾರವೂ ಇದರಲ್ಲಿ ಭಾಗಿಯಾಗುವುದು... ಛೀ ನಾಚಿಕೆ, ಮಾನ, ಮರ್ಯಾದೆ ಎಂಬುದೇನಾದರೂ ಇದೆಯೇ ಈ ಸರ್ಕಾರಕ್ಕೆ? ●

ಸಂ.ಕ.ದಲ್ಲಿ ಹಾರ್ನಳ್ಳಿ ಸೋಂಕು

ದೇವೇಗೌಡರು ಯಡಿಯೂರಪ್ಪನ ವಿರುದ್ಧ ಏಕವಚನದಲ್ಲಿ ಮಾತಾಡಿದ ಪ್ರಸಂಗವನ್ನು ನೆನೆಪಿಸಿಕೊಳ್ಳಿ. ಅವರ ಕೋಪಕ್ಕೆ ತಕ್ಷಣದ ಕಾರಣವಾಗಿದ್ದು 'ಸಂಯುಕ್ತ ಕರ್ನಾಟಕ'ದ 'ಗೌಡರ ವಿರುದ್ಧ ರೈತರ ರಣಕಹಳೆ' ಎಂಬ ವರದಿ ಮತ್ತು ರಾಜ್ಯದ ಅಡ್ವೋಕೇಟ್ ಜನರಲ್ ಅಶೋಕ್ ಹಾರ್ನಳ್ಳಿ. 'ಸಂಯುಕ್ತ ಕರ್ನಾಟಕ'ವನ್ನು ಪ್ರಕಟಿಸುವ ಲೋಕಶಿಕ್ಷಣ ಟ್ರಸ್ಟ್‌ನ ಅಧ್ಯಕ್ಷನಾಗಿರುವ ಅಶೋಕ್ ಹಾರ್ನಳ್ಳಿ ಸಂ.ಕ.ದಲ್ಲಿ ಗೌಡರನ್ನು ಹೀಯಾಳಿಸುವ ಲೇಖನಗಳನ್ನು ಬರೆಸುತ್ತಾ 'ನೈಸ್' ಕಂಪೆನಿಯ ವಕ್ತಾರನಂತೆ ವರ್ತಿಸಿದ್ದ. ಅಲ್ಲಿ ಸುಪ್ರೀಂಕೋರ್ಟ್‌ನಲ್ಲಿ ರಾಜ್ಯದ ಹಿತ ಕಾಪಾಡಬೇಕಾದ ಅಡ್ವೋಕೇಟ್ ಜನರಲ್ ಅಶೋಕ್ ಹಾರ್ನಳ್ಳಿ ಪರೋಕ್ಷವಾಗಿ ಭೂ ಲೂಟಿಯ ಪರ ನಿಲ್ಲುತ್ತಿದ್ದಾನೆ.

ಅಂದಂತೆ ಈತ ಅಡ್ವೋಕೇಟ್ ಜನರಲ್ ಹುದ್ದೆಗೇರಲ್ಲಿದ್ದ ಪ್ರಮುಖ ಅರ್ಹತೆ ಕೋಮುವಾದಿ ಹಾರ್ನಳ್ಳಿ ರಾಮಸ್ವಾಮಿ ಪುತ್ರನೆಂಬುದು ಮತ್ತು ಈತ ಅಪ್ಪನಿಗಿಂತ ಕೊಂಚ ಜಾಸ್ತಿ ಕೋಮುವಾದಿ ಎಂಬುದು. ಇಂತಹ ವ್ಯಕ್ತಿ ರಾಜ್ಯದ ಹಿತ ಕಾಪಾಡುವುದಿರಲಿ,



ತನ್ನ ಸಂ.ಕ.ದಲ್ಲೇ ನಡೆಯುತ್ತಿರುವ ಶೋಷಣೆ, ದೌರ್ಜನ್ಯ ಅನ್ಯಾಯಗಳನ್ನು ತಡೆಗಟ್ಟಲಾಗುತ್ತಿಲ್ಲ. ಬದಲಾಗಿ ಅಂಥದ್ದಕ್ಕೆಲ್ಲ ಈತ ಸಪೋರ್ಟ್ ಮಾಡುತ್ತ ಬಂದಿದ್ದಾನೆ. ಹಾರ್ನಳ್ಳಿ ರಾಮಸ್ವಾಮಿ ಕಾಲದಲ್ಲಿ ಲೋಕ ಶಿಕ್ಷಣ ಟ್ರಸ್ಟ್ ಹೊಕ್ಕ ನಿವೃತ್ತ ಅಧಿಕಾರಿ ನಾರಾಯಣಮೂರ್ತಿ ಈಗ ಟ್ರಸ್ಟ್‌ನ ಸೆಕ್ರೆಟರಿ. ಈತ ನೌಕರರನ್ನೆಲ್ಲ ಏಕವಚನದಲ್ಲೇ ಸಂಬೋಧಿಸುತ್ತಾನೆ. ಇಂತಹವನ ಬೆನ್ನಿಗಿರುವ ಅಶೋಕ್ ಹಾರ್ನಳ್ಳಿ ಸಂ.ಕ.ದ ಗುತ್ತಿಗೆ ನೌಕರರನ್ನು ಮಾನಸಿಕವಾಗಿ ಹಿಂಸಿಸುತ್ತಿದ್ದಾನೆ. ಸಂ.ಕ.ದಲ್ಲೀಗ ಸುಮಾರು 120 ಗುತ್ತಿಗೆ ನೌಕರರು ಕಾಯಂಗೊಳ್ಳಲು ಕಾದು ಕಾದು ಹೈರಾಣಾಗಿದ್ದಾರೆ. ಕೆಲವರು ಏಳೆಂಟು ವರ್ಷಗಳಿಂದ ಇಂತಹ ನಿರೀಕ್ಷೆಯಲ್ಲಿದ್ದಾರೆ. ಆದರೆ ಇವರ ಧ್ವನಿ ಅಶೋಕ್ ಹಾರ್ನಳ್ಳಿಗೆ ತಟ್ಟುವುದೇ ಇಲ್ಲ. ಬದಲಾಗಿ ಚೆಡ್ಡಿ ಸಿದ್ಧಾಂತಗಳ ಪರವಿರುವ ನೌಕರರಿಗೆ ದಿಢೀರ್ ಬಡ್ತಿ ಸಿಗುತ್ತದೆ. ಈ ಪೈಕಿ ಒಮ್ಮೆಲೇ ಸಹಾಯಕ ಸಂಪಾದಕನಾದ ಅನಿಲಕುಮಾರ್ ಎಂಬಾತ ಹಾರ್ನಳ್ಳಿ



ಅಶೋಕ್

ಭಜನೆ ಮಾಡುತ್ತ, ಸಂಘಪರಿವಾರದ ವಿಷವನ್ನು ಶಾಲಾ ಮಕ್ಕಳ ತಲೆಗೆ ತುಂಬುತ್ತಿದ್ದಾನೆ.

ಹಾರ್ನಳ್ಳಿ ರಾಮಸ್ವಾಮಿ ಸ್ಮರಣಾರ್ಥ ಎಂಬ ಬೋರ್ಡಿನಡಿ ಶಾಲಾಮಕ್ಕಳಿಗೆ ಚರ್ಚಾಸ್ಪರ್ಧೆ ಏರ್ಪಡಿಸುವ ಅನಿಲಕುಮಾರ್ ತನ್ನ ಬಾಸ್ ಅಶೋಕ್ ಹಾರ್ನಳ್ಳಿಯನ್ನು ಮೆಚ್ಚಿಸಲು ಚರ್ಚಾಸ್ಪರ್ಧೆಗೆ ಬಿಜೆಪಿ ಪರ ವಿಷಯಗಳನ್ನೇ ಆಯ್ಕೆ ಮಾಡುತ್ತಾನೆ. ಜೊತೆಗೆ 'ಕಿಂದರಿ ಜೋಗಿ' ಎಂಬ ಮಕ್ಕಳ ಪತ್ರಿಕೆಯ ತುಂಬಾ ಹಿಂದುತ್ವದ ತಿರುಳು ತುಂಬುತ್ತಾನೆ.

ಲೋಕಶಿಕ್ಷಣ ಟ್ರಸ್ಟ್‌ನ ಪ್ರಧಾನ ಟ್ರಸ್ಟಿ ಸಂಸದ ಪ್ರಹ್ಲಾದ ಜೋಶಿಯ ವಿಷಕಾರಿ ಸಿದ್ಧಾಂತಗಳೊಂದಿಗೆ ಈಗ ದೇವೇಗೌಡರ ವಿರುದ್ಧ ಪಿತೂರಿ ವರದಿಗಳನ್ನು ಬರೆಸುತ್ತಿರುವ ಅಶೋಕ್ ಹಾರ್ನಳ್ಳಿ ಪ್ರತಿಭಟಿಸಿದ ರೈತರನ್ನು ಬಾಡಿಗೆ ರೈತರು ಎಂದು ಅವಮಾನಿಸಿದ್ದಾನೆ...

ಇಂತಹ ಚಿಲ್ಲರೆ ಬುದ್ಧಿಯ ಅಡ್ವೋಕೇಟ್ ಜನರಲ್‌ನಿಂದ ರಾಜ್ಯದ ಹಿತ ಕಾಪಾಡಲಾದೀತೇ? ರೈತರ ಪರ ನಿಲುವು ತೆಗೆದುಕೊಳ್ಳಲಾದೀತೆ?

● ಮಲ್ಲನಗೌಡರ್





ಅಶೋಕ್-ಕಟ್ಟಾ ಜಂಟಿ ಡಕಾಯತಿ

ಕಾಳರಾತ್ರಿಯ ಕಾರಸ್ತಾನ


ಲೂಟಿಯ ಮೊತ್ತವೇ 3248 ಕೋಟಿ!

ಜನವರಿ 15ರಿಂದ ಬಿಬಿಎಂಪಿ ಚುನಾವಣೆಯ ನೀತಿಸಂಹಿತೆ ಜಾರಿಗೆ ಬಂತೆಂದರೆ ಮುಗಿದೇಹೋಯಿತು. ಚುನಾವಣೆ ಮುಗಿದು ಗೆದ್ದು ಬಂದ ಕೌನ್ಸಿಲರ್‌ಗಳ ಕೈಗೆ ಟೆಂಡರ್ ವಿಲೇವಾರಿಯೇನಾದರೂ ಸಿಕ್ಕಿಬಿಟ್ಟರೆ ಸಾವಿರಕ್ಕೂ ಅಧಿಕ ಕೋಟಿಗಳಷ್ಟು ದುಡ್ಡು ದೋಚುವ ಷಡ್ಯಂತ್ರಕ್ಕೆ ತನ್ನಿಂತಾನೇ ಕಲ್ಲು ಬೀಳುತ್ತದೆ. ಹೀಗೊಂದು ಹುನ್ನಾರವಿಟ್ಟೇ ಜನವರಿ 12ರ ಕಾಳರಾತ್ರಿ ಕಾರಸ್ತಾನಕ್ಕಿಳಿದ ಗಂಟುಕಳ್ಳರ ಪೈಕಿ ರೂವಾರಿಗಳಂತಿದ್ದವರು ಮಂತ್ರಿಗಳಾದ ಕಟ್ಟಾ ಮತ್ತು ಆರ್.ಅಶೋಕ್.

ರಾ.ಸೋಮನಾಥ್

ಮೂರು ಸಾವಿರದ ಇನ್ನೂರ ನಲವತ್ತೆಂಟು ಕೋಟಿಗೆ ಕನಿಷ್ಠ ಹತ್ತು ಪರ್ಸೆಂಟ್ ಕಮಿಷನ್ ಎಂದಿಟ್ಟರೂ ಅದು ಮುನ್ನೂರಿಪ್ಪತ್ನಾಲ್ಕು ಕೋಟಿ ರೂಪಾಯಿಗಳಷ್ಟಾಗುತ್ತದೆ.

ಇದು ಬೆಂಗಳೂರನ್ನಾಳುವ ಬಿಜೆಪಿ ಸರ್ಕಾರದ ಮಂತ್ರಿದ್ವಯರಾದ ಕಟ್ಟಾ ಸುಬ್ರಹ್ಮಣ್ಯಂ ನಾಯ್ಡು ಮತ್ತು ಆರ್.ಅಶೋಕ್ ಸೇರಿಕೊಂಡು ಒಂದೇ ರಾತ್ರಿಯಲ್ಲಿ ಜೇಬಿಗಿಳಿಸಿದ ಕಿಕ್‌ಬ್ಯಾಕು!



ಈ ಪೈಕಿ ಅರ್ಧಕರ್ಧ ಎಂದರೂ ತಲಾ ನೂರಾ ಅರವತ್ತು ಕೋಟಿಯಂತೆ ಹಂಚಿಕೊಂಡ ಈ ಇಬ್ಬರೂ ಮಂತ್ರಿಗಳು ಮತ್ತೆ ಹತ್ತು ಪರ್ಸೆಂಟ್‌ನಷ್ಟು ಕಮಿಷನ್ ಅನ್ನು ರಾಜ್ಯದ ಮುಖ್ಯಮಂತ್ರಿ ಯಡ್ಡಿಗೆ ಕೊಡಿಸಿದರೂ ಅದು ಮತ್ತೆ ಮುನ್ನೂರಿಪ್ಪತ್ನಾಲ್ಕು ಕೋಟಿಯಷ್ಟು ಲಂಚದ ಕಾಸಾಗುತ್ತದೆ. ಮುಖ್ಯಮಂತ್ರಿ ಮತ್ತು ಉಸ್ತುವಾರಿ ಮಂತ್ರಿಗಳೇ ತಲಾ ಹತ್ತು ಪರ್ಸೆಂಟನಂತೆ ತಿಂದ ಮೇಲೆ ಬೆಂಗಳೂರಿನ ಆಯಾ ವಿಧಾನಸಭಾ ಕ್ಷೇತ್ರಗಳ ಎಮ್ಮೆಲ್ಲೆಗಳಿಗೆ ತಲಾ ಹತ್ತು ಪರ್ಸೆಂಟ್‌ನಂತೆ ಬೇಕೇಬೇಕು. ಅಲ್ಲಿಗೆ 3248 ಕೋಟಿಯಲ್ಲಿ ಮೂವತ್ತು ಪರ್ಸೆಂಟು ಮಂತ್ರಿ ಶಾಸಕರೇ ನುಂಗಿ ಹಾಕಿದ ಮೇಲೆ ಇಂಜನಿಯರ್‌ಗಳು, ಅಧಿಕಾರಿಗಳು ಕೈ ನೆಕ್ಕದೇ ಇರುತ್ತಾರಾ? ಅದಕ್ಕೊಂದು ಮತ್ತೆ ಹತ್ತು ಪರ್ಸೆಂಟನಷ್ಟು ಕಮಿಷನ್ ಮೊತ್ತವನ್ನು ಎತ್ತಿಡಲೇಬೇಕು!

ಇದು ಜನವರಿ 12ರ ನಡುರಾತ್ರಿಯಲ್ಲಿ ನಡೆದ ಬಿಬಿಎಂಪಿ ಟೆಂಡರ್ ಗುತ್ತಿಗೆಯ ಗೋಲ್‌ಮಾಲ್‌ನ ಅಸಲೀ ಮರ್ಮ. ಒಂದೇ ರಾತ್ರಿ ಕದ್ದುಮುಚ್ಚಿ 3248 ಕೋಟಿ ರೂಪಾಯಿಗಳ ಕಾಮಗಾರಿ ಟೆಂಡರ್ ಹಂಚಿಕೊಡುವ ಬಿಜೆಪಿ ಸರ್ಕಾರದ 'ದೇಶಭಕ್ತಿ'ಯ ವಿರುದ್ಧ ಕಾಂಗ್ರೆಸ್, ಜೆಡಿಎಸ್, ಸಿಪಿಎಂ, ರಿಪಬ್ಲಿಕನ್ ಪಕ್ಷ ಮತ್ತು ದಲಿತ ಸಂಘರ್ಷ ಸಮಿತಿಗಳೆಲ್ಲ ಅಷ್ಟೇ ಕ್ಷಿಪ್ರಗತಿಯಲ್ಲಿ ಬೀದಿಗಿಳಿದು ಪ್ರತಿಭಟಿಸಿವೆ.


ಇಂಟರ್‌ನೆಟ್ ಸೌಲಭ್ಯದಲ್ಲಿ ಉಂಟಾದ ದೋಷದ ಕಾರಣಕ್ಕಾಗೇ ಇಷ್ಟೊಂದು ತಾಪಡತೋಪಡ ಟೆಂಡರ್ ವಿಲೇವಾರಿ ಮಾಡಬೇಕಾಯಿತೆಂದೂ, ಇದರಲ್ಲಿ ಯಾವುದೇ ನಿಯಮದ ಉಲ್ಲಂಘನೆಯಾಗಿಲ್ಲವೆಂದೂ ಸ್ವತಃ ಮುಖ್ಯಮಂತ್ರಿ ಯಡ್ಡಿಯೇ ಹೇಳಿಕೆ ಕೊಟ್ಟು ಆಸ್ಪತ್ರೆಗೆ ದಾಖಲಾಗುತ್ತಾರೆಂದರೆ; ಹಕೀಕತ್ತಾದರೂ ಏನಿರಬೇಕು?

ಅದು ಹೆಗಲು ಮುಟ್ಟಿಕೊಂಡ ಕುಂಬಳಕಾಯಿ ಕಳ್ಳನ ವರಸೆಯಲ್ಲದೇ ಮತ್ತೇನಾಗಿರಲಿಲ್ಲ, ಜನವರಿ 15ರಿಂದ ಬಿಬಿಎಂಪಿ ಚುನಾವಣೆಯ ನೀತಿಸಂಹಿತೆ ಜಾರಿಗೆ ಬಂತೆಂದರೆ ಮುಗಿದೇಹೋಯಿತು. ಮತ್ತೆ ಟೆಂಡರ್ ವಿಲೇವಾರಿಯೇನಾದರೂ ಚುನಾವಣೆ ಮುಗಿದು ಹೊಸ ಮೇಯರ್ ಆಯ್ಕೆಯಾದ ನಂತರವೇ. ಹಾಗೊಮ್ಮೆ ಪಾಲಿಕೆ ಆಡಳಿತವೇನಾದರೂ ಬಿಜೆಪಿ ಕೈತಪ್ಪಿತೆಂದರೆ ಟೆಂಡರ್ ಲೂಟಿಯ ಕರಾಮತ್ತೇ ಮಣ್ಣುಪಾಲಾಗುತ್ತದೆ. ಗೆದ್ದು ಬಂದ ಕೌನ್ಸಿಲರ್‌ಗಳ ಕೈಗೆ ಟೆಂಡರ್ ವಿಲೇವಾರಿಯೇನಾದರೂ ಸಿಕ್ಕಿಬಿಟ್ಟರೆ ಸಾವಿರಕ್ಕೂ ಅಧಿಕ ಕೋಟಿಗಳಷ್ಟು ದುಡ್ಡು ದೋಚುವ ಷಡ್ಯಂತ್ರಕ್ಕೆ ತನ್ನಿಂತಾನೇ ಕಲ್ಲು ಬೀಳುತ್ತದೆ. ಹೀಗೊಂದು ಹುನ್ನಾರವಿಟ್ಟೇ ಜನವರಿ 12ರ ಕಾಳರಾತ್ರಿ ಕಾರಸ್ತಾನಕ್ಕಿಳಿದ ಗಂಟುಕಳ್ಳರ ಪೈಕಿ ರೂವಾರಿಗಳಂತಿದ್ದವರು ಮಂತ್ರಿಗಳಾದ ಕಟ್ಟಾ ಮತ್ತು ಆರ್.ಅಶೋಕ್.

ಸದ್ಯ ಬೆಂಗಳೂರನ್ನು ಇಬ್ಭಾಗಮಾಡಿ ಹಂಚಿಕೊಂಡಿರುವ ಈ ಸಚಿವದ್ವಯರಲ್ಲಿ ಅಶೋಕ್ ಬೆಂಗಳೂರು ದಕ್ಷಿಣದ ಉಸ್ತುವಾರಿ ಮಂತ್ರಿಯಾದರೆ, ಕಟ್ಟಾ ಬೆಂಗಳೂರು ಉತ್ತರವನ್ನು ನಿಭಾಯಿಸುತ್ತಿದ್ದಾನೆ. ಸದ್ಯ ಪಾಲಿಕೆ ಚುನಾವಣೆಯನ್ನು ಶತಾಯಗತಾಯ ಮುಂದೂಡಲು ದಿನಕ್ಕೊಂದು ಅಸ್ತ್ರ ಪ್ರಯೋಗಿಸುತ್ತಿರುವ ಈ ಇಬ್ಬರೂ ಪಾಳೇಗಾರರಿಗೆ ಬೆಂಗಳೂರಿನ ಅಭಿವೃದ್ಧಿಯ ನೆಪವೊಡ್ಡಿ 3248 ಕೋಟಿ ರೂಪಾಯಿಗಳಿಗೊಂದು ಗತಿಕಾಣಿಸುವ ದುರಾಶೆ.

ಅದಕ್ಕೆಂದೇ ಪಾಲಿಕೆಯ ಚೀಫ್ ಇಂಜನಿಯರ್ ಹುದ್ದೆಗೆ ಚಿಕ್ಕರಾಯಪ್ಪ ಎಂಬ ಡೀಲುವೀರ ಇಂಜನಿಯರ್‌ನನ್ನು ತಂದರು. ಕೆ.ಟಿ. ನಾಗರಾಜ್ ಎಂಬ ಮತ್ತೊಬ್ಬ ತಿಂಡಿಪೋತ ಇಂಜನಿಯರ್‌ನನ್ನು ಪಾಲಿಕೆಯ ಸೂಪರಿಂಟೆಂಡೆಂಟ್ ಇಂಜನಿಯರ್ ಮಾಡಿ ಕದಿಯುವ ಎಲ್ಲಾ ತಂತ್ರಗಳಿಗೆ ನೆರವಾಗಲೆಂದೇ ಮುಖ್ಯ ಲೆಕ್ಕಾಧಿಕಾರಿ ಹುದ್ದೆಗೆ ಮೂಳಿಗೆ ಎಂಬಾತನನ್ನೂ, ಲೆಕ್ಕಪರಿಶೋಧನಾಧಿಕಾರಿಯಾಗಿ ಗಂಗಾಧರಸ್ವಾಮಿಯನ್ನೂ ಪ್ರತಿಷ್ಠಾಪಿಸಿಕೊಂಡರು. ಪಾಲಿಕೆಯ ಚುನಾಯಿತ ಕೌನ್ಸಿಲರ್‌ಗಳಿಲ್ಲದ ಸಂದರ್ಭವನ್ನೇ ಕಾದು ಬೆಂಗಳೂರಿನ ಅಭಿವೃದ್ಧಿಯ ಹೆಸರಲ್ಲಿ ಸಹಸ್ರಾರು ಕೋಟಿ ರೂಪಾಯಿಗಳ ಗಂಟು ಹೊಡೆಯುವ ಕೋರ್‌ವರ್ಕ್ ಕಾರಸ್ತಾನ ರೂಪುಗೊಂಡಿದ್ದು ಇಲ್ಲಿಗೆ ಎಂಟು ತಿಂಗಳ ಹಿಂದೆ. ಅದು ಬೆಂಗಳೂರಿನ ಪ್ರಮುಖ ಸಂಚಾರದಟ್ಟಣೆಯ ರಸ್ತೆಗಳನ್ನು ಸಿಗ್ನಲ್ ಮುಕ್ತ ರಸ್ತೆಗಳನ್ನಾಗಿಸುವ ಕಳ್ಳದಂಧೆಯಾಗಿತ್ತು. ಜೊತೆಗೆ ವಿವಿಧ ವಲಯಗಳ ರಸ್ತೆಗಳಿಗೆ ಮತ್ತೆ ಟಾರು, ಅಗಲೀಕರಣ ಮತ್ತು ಮೋರಿ ಸಿಲ್ಟ್ ಎತ್ತುವ ಕಪಟ ಕಾಮಗಾರಿಗಳನ್ನೂ ಸೇರಿಸಲಾಯ್ತು.





ಕಾರ್ಡ್ ರಸ್ತೆಯಿಂದ ವರ್ತುಲ ರಸ್ತೆಯ ತನಕ, ಹಳೇ ಏರ್‌ಪೋರ್ಟ್ ರಸ್ತೆಯಿಂದ ಸರ್ಜಾಪುರದತನಕ, ಹೊಸೂರು ರಸ್ತೆ ಜಯದೇವ ಜಂಕ್ಷನ್, ಮೇಖ್ರಿ ಸರ್ಕಲ್‌ನಿಂದ ಹಳೇ ಮದ್ರಾಸ್ ರಸ್ತೆತನಕ ಇತ್ಯಾದಿ ಪ್ರಮುಖ ರಸ್ತೆಗಳನ್ನು ಆಯ್ದು ಅವುಗಳನ್ನು ಸಿಗ್ನಲ್ ಮುಕ್ತ ಕಾಮಗಾರಿಗೊಳಪಡಿಸುವುದು ಎಂದರೆ ಅಸಂಖ್ಯಾತ ಅಂಡರ್ ಪಾಸ್, ಫ್ಲೈಓವರ್‌ಗಳ ರಾಶಿ ರಾಶಿ ಕಾಮಗಾರಿಗಳಾಗುತ್ತವೆ. ಇಂಥ ಸುದೃಢ ಮತ್ತು ದೀರ್ಘಕಾಲೀನ ಯೋಜನೆಯ ಕಾಂಟ್ರ್ಯಾಕ್ಟು ನಿರ್ವಹಿಸುವ ತಾಕತ್ತಿರುವುದು ಲಾರ್ಸನ್ ಅಂಡ್ ಟೂಬ್ರೋ, ನಾಗಾರ್ಜುನ ಕನ್‌ಸ್ಟ್ರಕ್ಷನ್, ಶಿರ್ಕೆ ಮತ್ತು ಗ್ಯಾಮನ್ ಇಂಡಿಯಾದಂತ ಕನ್‌ಸ್ಟ್ರಕ್ಷನ್ ಕಂಪೆನಿಗಳಿಗೆ ಮಾತ್ರ.

ಇಂಥ ಕಂಪೆನಿಗಳಿಗೇನಾದರೂ ಕಾಂಟ್ರ್ಯಾಕ್ಟು ಕೊಟ್ಟರೆ ಎರಡೂವರೆ ಪರ್ಸೆಂಟಿಗಿಂತಲೂ ಹೆಚ್ಚಿಗೆ ಲಂಚ ಹುಟ್ಟುವುದು ಕಷ್ಟ. ಈ ತರಹದ ನಿಷ್ಠುರಿ ಕಂಪೆನಿಗಳನ್ನು ಬದಿಗೊತ್ತಿ ಕೈ ತುಂಬಾ ಕಮಿಷನ್ ಕೊಡುವ ಕಳ್ಳ ಕಂಟ್ರಾಕ್ಟರ್‌ಗಳ ಲಾಭಕ್ಕೆಂದೇ 19 ವಿವಿಧ ಪ್ಯಾಕೇಜ್‌ಗಳನ್ನು ರೂಪಿಸಲಾಯ್ತು. ಪ್ರತಿಯೊಂದು ಪ್ಯಾಕೇಜಿನ ಮೊತ್ತ ಕಮ್ಮಿಯೆಂದರೂ ನೂರರಿಂದ ಮುನ್ನೂರು ಕೋಟಿ!

ವಿಪರ್ಯಾಸವೆಂದರೆ ಹೀಗೆ ಮೂರು ಸಾವಿರದ ಇನ್ನೂರ ನಲವತ್ತೆಂಟು ಕೋಟಿ ರೂಪಾಯಿಗಳ ಮೊತ್ತದ ಬೃಹತ್ ಕಾಮಗಾರಿಗಳನ್ನು ಹಮ್ಮಿಕೊಂಡ ಬಿಬಿಎಂಪಿ ದೊರೆಗಳಿಗೆ ಅದಕ್ಕೆ ದುಡ್ಡೆಲ್ಲಿಂದ ತರುವುದೆಂಬ ಕನಿಷ್ಠ ದೂರದೃಷ್ಟಿಯೇ ಇರಲಿಲ್ಲ, ಈಗಾಗಲೇ ಪಾಲಿಕೆ ಬೊಕ್ಕಸ ಬರಿದಾಗಿತ್ತು. ಈ ಹಿಂದೆ ಕಮೀಷನರ್ ಆಗಿದ್ದ ಸುಬ್ರಹ್ಮಣ್ಯಂ ಇದೇ ರೀತಿ ನಾಲ್ಕೈದು ಸಾವಿರ ಕೋಟಿ ರೂಪಾಯಿಗಳ ಟೆಂಡರ್ ಗೋಲ್‌ಮಾಲ್ ನಡೆಸಿ ಎತ್ತಂಗಡಿಯಾಗಿದ್ದನಲ್ಲ; ಆತ ಕೊಟ್ಟ ಟೆಂಡರ್‌ಗಳ ಕಾಮಗಾರಿಯ ನಲ್ವತ್ತು ಪರ್ಸೆಂಟ್ ಕೂಡಾ ಇನ್ನೂ ಪೂರ್ತಿಗೊಂಡಿರಲಿಲ್ಲ. ಸಾಲದ್ದಕ್ಕೆ ಆವತ್ತು ಕೊಟ್ಟ ಟೆಂಡರ್‌ಗಳ ಬಿಲ್‌ಪಾವತಿ ಮಾಡುವುದಕ್ಕೂ ಪಾಲಿಕೆ ಬಳಿ ದುಡ್ಡಿಲ್ಲ. ಇಂಥ ದಿವಾಳಿ ಸ್ಥಿತಿಯಲ್ಲೇ ಮತ್ತೆ 3248 ಕೋಟಿ ರೂಪಾಯಿಗಳ ಎರಡನೇ ರೌಂಡಿನ ಕಾಮಗಾರಿ ಯಜ್ಞಕ್ಕೆ ಕೈಯಿಟ್ಟ ಬಿಬಿಎಂಪಿಯ ಬ್ರಹ್ಮರಿಗೆ ಅದಕ್ಕೆ ದುಡ್ಡೆಲ್ಲಿಂದ ಹೊಂಚುವುದೆಂಬ ಲೆಕ್ಕಾಚಾರಕ್ಕಿಂತಲೂ ಮುಖ್ಯವಾಗಿದ್ದದ್ದು ಕಮಿಷನ್ ಹೊಡೆಯುವ ದುರ್ಬುದ್ಧಿ.

ಬಹುಶಃ ಪಾಲಿಕೆ ಚುನಾವಣೆ ಹತ್ತಿರ ಬರದೇ ಹೋಗಿದ್ದರೆ, ಆರಾಮವಾಗಿಯೇ ಲಪಟಾಯಿಸುವುದು ಕಟ್ಟಾ ಮತ್ತು ಅಶೋಕ್ ಹುನ್ನಾರವಾಗಿತ್ತು. ಯಾವಾಗ ಸುಪ್ರೀಂಕೋರ್ಟ್ ಪಾಲಿಕೆ ಚುನಾವಣೆಗೆ ದಿನಾಂಕ ಪಕ್ಕಾಗೊಳಿಸಿತೋ ಡೀಲು ದೊರೆಗಳ ಷಡ್ಯಂತ್ರಕ್ಕೆ ಕಲ್ಲುಬಿತ್ತು. ಯೋಜನೆಯಂತೆ ಟೆಂಡರ್‌ದಾರರ ತಾಂತ್ರಿಕ ಯೋಗ್ಯತೆ ನಿರ್ಧರಿಸಬೇಕಿದ್ದದ್ದು ಜನವರಿ ಹನ್ನೆರಡರಂದು. ಆ ನಂತರ ಫೈನಾನ್ಷಿಯಲ್ ಬಿಡ್ ಜರುಗಲೇಬೇಕಾಗಿದ್ದು ಜನವರಿ 16ರಂದು. ಆದರೆ ಜನವರಿ 15ರಿಂದಲೇ ಚುನಾವಣಾ ನೀತಿಸಂಹಿತೆ ಜಾರಿಗೆ ಬಂತೆಂದರೆ 3248 ಕೋಟಿ ಡೀಲಿನ ಕತೆ ಮುಗಿದಂತೆಯೇ.

ಮತ್ತೆ ಟೆಂಡರ್ ಪ್ರಕ್ರಿಯೆ ಶುರುವಾಗಬೇಕೆಂದರೆ ಜನವರಿ 25ರಂದು ಪಾಲಿಕೆ ಚುನಾವಣಾ ಪ್ರಕ್ರಿಯೆ ಮುಗಿಯಲೇಬೇಕಿತ್ತು. ಆ ಹೊತ್ತಿಗಾಗಲೇ ಹೊಸ ಕೌನ್ಸಿಲರ್‌ಗಳು ಬಂದಿರುತ್ತಾರೆ. ಹಾಗೊಮ್ಮೆ ಬಿಜೆಪಿಯೇ ಅಧಿಕಾರಕ್ಕೆ ಬಂದರೂ ಗೆದ್ದು ಬಂದ ಹೊಸ ಕೌನ್ಸಿಲರ್‌ಗಳಿಗೆ ಟೆಂಡರ್ ಗಿಟ್ಟಿಸಿದಾತ ಮತ್ತೆ ಹತ್ತು ಪರ್ಸೆಂಟ್ ಲಂಚ ಎತ್ತಿಡಲೇಬೇಕು. ಕಾಂಗ್ರೆಸ್ ಮತ್ತು ಜೆಡಿಎಸ್ ಕೌನ್ಸಿಲರ್‌ಗಳ ವಾರ್ಡುಗಳಲ್ಲಂತೂ ಸರ್ಕಾರಕ್ಕಾಗಲಿ, ಶಾಸಕನಿಗಾಗಲಿ ನಯಾಪೈಸೆಯ ಕಿಮ್ಮತ್ತಿರುವುದಿಲ್ಲ. ಇಂಥ ದುರಾಶೆಯಲ್ಲೆ ರಾತ್ರೋರಾತ್ರಿ ಡೀಲು ಮುಗಿಸುವ ಧಾವಂತಕ್ಕೆ ಬಿದ್ದ ಅಶೋಕ್ ಮತ್ತು ಕಟ್ಟಾ ಈ ಹೊತ್ತಿಗಾಗಲೇ ಆಂಧ್ರ, ಚೆನ್ನೈ, ಬಿಹಾರ ಮತ್ತು ಗುಜರಾತ್ ಮೂಲದ ಖತರ್‌ನಾಕ್ ಕಾಮಗಾರಿ ಕಂಪೆನಿಗಳ ಬ್ರೋಕರ್‌ಗಳ ಜೊತೆ ಡೀಲು ಕುದುರಿಸಿಬಿಟ್ಟಿದ್ದರು.

ಕಮಿಷನ್ನಿನ ಮೊತ್ತ ಕೂಡ ಈಗಾಗಲೇ ಕಟ್ಟಾ - ಅಶೋಕ್ ಜೇಬು ಸೇರಿಹೋಗಿತ್ತು. ಜನವರಿ ಹದಿನೈದರ ಒಳಗೇ ಇಡೀ ಹಗಲುದರೋಡೆಯನ್ನು ಪರಿಸಮಾಪ್ತಿಗೊಳಿಸುವ ಗಾಬರಿಗೆ ಬಿದ್ದ ಮಂತ್ರಿದ್ವಯರಿಬ್ಬರೂ ಜನವರಿ 12ರ ಬೆಳಿಗ್ಗೆಯಿಂದಲೇ ಕಾರ್ಯಾಚರಣೆಗಿಳಿದಿದ್ದಾರೆ. ಮಂಗಳವಾರ ರಾತ್ರಿ ಹತ್ತು ಗಂಟೆಯಿಂದ ಬೆಳಗಿನ ಜಾವ ನಾಲ್ಕರ ತನಕ ಪಾಲಿಕೆ ಕಚೇರಿ, ವಿಕಾಸ ಸೌಧದಲ್ಲಿ ಜಮೆಯಾದ ಪಾಲಿಕೆ ಧೂರ್ತರೆಲ್ಲ ಕಟ್ಟಾ ಮತ್ತು ಅಶೋಕ್ ಸೂಚಿಸಿದವರಿಗೇ ಟೆಂಡರ್ ನಿರ್ಧರಿಸಿದ್ದಾರೆ.

ದುರಂತವೆಂದರೆ ಹೀಗೆ ಇನ್ನೂರೊ-ಮುನ್ನೂರೋ ಕೋಟಿಯ ತಲಾ ಪ್ಯಾಕೇಜ್‌ನ ಟೆಂಡರ್ ಗಿಟ್ಟಿಸಿದ ಕಂಟ್ರ್ಯಾಕ್ಟರುಗಳ ಪೈಕಿ ಒಬ್ಬನೇ ಒಬ್ಬ ಕರ್ನಾಟಕದವನಿರಲಿಲ್ಲ!

ಬಹುಪಾಲು ಪ್ಯಾಕೇಜ್‌ಗಳೆಲ್ಲ ಆಂಧ್ರದ ಖದೀಮ ರೆಡ್ಡಿ ಕಂಟ್ರಾಕ್ಟರ್‌ಗಳ ಪಾಲಾಗಿತ್ತು. ಮಿಕ್ಕಂತೆ ಮುಂಬಯಿ, ಗುಜರಾತ್, ಚೆನ್ನೈ ಮತ್ತು ಬಿಹಾರದ ಕಂಟ್ರ್ಯಾಕ್ಟರುಗಳೂ ಪ್ಯಾಕೇಜ್ ಗಿಟ್ಟಿಸಿದ್ದರು. ಜನವರಿ 13ರ ರಾತ್ರಿಯ ಹೊತ್ತಿಗೆಲ್ಲಾ ಬೇಕುಬೇಕಾದವರಿಗೆ ಪಾಲಿಕೆ ಟೆಂಡರ್ ಬಟವಾಡೆ ಮಾಡಿದ ಬಿಜೆಪಿ ದೊರೆಗಳು ಇಡೀ ಟೆಂಡರ್ ಪ್ರಕ್ರಿಯೆಯನ್ನೇ ರಹಸ್ಯವಾಗಿರಿಸಿದ್ದರೂ ನಯಾಪೈಸೆಯ

ಕಟ್ಟಾ ಜಗ್ಗ ಮೇಯರ್ ಆಗ್ತಾನಾ?



ಪಾಲಿಕೆ ಚುನಾವಣೆಗೆ ಮೊದಲಿನಿಂದಲೂ ಅಡ್ಡಗಾಲಿಡುತ್ತಲೇ ಬಂದ ಕಟ್ಟಾ ನಾಯ್ಡುಗೆ ಎಷ್ಟೇ ಖರ್ಚಾದರೂ ಸರಿ ತನ್ನ ಮಗ ಕಟ್ಟಾ ಜಗ್ಗನನ್ನು ಮೇಯರ್ ಮಾಡಬೇಕೆಂಬ ದುರ್ಬುದ್ಧಿ ತಲೆ ಹೊಕ್ಕಿದೆ.. ಅದಕ್ಕೊಂದು ಪ್ರತಿಯೊಬ್ಬ ಕೌನ್ಸಿಲರ್‌ಗೂ ಕನಿಷ್ಠ ಐವತ್ತು ಲಕ್ಷದ ಕಾಣಿಕೆ ಸಲ್ಲಿಸುತ್ತಾನಂತೆ ಕಟ್ಟಾ ನಾಯ್ಡು.

ಹೀಗೆ ಮಗನನ್ನು ಮೇಯರ್ ಮಾಡಲು ರೊಕ್ಕ ಬೇಕಲ್ಲ; ಅದನ್ನೂ ಕಾಳರಾತ್ರಿಯ ಕಾಮಗಾರಿ ರಾಬರಿಯಿಂದಲೇ ದೋಚುವುದು ಕಟ್ಟಾ ಕಾರಸ್ತಾನ. ತನಗೆ ಅನುಕೂಲವಾಗಲೆಂದೇ ಪಾಲಿಕೆ ಚುನಾವಣೆಯನ್ನು ಮುಂದೂಡಲು ತನ್ನ ಛೇಲಾ ಜಗನ್ನಾಥ್ ಎಂಬಾತನನ್ನು ಛೂಬಿಟ್ಟು ಸುಪ್ರೀಂಕೋರ್ಟ್ ಪೂರ್ಣ ಪೀಠಕ್ಕೆ ಅರ್ಜಿ ಹಾಕಿಸಿದ ಕಟ್ಟಾ ಅಷ್ಟಕ್ಕೂ ತೃಪ್ತನಾಗದೇ ತನ್ನ ಹೆಬ್ಬಾಳದ ಶಿಷ್ಯೆ ವಸುಧಾ ಎಂಬಾಕೆಯ ಮೂಲಕ ಮತ್ತೊಂದು ಕೇಸು ದಾಖಲಿಸುತ್ತಾನೆ.


ಏನಕ್ಕೂ ಗತಿಯಿಲ್ಲದ ಈ ವಸುಧಾ ಎಂಬಾಕೆ ಹಿಂದಿದ್ದ ಅಟಾರ್ನಿ ಜನರಲ್ ಸೋಲಿ ಸೋರಾಬ್ಜಿಯಂಥ ದುಬಾರಿಯ ವಕೀಲರನ್ನಿಟ್ಟುಕೊಂಡು ಸುಪ್ರೀಂಕೋರ್ಟಿನಲ್ಲಿ ಕೇಸು ಹಾಕುತ್ತಾಳೆಂದರೆ ಅದು ಕಟ್ಟಾ ಕುತಂತ್ರವಲ್ಲದೇ ಮತ್ತೇನಲ್ಲ, ಪಾಲಿಕೆ ಚುನಾವಣೆಯನ್ನು ಮುಂದೂಡುವಂತೆ ಸುಪ್ರೀಂಕೋರ್ಟಿಗೆ ಹೋದ ದೇವನ್ ಎಂಬಾತನೂ ಕಟ್ಟಾನ ಅನುಯಾಯಿಯೆ!


ಇಷ್ಟೆಲ್ಲಾ ಕಿತಾಪತಿ ಮಾಡಿಯಾದರೂ ಮಗನನ್ನು ಮೇಯರ್ ಮಾಡಲು ನಿಂತ ಕಟ್ಟಾ ಬೆಂಗಳೂರನ್ನು ದೋಚದ ದುಡ್ಡಲ್ಲೇ ಮಾಡಬೇಕಾ? ಮುಂದೆ ಬೆಂಗಳೂರಿಗೆ ಮಗ ಕಂಟಕನಾಗದೇ ಇರುತ್ತಾನಾ? ಈ ಪುರುಷಾರ್ಥಕ್ಕೆ ಬೆಂಗಳೂರಿನ ಜನ ಬಿಜೆಪಿಯ 17 ಮಂದಿಯನ್ನು ಎಮ್ಮೆಲ್ಲೆಗಳನ್ನಾಗಿ ಮಾಡಬೇಕಿತ್ತಾ?

ಬೆಂಗಳೂರಿನ ವಶಕ್ಕಾಗಿ ಅಶೋಕ್ ಕೈ ಇಟ್ಟ ಡೀಲು!


ಯಾವತ್ತೋ ನಡೆಯಬೇಕಿದ್ದ ಬಿಬಿಎಂಪಿ ...ನಾವಣೆಯನ್ನು ಪದೇ ಪದೇ ಮುಂದೂಡುತ್ತಲೇ ...ದ ಬಿಜೆಪಿ ಸರ್ಕಾರದ ಕಾರಸ್ಥಾನದ ಹಿಂದಿರುವುದು ...ಡ ಬೆಂಗಳೂರಿನ ಲೂಟಿಯೇ. ಕೋಟಿಗಟ್ಟಲೇ ...ಚ ಕೊಟ್ಟು ಕಾಮಗಾರಿ ಟೆಂಡರ್‌ಗಳನ್ನು ...ಡಿದ ಖದೀಮ ಕಂಟ್ರ್ಯಾಕ್ಟರ್‌ಗಳೆಲ್ಲಾ ...ಗಾಗಲೇ ಎಮ್ಮೆಲ್ಲೆಗಳಿಗೆಂದು ಪಾಲು ...ಸಿದ್ದಾಗಿದೆ. ಗೆದ್ದ ಕೌನ್ಸಿಲರ್‌ಗಳಿಗೆ ...ತ್ತೊಮ್ಮೆ ಲಂಚ ಕೊಡುವುದೆಂದರೆ ಅದು ...ಭಕ್ಕೆ ಕುತ್ತಾಗುತ್ತದೆ. ಇಂಥ ಕಾಂಟ್ರ್ಯಾಕ್ಟ್ ...ಲಾಫಿಯಾ ಮತ್ತು ಬೆಂಗಳೂರಿನ ...ಮ್ಮೆಲ್ಲೆಗಳ ಸಿಂಡಿಕೇಟ್‌ನಿಂದಾಗಿಯೇ ...ೂಮ್ಮನಹಳ್ಳಿಯಂಥ ವಿಧಾನಸಭಾ ...ತ್ರವೊಂದಕ್ಕೆ 867 ಕೋಟಿ ರೂಪಾಯಿಗಳ ...ಮಗಾರಿ ಮಂಜೂರಾಗಿದೆ.

ಬೊಮ್ಮನಹಳ್ಳಿಯ ನೆಲಗಳ್ಳ ಶಾಸಕ ...ೀಶ್ ರೆಡ್ಡಿಗೆ ಈ ಒಂದೇ ಬಾಬತ್ತಿನಿಂದ ...ುವ ಲಂಚದ ಮೊತ್ತ ಕೇವಲ 86 ...ೋಟಿ!



ಸತೀಶ್ ರೆಡ್ಡಿ


ಎಂ.ಶ್ರೀನಿವಾಸ್

ರಾಜರಾಜೇಶ್ವರಿನಗರದ ಶಾಸಕ ...ಎಂ.ಶ್ರೀನಿವಾಸ್ ಒಬ್ಬರೇ ತಮ್ಮ ಕ್ಷೇತ್ರದ ...ಭಿವೃದ್ಧಿಗೆಂದು 444 ಕೋಟಿ ಮಂಜೂರು ...ಮಾಡಿಸಿಕೊಂಡಿದ್ದಾರೆ. ಮಂತ್ರಿ ಲಿಂಬಾ...ವಳಿಯ ಮಾದೇವಪುರ ಕ್ಷೇತ್ರಕ್ಕೊಂದು ...ಮಂಜೂರಾದ 373 ಕೋಟಿ, ಅಶೋಕ್ ...ಕ್ಕ ಲ್ಯಾಂಡ್ ಬ್ರೋಕರ್ ಮುನಿರಾಜನ ...ಸರಹಳ್ಳಿ ಕ್ಷೇತ್ರಕ್ಕೊಂದು ಬಿಡುಗಡೆಯಾದ ...9 ಕೋಟಿ ರೂಪಾಯಿಗಳು ಏನಾಯಿತು, ...ಲ್ಲಿ ಪೋಲಾಯಿತೆಂಬುದೇ ಯಾರಿಗೂ ...ತಿಳಿತ್ತಿಲ್ಲ.


ಲಿಂಬಾವಳಿ

ಇದು ಈಗಾಗಲೇ ಬಿಡುಗಡೆಯಾದ ...ಮೊತ್ತ. ಬೆಂಗಳೂರಿನ 28 ಮಂದಿ ...ಮ್ಮೆಲ್ಲೆಗಳ ಪೈಕಿ ಕಾಂಗ್ರೆಸ್ಸಿನ ಕೃಷ್ಣಬೈರೇ...ಗೌಡರ ಬ್ಯಾಟರಾಯನಪುರಕ್ಕೊಂದು ...ಮಂಜೂರಾದ 270 ಕೋಟಿ ಮತ್ತು ...ಬಿ.ನರೇಂದ್ರ ಬಾಬು ಗೆದ್ದು ಬಂದ ...ಮಹಾಲಕ್ಷ್ಮಿಲೇಔಟ್‌ಗೆ ಬಿಡುಗಡೆಯಾದ ...ುನ್ನೂರು ಕೋಟಿಯ ಆಕರ್ಷಣೆ ...ಎದುರು ಬೆಂಗಳೂರಿನ ಯಾವ ಎಮ್ಮೆಲ್ಲೆ ...ನೇ ಪಾಲಿಕೆ ಚುನಾವಣೆಯನ್ನು ...ಯಸುತ್ತಾನೆ?


ಬಿ.ನರೇಂದ್ರಬಾಬು

ಹೀಗಾಗಿ ಬೆಂಗಳೂರಿನ ಯಾರೇ ಒಬ್ಬ ಶಾಸಕನಿಗೂ ...ಲಿಕೆ ಚುನಾವಣೆ ಬೇಕಿಲ್ಲ. ಒಮ್ಮೆ ಪಾಲಿಕೆ ...ನಾವಣೆಯಾಗಿ ಮೇಯರ್ ಆಯ್ಕೆಯಾಯಿತೆಂದರೆ ಅದರ ಮರುದಿನದಿಂಲೇ ಎಮ್ಮೆಲ್ಲೆಗಳು ಡಮ್ಮಿಯಾಗಿ ಕೌನ್ಸಿಲರ್‌ಗಳು ಬೆಂಗಳೂರಿನ ರಾಜರಾಗುತ್ತಾರೆ. ಸದ್ಯ ಶತಾಯಗತಾಯ ಪಾಲಿಕೆ ಚುನಾವಣೆಯಾಗದಂತೆ ಅಡ್ಡಗಾಲಿಡುತ್ತಲೇ ಬಂದವರ ಪೈಕಿ ಮುಂಚೂಣಿಯಲ್ಲಿರುವುದು ಮಂತ್ರಿ ಆರ್.ಅಶೋಕ್ ಬಿಜೆಪಿ ಸರ್ಕಾರದ ದುರಾಡಳಿತಕ್ಕೆ ಬೇಸತ್ತ ಬೆಂಗಳೂರಿನ ಜನ ಹಿಂದಿನಂತೆ ಬಿಜೆಪಿಯನ್ನು ಗೆಲ್ಲಿಸುವುದು ಕಷ್ಟ ಎಂಬ ಅಳುಕು ಅಶೋಕ್‌ಗಿದೆ. ಕಮ್ಮಿಯೆಂದರೂ 130 ಸ್ಥಾನಗಳಲ್ಲಿ ಗೆಲ್ಲುವ ಲೆಕ್ಕ ಹಾಕಿಯೇ ಬಿಜೆಪಿಗೆ ಅನುಕೂಲವಾಗುವಂತೆ ವಾರ್ಡುಗಳನ್ನೂ ಕ್ಯಾಟಗರಿಯನ್ನೂ ರೂಪಿಸಿದರೂ 95ರಿಂದ 100 ಗೆದ್ದರೆ ಅದೇ ಹೆಚ್ಚೆಂದು ಇಂಟಲಿಜೆನ್ಸ್ ವರದಿ ಮಾಡಿ ಕೊಟ್ಟಿದೆ.

ಇಷ್ಟಾಗ್ಯೂ ಬೆಂಗಳೂರನ್ನು ವಶಪಡಿಸಿಕೊಳ್ಳಬೇಕೆಂದರೆ ಅದಕ್ಕೊಂದು ನಾಮನಿರ್ದೇಶಿತ ಕೌನ್ಸಿಲರ್‌ಗಳೇ ಬರಬೇಕಂತೆ. ರಾಜ್ಯಸಭಾ ಸದಸ್ಯರು, ಲೋಕಸಭಾ ಸದಸ್ಯರು, ಶಾಸಕರು, ಎಮ್ಮೆಲ್ಸಿಗಳೆಲ್ಲರಿಗೂ ಮೇಯರ್ ಆಯ್ಕೆಯಲ್ಲಿ ಮತದಾನದ ಹಕ್ಕಿದೆಯಾದರೂ ಸರ್ಕಾರದಿಂದ ನಾಮನಿರ್ದೇಶಿತ 20 ಮಂದಿ ಕೌನ್ಸಿಲರ್‌ಗಳಿಗೆ ಓಟಿಂಗ್ ಪವರ್ ದೊರೆತರಷ್ಟೇ ಬಿಜೆಪಿಯ ಮೇಯರ್ ಗೆಲ್ಲಲು ಸಾಧ್ಯ.

ಪಾಲಿಕೆ ಫಲಿತಾಂಶ ಬಂದ ಮರುದಿನವೇ 20 ಮಂದಿ ನಾಮನಿರ್ದೇಶಿತರನ್ನು ಆಯ್ದು ಕೌನ್ಸಿಲರ್‌ಗಳನ್ನಾಗಿಸುವುದು ಅಶೋಕ್ ತಂತ್ರವಂತೆ. ಅದಕ್ಕೊಂದು ಸಚಿವ ಸಂಪುಟವೇ ನಿರ್ಧಾರ ಕೈಗೊಂಡು ನಾಮನಿರ್ದೇಶಿತರಿಗೂ ಮತದಾನದ ಹಕ್ಕು ಕೊಡುವಂತೆ ರಾಜ್ಯಪಾಲರಿಂದ ಅಂಕಿತ ಪಡೆಯಬೇಕು. ಸದ್ಯ ಅಶೋಕ್ ರಾಜ್ಯಪಾಲರ ಅಂಕಿತಕ್ಕಾಗಿ ಮತ್ತೊಂದು ಷಡ್ಯಂತ್ರ ಶುರುಹಚ್ಚಿಕೊಂಡಿದ್ದಾನೆ. ಪಾಲಿಕೆ ಚುನಾವಣೆಗೆ ಮೊದಲೇ ನಾಮನಿರ್ದೇಶಿತರಿಗೆ ಮತದಾನದ ಹಕ್ಕು ಜಾರಿಗೆ ಬಂತೆಂದರೆ ಅಶೋಕ್ ಉದ್ದೇಶ ಈಡೇರಿದಂತೆಯೇ.

ಬೆಂಗಳೂರಿನ 17 ಮಂದಿ ಬಿಜೆಪಿ ಶಾಸಕರು, ಮೂವರು ಎಂಪಿಗಳು, ರಾಜ್ಯಸಭೆ ಮತ್ತು ಪರಿಷತ್ ಸದಸ್ಯರೂ ಸೇರಿದಂತೆ ಇಪ್ಪತ್ತು ಮಂದಿ ನಾಮನಿರ್ದೇಶಿತ ಕೌನ್ಸಿಲರ್‌ಗಳು ಸೇರಿಬಿಟ್ಟರೆ ಅಧಿಕಾರ ಕಬಳಿಸಲು ಬಿಜೆಪಿಯ ದಾರಿ ಸಲೀಸಾಗುತ್ತದೆ. ಆದರೆ ನಾಮನಿರ್ದೇಶಿತರಿಗೆ ಓಟಿಂಗ್ ಪವರ್ ಕೊಡಲು ರಾಜ್ಯಪಾಲರು ಅಂಕಿತ ಕೊಡಬೇಕಲ್ಲ? ಅದೇ ಈಗ ಸಮಸ್ಯೆಯಾಗಿದೆ. ●

...ನ್ಯಾಕ್ಟು ಕೂಡ ಕರ್ನಾಟಕದ ಯಾರೇ ಗುತ್ತಿಗೆದಾರನಿಗೆ ...ಎಲ್ಲವಲ್ಲ; ಅಲ್ಲಿಗೆ ಇಡೀ ಪ್ರಕರಣದ ಹಕೀಕತ್ತು ...ತ್ತಾಗಿಹೋಗಿತ್ತು.

...ಇಲ್ಲಿ ಪ್ರಶ್ನೆಯೆಂದರೆ ಬೆಂಗಳೂರಿನ ರಸ್ತೆ ಅಗಲೀಕರಣಕ್ಕೂ ...ಟಕದ ಯಾವೊಬ್ಬ ಕಂಟ್ರ್ಯಾಕ್ಟರನಿಗೂ ಯೋಗ್ಯತೆ ...ಲ್ಲವೆ? ಈತನಕ ಎಂತೆಂಥದೋ ಭಾರೀ ...ಗಾರಿಗಳನ್ನೆಲ್ಲ ದೇವಿಪ್ರಸಾದ್ ಶೆಟ್ಟಿ, ಮುನಿರತ್ನಂ ...ಯ್ಯ, ಜಯರಾಮರೆಡ್ಡಿ, ಚಂದ್ರಪ್ಪನಂಥ ಲೋಕಲ್ ...ಟ್ರ್ಯಾಕ್ಟರ್‌ಗಳು ಯಶಸ್ವಿಯಾಗಿ ಮುಗಿಸಿದ್ದಾರೆ. ಇಂಥ ...ಟ್ರ್ಯಾಕ್ಟರ್‌ಗಳನ್ನಿಟ್ಟುಕೊಂಡೇ ಈ ಹಿಂದೆ ಪಾಲಿಕೆ ಬಾಂಡ್ ...ಗಾರಿಗಳನ್ನು ಮುಗಿಸಿದೆ.

...ಉದಯ್ ಗರುಡಾಚಾರ್, ಆರ್.ಎನ್.ಶೆಟ್ಟಿ, ...ರಾಜು, ಕೆ.ವಿ.ನಾರಾಯಣ್, ಪಲ್ಲವಿ ಕನ್‌ಸ್ಟ್ರಕ್ಷನ್ಸ್, ...ಲ್ ಶಾಸ್ತ್ರಿ ಮತ್ತು ಶಾಸಕ ಹ್ಯಾರೀಸ್ ತಂದೆ ಎನ್.ಎ. ...ಮಮ್ಮದ್ ನಳಪಾದ್ ತರಹದ ಅದೆಷ್ಟು ...ಟ್ರ್ಯಾಕ್ಟರುಗಳು ಕರ್ನಾಟಕದಲ್ಲಿಲ್ಲ, ಆದರೆ ಇವರ್‍ಯಾರೂ ...ಸುಮ್ಮಾಗಿ ಒಂದೇ ಕಂತಿನಲ್ಲಿ ಕೋಟಿಗಟ್ಟಲೇ ಲಂಚ ...ವುದಿಲ್ಲ.


...ಇದು ಅಶೋಕ್ ಮತ್ತು ಕಟ್ಟಾ ಗ್ಯಾಂಗಿನ ಸಮಸ್ಯೆ. ...ದೋಚಲೆಂದೇ ಶೇ. 35ರಿಂದ 40 ರಷ್ಟು ...ಪಾ ದರ ನಿಗದಿಪಡಿಸಿ ಎಸ್ಟಿಮೇಟ್ ಮಾಡಿದ್ದಾರೆ. ...ಎಸ್ಟಿಮೇಟ್ ಮಾಡುವಾಗ ಲೋಕೋಪಯೋಗಿ ಇಲಾಖೆಯ ಅಥವಾ ರಾಷ್ಟ್ರೀಯ ಹೆದ್ದಾರಿ ಕಾಮಗಾರಿಯ ಎಸ್.ಆರ್. ದರವನ್ನು ಮಾನದಂಡವನ್ನಾಗಿ ಪರಿಗಣಿಸಬೇಕೆಂಬ ನಿಯಮವನ್ನೇ ಉಲ್ಲಂಘಿಸಿದ್ದಾರೆ. ರಾತ್ರೋರಾತ್ರಿ ಸಚಿವ ಸಂಪುಟದ ಅನುಮೋದನೆ ಪಡೆದು ಕೋರ್ ವರ್ಕ್‌ಗೆ ಮಂಜೂರಾತಿ ಕೊಟ್ಟಿದ್ದಾರೆ. ಹೋಗಲಿ ಇಷ್ಟೆಲ್ಲಾ ಸರ್ಕಸ್ ಮಾಡಿ ದುಡ್ಡು ಸುರಿದು ಕೊಟ್ಟ ಕಾಂಟ್ರ್ಯಾಕ್ಟಿನ ಉದ್ದೇಶವಾದರೂ ಎಂಥದ್ದು?

ಅದೇ ಟಾರು-ಮೋರಿಯ ಕಾಮಗಾರಿ ತಾನೇ?

ಈಗಾಗಲೇ ಮುಕ್ಕಾಲು ಬೆಂಗಳೂರಿನ ರಸ್ತೆಗಳಿಗೆ ಟಾರು ಬಿದ್ದಾಗಿದೆ. ಮೋರಿ ಹೂಳೆತ್ತುವ ಕಾಮಗಾರಿ ನೆಪದಲ್ಲಿ ಪ್ರತಿವರ್ಷವೂ ಕೋಟ್ಯಂತರ ರೂಪಾಯಿ ಕಳ್ಳಬಿಲ್ಲು ದೋಚುತ್ತಲೇ ಇರುತ್ತಾರೆ. ಟಾರು ಹಾಕಿದ ರಸ್ತೆಗೇ ಮತ್ತೆ ಟಾರು ಹಾಕಿದಂತೆ ಬಿಲ್ಲು, ಹೂಳೇ ಇಲ್ಲದ ಮೋರಿಯ ಹೆಸರಲ್ಲಿ ಮತ್ತೆ ದುಡ್ಡು ದೋಚಲು 3248 ಕೋಟಿ ರೂಪಾಯಿಗಳಷ್ಟು ಜನರ ತೆರಿಗೆಯ ದುಡ್ಡು ಪೋಲಾಗಬೇಕಾ?

ಈ ಹಿಂದೆ ಸುಬ್ರಹ್ಮಣ್ಯಂ ಕಮೀಷನರ್ ಆಗಿದ್ದಾಗ ಇಂಥದ್ದೇ ಕಾಮಗಾರಿಗಳ ಹೆಸರಲ್ಲಿ ನಾಲ್ಕು ಸಾವಿರ ಕೋಟಿಯಷ್ಟು ಪೋಲಾಯಿತಲ್ಲ ಆ ದುಡ್ಡು ಏನಾಯಿತು? ಮಾಡಿದ ಕಾಮಗಾರಿಯ ಗತಿ ಏನಾಯ್ತು?

ಕಟ್ಟಾ, ಅಶೋಕ್, ಯಡ್ಡಿ ಕೂಟದ ಹಗಲು ದರೋಡೆಗೆ ಕೊನೆಯೆಂಬುದೇ ಇಲ್ಲವೇ? ●



ಬಾಲಗಂಗಾಧರ ಅಸ್ವಸ್ಥ ಪೀಠ ಏರಲು ಪೈಪೋಟಿ ಶುರು.....

ಕೋಟ್ಯಂತರ ರೂಪಾಯಿಗಳ ಮೌಲ್ಯದ ಆಸ್ತಿ, ಪ್ರತಿಷ್ಠಿತ ಆಸ್ಪತ್ರೆಗಳು, ಕಾಲೇಜುಗಳು ಮತ್ತು ಅಪಾರ ಪ್ರಮಾಣದ ಭೂಮಿಯನ್ನು ಹೊಂದಿರುವ ಒಕ್ಕಲಿಗರ ಆದಿಚುಂಚನಗಿರಿ ಮಠದ ಉತ್ತರಾಧಿಕಾರಿ ಪಟ್ಟಕ್ಕೆ ಮಠದ ಅಂಗಳದಲ್ಲಿ ಪೈಪೋಟಿ ಶುರುವಾಗಿದೆ.

ಇದಕ್ಕೆ ಮುಖ್ಯ ಕಾರಣ ಬಾಲಗಂಗಾಧರ ಸ್ವಾಮಿಗಳು ತೀವ್ರ ಅಸ್ವಸ್ಥರಾಗಿರುವುದು. ಇದೇ ಜನವರಿ 18 ರಂದು ನಾಗಮಂಗಲದ ಪ್ರಥಮ ದರ್ಜೆ ಕಾಲೇಜಿನಲ್ಲಿ ಅವರ 66ನೇ ಹುಟ್ಟುಹಬ್ಬದ ಆಚರಣೆ ನಡೆಯಲಿದೆ. ಆದರೀಗ ಬಾಲಗಂಗಾಧರರು 80 ವರ್ಷಕ್ಕಿಂತ ಹೆಚ್ಚಾದವರಂತೆ ಹಣ್ಣು ಹಣ್ಣಾಗಿದ್ದಾರೆ. ಅವರ ಎರಡೂ ಕಿಡ್ನಿಗಳು ಫೇಲ್ ಆಗಿದ್ದು, ಕಿಡ್ನಿ ಕಸಿ ಮಾಡಿಸಿಕೊಳ್ಳಲು ಅವರು ಸಿದ್ಧರಿಲ್ಲ. ಈಗ ಅವರು ಡಯಾಲಸಿಸ್ ಮೇಲೆಯೇ ಅವಲಂಬಿತರಾಗಿದ್ದಾರೆ. ವಾರಕ್ಕೆ ಎರಡರಿಂದ ಮೂರು ಸಲ ಬೆಂಗಳೂರಿನ ಕೆಂಗೇರಿಯ ಅವರ ಬಿ.ಜಿ.ಎಸ್. ಆಸ್ಪತ್ರೆಯಲ್ಲಿ ಡಯಾಲಸಿಸ್ ಮಾಡಿಸಿಕೊಳ್ಳುವ ಸ್ವಾಮಿಗಳು, ಡಯಾಲಸಿಸ್ ವೇಳೆಯಲ್ಲಿ ತೀವ್ರ ನೋವನ್ನು ಅನುಭವಿಸುತ್ತಿದ್ದಾರೆ. ಹಣ್ಣುಹಣ್ಣಾಗಿರುವ ಅವರ ದೇಹಕ್ಕೆ ಡಯಾಲಸಿಸ್ ನೋವನ್ನು ಅರಗಿಸಿಕೊಳ್ಳುವುದು ಕಷ್ಟವಾಗುತ್ತಿದೆ. ಹೀಗಾಗಿ ಒಂದು ರೀತಿಯಲ್ಲಿ ಅವರ ಸ್ಥಿತಿ ಚಿಂತಾಜನಕವಾಗಿದೆ.

ಈ ಕಾರಣಕ್ಕಾಗಿಯೇ ಈಗ ಅವರ ಉತ್ತರಾಧಿಕಾರಿ ಯಾರಾಗಬಹುದು ಎಂಬ ಚರ್ಚೆ ಶುರುವಾಗಿದ್ದು, ಈಗಾಗಲೇ ಹಲವಾರು ಆಕಾಂಕ್ಷಿಗಳು ಪೈಪೋಟಿಗೆ ಬಿದ್ದಿದ್ದು ಲಾಬಿ ಶುರುವಾಗಿದೆ. ಶಿವಮೊಗ್ಗದ ಶಾಖಾಮಠದ ಸ್ವಾಮಿ, ಇತರ ಚಿಕ್ಕಪುಟ್ಟ ಮಠಗಳ ಕೆಲ ಸ್ವಾಮಿಗಳು, ಆದಿಚುಂಚನಗಿರಿಯಲ್ಲೇ ಇರುವ ಹಲವು ಜ್ಯೂನಿಯರ್ ಸ್ವಾಮಿಗಳು ಪೀಠದತ್ತ ಆಸೆಗಣ್ಣಿನಿಂದ ನೋಡಲು ಶುರು ಮಾಡಿದ್ದಾರೆ.

ಆದರೆ ಬಹುತೇಕರ ಅಭಿಪ್ರಾಯದಂತೆ ಮತ್ತು ಬಾಲಗಂಗಾಧರರ ಇಚ್ಛೆಯಂತೆ ಚಿಕ್ಕಬಳ್ಳಾಪುರ ಶಾಖಾಮಠದ ನಿರ್ಮಲಾನಂದನಾಥ ಸ್ವಾಮಿಗಳೇ ಉತ್ತರಾಧಿಕಾರಿಯಾಗುವ ಲಕ್ಷಣಗಳಿವೆ. 38 ವರ್ಷದ ನಿರ್ಮಲಾನಂದರು ಎಂ.ಟೆಕ್. ಓದಿದ್ದು ಸ್ವಇಚ್ಛೆಯಿಂದ ಸ್ವಾಮಿಯಾಗಿದ್ದಾರೆ. ನಾಲ್ಕೈದು ಭಾಷೆಗಳನ್ನು ಬಲ್ಲ ನಿರ್ಮಲಾನಂದ ಬುದ್ಧಿವಂತ; ರಾಜಕಾರಣಿಗಳ ನಂಟೂ ಇದೆ. ನಡೆನುಡಿ, ಚಾರಿತ್ರ್ಯವೂ ಚೆನ್ನಾಗಿದೆ. ಅಬ್ದುಲ್ ಕಲಾಂರಂತಹ ಗಣ್ಯರು ಬಂದಾಗ ಸಭೆ, ಅತಿಥಿಗಳ ವಾಸ್ತವ್ಯ ಎಲ್ಲ ನೋಡಿಕೊಳ್ಳುವುದು ಇವರೇ. ಮಠದ ಸಂಸ್ಥೆಗಳ ಹಣಕಾಸಿನ ಮತ್ತು ಇತರ ವಿಷಯಗಳಲ್ಲಿ ಬಾಲಗಂಗಾಧರರು ನಿರ್ಮಲಾನಂದರ ಸಲಹೆಗಳನ್ನು ಪಡೆಯುವುದುಂಟು. ಈ ಎಲ್ಲ ಕಾರಣಗಳಿಂದ ನಿರ್ಮಲಾನಂದರಿಗೆ ಪೀಠದ ಪಟ್ಟ ಸಿಗುವ ಬಹುತೇಕ ಸಾಧ್ಯತೆಗಳಿವೆ.

ಕರಟಕ-ದಮನಕ ಜೋಡಿ

ಆದರೆ ಯಾರೇ ಪೀಠ ಏರಿದರೂ ಇಬ್ಬರು ಧೂರ್ತರ ಮಾತಿನಂತೆ ನಡೆಯುವುದು ಅಗತ್ಯವಾಗಿದೆ. ಒಬ್ಬಾತ ಶೇಖರಗೌಡ, ಇನ್ನೊಬ್ಬಾತ ರಾಮಕೃಷ್ಣೇಗೌಡ. ಆಯಕಟ್ಟಿನ ಸ್ಥಾನಗಳಲ್ಲಿ ಕುಳಿತಿರುವ ಇವರು ಮಠದ ಬಹುತೇಕ ಸಂಸ್ಥೆಗಳ ಮೇಲೆ ಹಿಡಿತ ಸಾಧಿಸಿಬಿಟ್ಟಿದ್ದಾರೆ.


ಬೆಂಗಳೂರು, ಕುಂಬಳಗೋಡಿನಲ್ಲಿರುವ ಚುಂಚನಗಿರಿ ಮಠದ ಕಾಲೇಜು, ಆಸ್ಪತ್ರೆಗಳ ವ್ಯವಹಾರದ ಚುಕ್ಕಾಣಿ ಹಿಡಿದಿರುವ ಶೇಖರಗೌಡ ಅಧ್ವಾನಗಳಿಗೆ ಕುಖ್ಯಾತಿಯಾದವನು. ಈತನ ರಾಸಲೀಲೆಗಳು ಅನೇಕ. ಮಠದ ಅಂಗಳದಿಂದ ಕೆಲ ಮಹಿಳೆಯರು ನಿಗೂಢವಾಗಿ ಕಣ್ಮರೆಯಾದಾಗ ಅಲ್ಲಿ ಶೇಖರಗೌಡನ ನೆರಳೇ ಕಂಡುಬಂದಿತ್ತು.

ಇನ್ನೊಬ್ಬ ನಾಗಮಂಗಲದ ರಾಮಕೃಷ್ಣೇಗೌಡ. ಈತ ಆಡಳಿತಾಧಿಕಾರಿಯಾಗಿದ್ದು ನಾಗಮಂಗಲ ಮತ್ತು ಸುತ್ತಲಿನ ಮಠದ ಸಂಸ್ಥೆಗಳನ್ನು ನಿಯಂತ್ರಿಸುತ್ತಾನೆ. ಒಂದಾನೊಂದು ಕಾಲದಲ್ಲಿ ಈತ ಶಾಲಾಮೇಷ್ಟ್ರು ಆಗಿದ್ದಾತ. ಹಗಲೊತ್ತು ಮಕ್ಕಳಿಗೆ ಪಾಠ ಮಾಡಿ ರಾತ್ರಿ ಹೊತ್ತು ಹರಿಕತೆ ಹೇಳುವ ದಾಸಯ್ಯನಾಗಿದ್ದ. ಬಾಲಗಂಗಾಧರರ ಜೊತೆ ಮಠ, ಸಂಸ್ಥೆಗಳನ್ನು ಕಟ್ಟಲು ದುಡಿದ ಪುರುಷೋತ್ತಮಾನಂದನಾಥ ಸ್ವಾಮೀಜಿಯವರನ್ನು ಹತ್ತಿಕ್ಕಿದ್ದು ಇದೇ ರಾಮಕೃಷ್ಣೇಗೌಡ. ಬಾಲಗಂಗಾಧರರ ಕಿವಿಕಚ್ಚಿ ಅವರಿಂದ ಪುರುಷೋತ್ತಮಾನಂದರನ್ನು ದೂರ ಮಾಡಿ ತಾನು ಸ್ವಾಮೀಜಿಗಳ ಹತ್ತಿರಕ್ಕೆ ಬಂದವ. ಹಿಂದೆಲ್ಲ ಮಠದ ಕಟ್ಟಡಗಳಿಗೆ ರೈತರಿಂದ ಭೂಮಿ ಕೊಡಿಸುತ್ತಿದ್ದ ಈತ ಇವತ್ತು ಆಗರ್ಭ ಶ್ರೀಮಂತ. ಕಾರು, ಬಂಗಲೆಗಳ ಜೊತೆಗೆ ಈತನಿಗೆ ಪಿ.ಎ. ಕೂಡಾ ಇದ್ದಾರೆ.

ಸದ್ಯ ಮಠದ ಸಂಸ್ಥೆಗಳ ಬಹುತೇಕ ವ್ಯವಹಾರಗಳನ್ನು ನಿಯಂತ್ರಿಸುವುದೇ ಇದೇ ಇಬ್ಬರು ಕರಟಕ ದಮನಕರು. ಮುಂದೆ ಯಾರೇ ಹೊಸ ಸ್ವಾಮಿ ಬಂದರೂ ಈ ಧೂರ್ತರ ಹಿಡಿತದಲ್ಲೇ ಇರಬೇಕು. ಅಂತಹ ವಾತಾವರಣವನ್ನು ಇವರಿಬ್ಬರೂ ನಿರ್ಮಿಸಿಬಿಟ್ಟಿದ್ದಾರೆ. ಹೊಸ ಸ್ವಾಮಿ ಈ ಇಬ್ಬರನ್ನೂ ನಿಯಂತ್ರಿಸುವ ಛಾತಿ ಬೆಳೆಸಿಕೊಂಡರಷ್ಟೇ ಮಠದ ಸಂಪತ್ತಿನ ರಕ್ಷಣೆಯಾಗಲಿದೆ.

ಅದೆಲ್ಲ ಇರಲಿ, ಸದ್ಯ 66ನೇ ಹುಟ್ಟುಹಬ್ಬ ಆಚರಿಸಿಕೊಳ್ಳುತ್ತಿರುವ ಬಾಲಗಂಗಾಧರರಿಗೆ ಶುಭಾಶಯಗಳು. ಅವರ ಆರೋಗ್ಯ ಸುಧಾರಿಸಿ ನೂರ್ಕಾಲ ಬಾಳುವಂತಾಗಲಿ.

ಮಲ್ಲಿ



ವೀರೇಂದ್ರ ಹೆಗ್ಗಡೆ ಅದೆಂತಹ 'ಕರ್ನಾಟಕ ರತ್ನ'!..

ನಿನ್ನೆ ಮಕರ ಸಂಕ್ರಾಂತಿಯ ಬೆಳ್ಳಂಬೆಳಗ್ಗೆಯೇ ರಾಜ್ಯದ ಜನರಿಗೆ ಕೆಟ್ಟ ಸುದ್ದಿಯೊಂದು ಕಾದಿತ್ತು. ಅದು ರಾಜ್ಯದ ಅತ್ಯುನ್ನತ ಪ್ರಶಸ್ತಿಯಾದ 'ಕರ್ನಾಟಕ ರತ್ನ'ವನ್ನು ತಥಾಕಥಿಥ ಸಾಹಿತಿ ದೇ.ಜವರೇಗೌಡ ಹಾಗೂ ಧರ್ಮಸ್ಥಳದ ಧರ್ಮಾಧಿಕಾರಿ ಡಾ. ಡಿ. ವೀರೇಂದ್ರ ಹೆಗ್ಗಡೆಯವರಿಗೆ ನೀಡುವ ಸರ್ಕಾರದ ನಿರ್ಧಾರ. ಈ ಇಬ್ಬರು ಮಹಾಶಯರ ಅಸಲೀ ಮುಖಗಳನ್ನು ಚೆನ್ನಾಗಿ ಬಲ್ಲ ನಾಡಿನ ಬಹುತೇಕ ಬುದ್ಧಿಜೀವಿಗಳು, ಪ್ರಜ್ಞಾವಂತ ನಾಗರಿಕರು ಈ ಸುದ್ದಿಯನ್ನು ಪತ್ರಿಕೆಗಳಲ್ಲಿ ಓದಿ ನಿಜಕ್ಕೂ ದಿಗ್ಭ್ರಾಂತರಾದರು. ನಾಡಿನ ಪ್ರಗತಿಗಾಗಿ ಅಪಾರ ಕೊಡುಗೆ ನೀಡಿರುವ, ಯಾವುದೋ ನಿರ್ದಿಷ್ಟ ಕ್ಷೇತ್ರದಲ್ಲಿ ಅಮೋಘ ಸಾಧನೆ ಮಾಡಿರುವ, ನಾಡಿನ ಭಾಷೆ, ಸಂಸ್ಕೃತಿ, ನೆಲ, ಜಲ ಸಂಪತ್ತುಗಳ ರಕ್ಷಣೆಗಾಗಿ ಹಗಲಿರುಳೂ ಶ್ರಮಿಸಿದ ಮಹಾನ್ ಚೇತನಗಳಿಗೆ ಸಲ್ಲಬೇಕಿದ್ದ ಇಂಥ ಅಪೂರ್ವ ಪ್ರಶಸ್ತಿ ಸಾಹಿತಿ ಎಂಬ ಮುಖವಾಡದಡಿಯಲ್ಲಿ ಜಾತಿ ರಾಜಕೀಯ ಮಾಡುತ್ತಾ ಬೆಳೆದಿರುವ ದೇಜಗೌಗೆ ಹಾಗೂ ದೇವರು, ಧರ್ಮ, ದಾನ, ಗ್ರಾಮೀಣಾಭಿವೃದ್ಧಿ ಮುಂತಾದವುಗಳ ಮುಸುಕಿನಲ್ಲಿ ತನ್ನ ವೈಯಕ್ತಿಕ ಸಾಮ್ರಾಜ್ಯವನ್ನು ಬೆಳೆಸಿಕೊಂಡಿರುವ ವೀರೇಂದ್ರ ಹೆಗ್ಗಡೆಗೆ ನೀಡುವ ಮೂಲಕ ಯಡಿಯೂರಪ್ಪ 'ಕರ್ನಾಟಕ ರತ್ನ' ಪ್ರಶಸ್ತಿಗೆ ಅಪಮಾನ ಮಾಡಿದ್ದಾರೆ.

ಹಿಂದೂ ದೇಗುಲ ಜೈನನ ಕೈಯಲ್ಲಿ

ಪ್ರಾಯಶಃ ಕರ್ನಾಟಕದಲ್ಲಿ ಧರ್ಮಸ್ಥಳದ ಹೆಸರನ್ನು ಕೇಳದವರಿಲ್ಲ. ಮಂಜುನಾಥಸ್ವಾಮಿಯ ದೇಗುಲದ ದೆಸೆಯಿಂದ ಅದು ಕೇವಲ ಕರ್ನಾಟಕದಲ್ಲಿ ಮಾತ್ರವಲ್ಲ ದೇಶದಾದ್ಯಂತ ಹೆಸರುವಾಸಿಯಾದ ಯಾತ್ರಾಸ್ಥಳವಾಗಿದೆ. ಪ್ರತಿದಿನ ಸಾವಿರಾರು ಭಕ್ತರು ಅಲ್ಲಿಗೆ ಭೇಟಿ ಕೊಟ್ಟು ಅಪಾರ ಪ್ರಮಾಣದ ಕಾಣಿಕೆಯನ್ನು ಅರ್ಪಿಸುವುದರಿಂದ ಇಡೀ ರಾಜ್ಯದಲ್ಲಿಯೇ ಅದು ಅತ್ಯಂತ ಶ್ರೀಮಂತ ದೇವಾಲಯವಾಗಿ ಮಾರ್ಪಟ್ಟಿದೆ.

ಧರ್ಮಸ್ಥಳದ ಮಂಜುನಾಥ ದೇವಾಲಯವನ್ನು ಹೊರತುಪಡಿಸಿ ಕರ್ನಾಟಕದಲ್ಲಿ ಹೆಚ್ಚೂಕಡಿಮೆ ಐವತ್ತು ಸಾವಿರ ದೇವಾಲಯಗಳಿವೆ. ಅವುಗಳಲ್ಲಿ ಹೆಚ್ಚಿನವು ಧಾರ್ಮಿಕ ದತ್ತಿ ಕಾನೂನಿನ ಪ್ರಕಾರ ಸರ್ಕಾರದ ನಿಯಂತ್ರಣದಲ್ಲಿವೆ. ಅವೆಲ್ಲವೂ ಸೇರಿ ಹೆಚ್ಚೆಂದರೆ ಒಂದು ವರ್ಷಕ್ಕೆ ಸುಮಾರು 100 ಕೋಟಿ ರೂಪಾಯಿಯಷ್ಟು ಆದಾಯವನ್ನು ಸೃಜಿಸುತ್ತವೆ. ಈ ದೇವಾಲಯಗಳನ್ನು ಸರ್ಕಾರವೇ ನಿಯಂತ್ರಿಸುವುದರಿಂದ ಭಕ್ತರಿಂದ ಹುಂಡಿಗೆ ಬೀಳುವ ಒಂದೊಂದು ರೂಪಾಯಿಗೂ ಲೆಕ್ಕ ಇಟ್ಟಿರಬೇಕಾಗುತ್ತದೆ.

ಒಂದು ವಿಚಿತ್ರ ನೋಡಿ. ಕರ್ನಾಟಕದ ಐವತ್ತು ಸಾವಿರ ದೇವಾಲಯಗಳ ಒಂದು ವರ್ಷದ ಆದಾಯ 100 ಕೋಟಿಯಾದರೆ ಧರ್ಮಸ್ಥಳದ ಮಂಜುನಾಥ ದೇವಾಲಯ ಪ್ರತಿವರ್ಷಕ್ಕೆ ಬಂದು ಬೀಳುವ ದುಡ್ಡು








ಏನಿಲ್ಲವೆಂದರೂ 250 ಕೋಟಿ ರೂಪಾಯಿ! ಆದರೆ ಈ ದುಡ್ಡು ಸರ್ಕಾರದ ನಿಯಂತ್ರಣದಲ್ಲಿಲ್ಲ. ಅದನ್ನು ಅದರ ಧರ್ಮಾಧಿಕಾರಿ ವೀರೇಂದ್ರ ಹೆಗ್ಗಡೆ ತನ್ನ ಮನಸ್ಸಿಗೆ ಬಂದಂತೆ ವೆಚ್ಚ ಮಾಡಬಹುದು. ಅದನ್ನು ಕೇಳುವ ಹಕ್ಕು ಯಾವ ಅಧಿಕಾರಿಗೂ ಇಲ್ಲ, ಸರ್ಕಾರಕ್ಕೂ ಇಲ್ಲ, ಜನಸಾಮಾನ್ಯನಿಗಂತೂ ಇಲ್ಲವೇ ಇಲ್ಲ. ಏಕೆಂದರೆ ಧರ್ಮಸ್ಥಳದ ದೇವಾಲಯ ಅಧಿಕೃತವಾಗಿ ವೀರೇಂದ್ರ ಹೆಗ್ಗಡೆಯ ಖಾಸಗಿ ಆಸ್ತಿ!

ಹೌದು, ತುಸು ವಿಚಿತ್ರವೆನಿಸಿದರೂ ಇದು ಸತ್ಯ. ರಾಜ್ಯದಲ್ಲಿ ಹಿಂದೂ ಧಾರ್ಮಿಕ ಕಾನೂನಿನ ಕೈಯಿಂದ ತಪ್ಪಿಸಿಕೊಂಡು ಒಬ್ಬ ವ್ಯಕ್ತಿಯ ಖಾಸಗೀ ಆಸ್ತಿಯಾಗಿ ಉಳಿದಿರುವ ಕೆಲವೇ ಕೆಲವು ದೇವಾಲಯಗಳಲ್ಲಿ ಧರ್ಮಸ್ಥಳದ ಮಂಜುನಾಥ ದೇವಾಲಯ ಪ್ರಮುಖವಾದದ್ದು. ಪ್ರತೀವರ್ಷ ಭಕ್ತರು ಕೊಡುವ ಸುಮಾರು 250 ಕೋಟಿ ರೂಪಾಯಿಗೂ, ಈಗಾಗಲೇ ದೇವಾಲಯದ ಹೆಸರಿನಲ್ಲಿರುವ ಸಾವಿರಾರು ಎಕರೆ ಜಮೀನಿಗೂ, ಕಟ್ಟಡ, ಶಾಲಾ ಕಾಲೇಜು,.ಹಾಸ್ಟೆಲ್, ಲಾಡ್ಜ್ ವಸತಿಗೃಹ ಮುಂತಾದ ಸ್ಥಿರಾಸ್ತಿಗೂ, ಸಾವಿರಾರು ಕೋಟಿ ದುಡ್ಡಿನ ಕಂತೆಗಳಿಗೂ - ಎಲ್ಲದಕ್ಕೂ ವೀರೇಂದ್ರ ಹೆಗ್ಗಡೆಯವರೇ ಮಾಲಿಕ.

ಇನ್ನೊಂದು ವಿಚಿತ್ರವನ್ನು ಗಮನಿಸಿ. ಹೆಸರೇ ಹೇಳುವಂತೆ ಧರ್ಮಸ್ಥಳದ ಶ್ರೀಮಂಜುನಾಥಸ್ವಾಮಿ ದೇವಸ್ಥಾನ ಒಂದು ಹಿಂದೂ ದೇವಾಲಯ. ಆದರೆ ಅದರ ಅನಭಿಷಿಕ್ತ ದೊರೆಯಾಗಿರುವವರು ವೀರೇಂದ್ರ ಹೆಗ್ಗಡೆ ಒಬ್ಬ ಜೈನ! ಹಿಂದೂ ಧರ್ಮದ ದೇವಾಲಯವೊಂದು ಮುಸ್ಲಿಮ್ ಅಥವಾ ಕ್ರಿಶ್ಚಿಯನ್ ಧರ್ಮೀಯನೊಬ್ಬನ ವಶದಲ್ಲಿದ್ದಿದ್ದರೆ ಆರೆಸ್ಸೆಸ್‌ಗಳು, ವಿಹೆಚ್‌ಪಿಗಳು, ಬಜೆಪಿಗಳು ಮತ್ತು ಅವುಗಳ ಕಪಿಸೈನಿಕರು ಏನೆಲ್ಲಾ ರಂಪಾಟ ಮಾಡುತ್ತಿದ್ದರು, ಏನೆಲ್ಲಾ ರಕ್ತಪಾತ ಮಾಡುತ್ತಿದ್ದರು, ಹೇಗೆಲ್ಲಾ ಅರಚಾಡುತ್ತಿದ್ದರು ಎಂಬು ದನ್ನು ಊಹಿಸಿಕೊಳ್ಳಿ. ಆದರೆ ಧರ್ಮಸ್ಥಳದ ಮಂಜು ನಾಥಸ್ವಾಮಿಯ ಹಿಂದೂ ದೇವಾಲಯವನ್ನು ಜೈನ ಧರ್ಮೀಯನೊಬ್ಬ ತನ್ನ ವಶದಲ್ಲಿಟ್ಟುಕೊಂಡಿದ್ದರೂ ಈ ಉಗ್ರ ಹಿಂದೂತ್ವವಾದಿಗಳೆಲ್ಲ ಬಾಯ್ಮುಚ್ಚಿ ಕುಳಿತಿದ್ದಾರೆಂದರೆ ಹೆಗ್ಗಡೆ ಮತ್ತು ಮಂಗಗಳ ನಡುವಿನ ಕೂಡಾವಳಿ ಯಾರಿಗಾದರೂ ಅರ್ಥವಾಗುತ್ತದೆ.

ಈ ಹಿಂದೂ ದೇವಾಲಯ ಹೆಗ್ಗಡೆ ಎಂಬ ಜೈನನ ವಶದಲ್ಲಿರುವುದರ ಹಿಂದೆಯೂ ಒಂದು ಕತೆಯಿದೆ. ಮೂಲತಃ ವಾದಿರಾಜರಿಂದ ಪ್ರತಿಷ್ಠಾಪಿಸಲ್ಪಟ್ಟ ಮಂಜುನಾಥಸ್ವಾಮಿಯ ಈ ಹಿಂದೂ ದೇವಾಲಯವನ್ನು ೧೯೫೭ರ ಹಿಂದೂ ಧಾರ್ಮಿಕ ದತ್ತಿ ಕಾಯಿದೆಯಡಿಯಲ್ಲಿ ರಾಷ್ಟ್ರೀಕರಣಗೊಳಿಸುವುದಕ್ಕೆ ಅಂದಿನ ಸರ್ಕಾರಗಳು ಮುಂದಾಗಿದ್ದವು. ಆಗ ವೀರೇಂದ್ರ ಹೆಗ್ಗಡೆಯವರ ತಂದೆ ರತ್ನವರ್ಮ ಹೆಗ್ಗಡೆಯವರು ಇದರ ವಿರುದ್ಧ ಕೋರ್ಟಿಗೆ ಹೋಗಿ "ನಾವು ಜೈನರು, ನಮ್ಮದು ಜೈನ ಬಸದಿ, ಹಾಗಾಗಿ ಹಿಂದೂ ಧಾರ್ಮಿಕ ದತ್ತಿ ಕಾಯಿದೆ ನಮಗೆ ಅನ್ವಯ ವಾಗುವುದಿಲ್ಲ" ಎಂದು ವಾದಿಸಿದರು. ಜಿಲ್ಲಾ ನ್ಯಾಯಾ ಲಯ ದೇವಾಲಯದ ಅರ್ಚಕರನ್ನು ಸಾಕ್ಷ್ಯ ಹೇಳುವುದಕ್ಕಾಗಿ ಕರೆಸಿತು. ಆದರೆ ಆ ಅರ್ಚಕರನ್ನು ರತ್ನವರ್ಮ ಹೆಗ್ಗಡೆಯವರು ಬೆದರಿಸಿದ್ದರೋ ಏನೋ, ಆ ಅರ್ಚಕ "ದೇವಾಲಯದಲ್ಲಿ ಜೈನ ಸಂಪ್ರದಾಯದಂತೆ ಪೂಜೆ ನಡೆಯುತ್ತದೆ" ಎಂದು ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷಿ ಹೇಳಿದ್ದರು. ಪರಿಣಾಮವಾಗಿ ತೀರ್ಪು ಹೆಗ್ಗಡೆಯವರ ಪರವಾಗಿ ಬಂದಿತ್ತು. ಇದನ್ನು ರಾಜ್ಯ ಸರ್ಕಾರ ಹೈಕೋರ್ಟಿನಲ್ಲಿ ಪ್ರಶ್ನಿಸಿತು. ಹೈಕೋರ್ಟು ಅದೊಂದು ಹಿಂದೂ ದೇವಾಲಯ ಎಂಬ ಸ್ಪಷ್ಟ ತೀರ್ಮಾನಕ್ಕೆ ಬಂದು ಅದನ್ನು ಸ್ವಾಧೀನಪಡಿಸಿಕೊಳ್ಳುವಂತೆ ಸರ್ಕಾರಕ್ಕೆ ಆದೇಶಿಸಿತು. ನಂತರ ಹೆಗ್ಗಡೆಯವರು ಸುಪ್ರೀಂ ಕೋರ್ಟಿಗೆ ಹೋದರು. ಸುಪ್ರೀಂ ಕೋರ್ಟು 'ಸರ್ಕಾರದ ಪರ' ಅಥವಾ 'ಹೆಗ್ಗಡೆಯ ಪರ' ಎಂಬ ಸ್ಪಷ್ಟ ನಿಲುವು ತಾಳದೆ ಅಡ್ಡಗೋಡೆಯ ಮೇಲೆ ದೀಪವಿಟ್ಟಂತೆ ತೀರ್ಪು ಕೊಟ್ಟಿತು. "ಹಿಂದೂ ದೇವಾಲಯ ಹಾಗೂ ಜೈನ ಆಡಳಿತ ಇರುವುದರಿಂದ ಕೆಲವು ಗೊಂದಲಗಳಿದ್ದಿವೆ. ಅದನ್ನು ಬಗೆಹರಿಸುವುದಕ್ಕೆ ಸರ್ಕಾರ ಒಂದು ಅಧಿಸೂಚನೆ ಹೊರಡಿಸಬೇಕು" ಎಂಬುದು ತೀರ್ಪಿನ ಸಾರಾಂಶವಾಗಿತ್ತು. ಅಷ್ಟು ಹೊತ್ತಿಗಾಗಲೇ ರತ್ನವರ್ಮ ಹೆಗ್ಗಡೆಯ ಸುಪುತ್ರ ವೀರೇಂದ್ರ ಹೆಗ್ಗಡೆಯ ರಂಗಪ್ರವೇಶವಾಗಿತ್ತು. ಅಂದಿನ ಮುಖ್ಯಮಂತ್ರಿ ದೇವರಾಜ್ ಅರಸ್ ಆದಿಯಾಗಿ ದೊಡ್ಡ ದೊಡ್ಡ ರಾಜಕಾರಣಿಗಳನ್ನು, ಮಂತ್ರಿಮಹೋದಯರನ್ನು, ಅಧಿಕಾರಿಗಳನ್ನು ಧರ್ಮಸ್ಥಳಕ್ಕೆ ಕರೆಸಿ ಶಾಲು ಹೊದಿಸಿ ಸನ್ಮಾನ ಮಾಡುವ ಮೂಲಕ ಅವರೆಲ್ಲರನ್ನು ಬುಟ್ಟಿಗೆ ಹಾಕಿಕೊಳ್ಳುವ ಚಾಣಾಕ್ಷ ತಂತ್ರವನ್ನು



ಅವರು ಪ್ರಾರಂಭಿಸಿದ್ದರು. ಆ ಮೂಲಕ ಇವರೆಲ್ಲರ ತಲೆಸವರುತ್ತಾ ಸುಪ್ರೀಂಕೋರ್ಟು ಹೇಳಿದಂತೆ ಅಧಿಸೂಚನೆ ಹೊರಡಿಸದಂತೆ ತಡೆಯುವಲ್ಲಿ ವೀರೇಂದ್ರ ಹೆಗ್ಗಡೆ ಯಶಸ್ವಿಯಾದರು. ಅಲ್ಲಿಂದಾಚೆಗೆ ಧರ್ಮಸ್ಥಳದ ಮಂಜುನಾಥ ದೇವಾಲಯವು ಚಿನ್ನದ ಮೊಟ್ಟೆಯಿಡುವ ಕೋಳಿಯಾಗಿ, ವೀರೇಂದ್ರ ಹೆಗ್ಗಡೆಯುವರ ಖಾಸಗಿ ಆಸ್ತಿಯಾಗಿ ಮಾರ್ಪಟ್ಟಿತು.

ಪಕ್ಕಾ ಬಿಸಿನೆಸ್‌ಮ್ಯಾನ್

ವರ್ಷಕ್ಕೆ ನೂರಾರು ಕೋಟಿ ರೂಪಾಯಿ ಭಕ್ತರ ಕಾಣಿಕೆಯ ದುಡ್ಡು ವೀರೇಂದ್ರ ಹೆಗ್ಗಡೆಯ ಜೇಬು ಸೇರುತ್ತಿದ್ದುದು ಸಹಜವಾಗಿ ಹಲವರ ಕಣ್ಣು ಕುಕ್ಕುತ್ತಿದ್ದುದರಿಂದ ಅದನ್ನು ಮರೆ ಮಾಚುವುದಕ್ಕಾಗಿ ಅವರು ದಾನ-ಧರ್ಮಗಳೆಂಬ ನಾಟಕ ಪ್ರಾರಂಭಿಸಿದರು. ವರ್ಷಕ್ಕೆ 250 ಕೋಟಿ ಆದಾಯ ಬಂದರೂ ಅದರಲ್ಲಿ ಒಂದು ಚೂರನ್ನು ದಾನ ಮಾಡುತ್ತಾ ಭಕ್ತರ ಕಾಣಿಕೆಯ ದುಡ್ಡೆಲ್ಲಾ ಜನಸೇವೆಗೆ ಹೋಗುತ್ತಿದೆ ಎಂಬಂತೆ ಬಿಂಬಿಸತೊಡಗಿದರು.

ಹಾಗೆ ಬಿಂಬಿಸಿಕೊಂಡಿದ್ದರಿಂದಲೇ ಇವತ್ತು ಎಲ್ಲಾ ರಾಜಕೀಯ ಪಕ್ಷಗಳ ನಾಯಕರು ವೀರೇಂದ್ರ ಹೆಗ್ಗಡೆಯವರನ್ನು ಹಾಡಿ ಹೊಗಳುತ್ತಾರೆ. ಧರ್ಮಸ್ಥಳ ದೇವಾಲಯ ಅವರ ಕೈಯಲ್ಲಿರುವುದೇ ಸೂಕ್ತ ಎಂದು ವಾದಿಸುತ್ತಾರೆ. ಭಕ್ತರ ನೂರಾರು ಕೋಟಿ ದುಡ್ಡು ಅನಾಮತ್ತಾಗಿ ಹೆಗ್ಗಡೆಯ ಜೇಬು ಸೇರುವುದರ ಬಗ್ಗೆ ಯಾರೂ ಚಕಾರವೆತ್ತುವುದಿಲ್ಲ, ಅಷ್ಟೇ ಏಕೆ, ವೀರೇಂದ್ರ ಹೆಗ್ಗಡೆಗೆ 'ರಾಜರ್ಷಿ', 'ಪದ್ಮಭೂಷಣ'ಗಳಂಥ ಬಿರುದು ಬಾವಲಿಗಳನ್ನು, ಪ್ರಶಸ್ತಿ ಪುರಸ್ಕಾರಗಳನ್ನು ಕೊಟ್ಟು ಅಟ್ಟಕ್ಕೇರಿಸುತ್ತಾರೆ. ಈಗ ಸಂದಿರುವ 'ಕರ್ನಾಟಕ ರತ್ನ' ಅದರ ಮುಂದುವರಿದ ಭಾಗವಷ್ಟೆ.

ತಾನು ಬಹಳ ದಾನಧರ್ಮ ಮಾಡುತ್ತಿದ್ದೇನೆಂದು, ತಾನು ಆಧುನಿಕ ದಾನಶೂರ ಕರ್ಣನೆಂದೂ ಬಿಂಬಿಸಿಕೊಳ್ಳುವ ಹೆಗ್ಗಡೆಯವರು ವಾಸ್ತವವಾಗಿ ಎಂತಹ ದಾನಧರ್ಮ ಕಾರ್ಯದಲ್ಲಿ ತೊಡಗಿದ್ದಾರೆ ಎಂಬುದನ್ನು ಅರ್ಥ ಮಾಡಿಕೊಳ್ಳಬೇಕೆಂದರೆ ಒಮ್ಮೆ ಧರ್ಮಸ್ಥಳಕ್ಕೆ ಹೋಗಿಬರಬೇಕು. ಒಂದು ಸಿಂಪಲ್ ಉದಾಹರಣೆ ಇಲ್ಲಿದೆ. ಪ್ರತಿನಿತ್ಯ ಮಂಜುನಾಥ ದೇವಾಲಯಕ್ಕೆ ಸಾವಿರಾರು ಭಕ್ತರು ಬರುತ್ತಾರೆ. ಆ ಭಕ್ತರು ನೂರಾರು ಕೋಟಿ ರೂಪಾಯಿಗಳನ್ನು ನೀಡುತ್ತಾರೆ. ಅಂತಹ ಭಕ್ತರಿಗೆ ಉಳಿದುಕೊಳ್ಳಲು ಉಚಿತವಾದ ವ್ಯವಸ್ಥೆ ಮಾಡಬಹುದಿತ್ತು. ಆದರೆ, ಇವರು ಮಾಡಿದ್ದೇನು? ಲಾಡ್ಜ್‌ಗಳನ್ನೇನೋ ಕಟ್ಟಿಸಿ ಭಕ್ತರು ಉಳಿದುಕೊಳ್ಳುವುದಕ್ಕೆ ವ್ಯವಸ್ಥೆ ಮಾಡಿದರು. ಆದರೆ ಅವರಿಂದ ದುಡ್ಡು ವಸೂಲಿ ಮಾಡಿದರು. ಈ ವಸೂಲಿಗೆ 'ಕಾಣಿಕೆ' ಎಂದು ನಾಮಕರಣ ಮಾಡಿದರು!

ಇದರ ಜೊತೆಗೆ ಸುಮಾರು 250 ಅಂಗಡಿಗಳನ್ನು ಕಟ್ಟಿಸಿ ಬಾಡಿಗೆಗೆ ನೀಡಿದ್ದಾರೆ. ಹಲವಾರು ಹಾಸ್ಟೆಲ್‌ಗಳನ್ನು, ಮೆಡಿಕಲ್ ಕಾಲೇಜುಗಳನ್ನು, ಇನ್ನಿತರ ಶಿಕ್ಷಣ ಸಂಸ್ಥೆಗಳನ್ನು ತೆರೆದು ಅಲ್ಲೂ ಡೊನೇಷನ್ ವಸೂಲಿ ಮಾಡುತ್ತಾರೆ. ಇವರ ಶಿಕ್ಷಣ ಸಂಸ್ಥೆಗಳಲ್ಲಿ ಎಲ್ಲರೂ ಕಡ್ಡಾಯವಾಗಿ ಲಕ್ಷಾಂತರ ರೂಪಾಯಿ ಡೊನೇಷನ್ ಕಕ್ಕಲೇಬೇಕು. ಬಡ ವಿದ್ಯಾರ್ಥಿಯೊಬ್ಬ ಕಷ್ಟಪಟ್ಟು ಓದಿ ಹೆಚ್ಚು ಮಾರ್ಕ್ಸ್ ತೆಗೆದುಕೊಂಡು ದುಡ್ಡಿಲ್ಲದೇ ಅಡ್ಮಿಷನ್‌ಗಾಗಿ ಹೋದರೆ ಮಾರ್ಕ್ಸ್ ಕಾರ್ಡನ್ನು ಆತನ ಮುಖಕ್ಕೆ ಎಸೆದು ಕಳಿಸಲಾಗುತ್ತದೆ. ಇದು ವೀರೇಂದ್ರ ಹೆಗ್ಗಡೆ ಮಾಡುತ್ತಿರುವ ಶಿಕ್ಷಣ ಸೇವೆ!

ಇದರ ಜೊತೆಜೊತೆಗೆ ವೀರೇಂದ್ರ ಹೆಗ್ಗಡೆ ಅನುಸರಿಸುತ್ತಿರುವ ಇನ್ನೊಂದು ಚಾಣಕ್ಯ ತಂತ್ರ ಎಂದರೆ ತನ್ನನ್ನು ಒಬ್ಬ ದೈವಾಂಶಸಂಭೂತನೆಂದು ಚಿತ್ರಿಸಿಕೊಳ್ಳುವುದು. ಮಂಜುನಾಥಸ್ವಾಮಿಯ ಕೃಪೆಗೆ ಪಾತ್ರರಾಗಬೇಕೆಂದರೆ ವೀರೇಂದ್ರ ಹೆಗ್ಗಡೆಯ ಮೂಲಕ ಮಾತ್ರವೇ ಸಾಧ್ಯ ಎಂಬಂತೆ ಪ್ರಚುರಪಡಿಸುವುದು. ಇನ್ನೂ ಸ್ಪಷ್ಟವಾಗಿ ಹೇಳಬೇಕೆಂದರೆ ವೀರೇಂದ್ರ ಹೆಗ್ಗಡೆಯೆಂದರೆ ಭೂಮಿಯ ಮೇಲಿನ ಜೀವಂತ ದೇವರು ಎಂದು ಬಿಂಬಿಸಿಕೊಳ್ಳುವುದು.

ಹೇಳಿಕೇಳಿ ಮೂಢನಂಬಿಕೆಯೇ ಪ್ರಧಾನವಾಗಿರುವ ಸಮಾಜ ನಮ್ಮದು. ಹಾಗಿರುವಾಗ ಧರ್ಮಸ್ಥಳದ ಮಂಜುನಾಥಸ್ವಾಮಿ ದೇವಾಲಯದ ಧರ್ಮಾಧಿಕಾರಿ ವೀರೇಂದ್ರ ಹೆಗ್ಗಡೆ ದೈವಾಂಶಸಂಭೂತನೆಂದರೆ ಜನ ನಂಬದೇ ಇರುತ್ತಾರೆಯೇ? ಅಕ್ಷರಶಃ ಜನ ಅವರನ್ನು ದೇವರೆಂದೇ ನಂಬಿಬಿಟ್ಟಿದ್ದಾರೆ; ಮನೆಮನೆಗಳಲ್ಲಿ ಅವರ ಫೋಟೋ ಇಟ್ಟುಕೊಂಡು ಪೂಜಿಸುತ್ತಾರೆ. ಅಂದಮೇಲೆ, ದೇವರ ಹೆಸರಿನಲ್ಲಿ ಧರ್ಮಸ್ಥಳಕ್ಕೆ ಬಂದುಬೀಳುವ ಕೋಟಿ ಕೋಟಿ ದುಡ್ಡಿನ ಲೆಕ್ಕಾ ಕೇಳುವವರ್‍ಯಾರು?

ಜನರ ದುಡ್ಡಲ್ಲಿ ಬಡ್ಡಿ ದಂಧೆ

ಮುಖ್ಯಮಂತ್ರಿ ಯಡ್ಡಿ ಇತ್ತೀಚೆಗೆ ವೀರೇಂದ್ರ ಹೆಗ್ಗಡೆಯವರನ್ನು ಭಾರಿ ಹಾಡಿ ಹೊಗಳಿದ್ದರು. ವೀರೇಂದ್ರ ಹೆಗ್ಗಡೆಯವರು ನಡೆಸುತ್ತಿರುವ ಗ್ರಾಮೀಣಾಭಿವೃದ್ಧಿ ಯೋಜನೆಯ ಮಾದರಿಯಲ್ಲೇ ಇಡೀ ರಾಜ್ಯಕ್ಕೆ ಅನ್ವಯವಾಗುವಂಥ ಯೋಜನೆಗಳನ್ನು ರೂಪಿಸಿ ಅದರ ಉಸ್ತುವಾರಿಯನ್ನು ವೀರೇಂದ್ರ ಹೆಗ್ಗಡೆಯವರಿಗೆ ವಹಿಸಲಾಗುವುದೆಂದು ಪ್ರಕಟಿಸಿದ್ದರು. ಅದನ್ನು ಕೇಳಿದವರಿಗೆ ಒಂದಿಷ್ಟು ಕುತೂಹಲವೂ, ಒಂದಿಷ್ಟು ಆಶ್ಚರ್ಯವೂ ಆಗಿತ್ತು. ಏನಿದು ವೀರೇಂದ್ರ ಹೆಗ್ಗಡೆಯವರ ಗ್ರಾಮೀಣಾಭಿವೃದ್ಧಿ ಯೋಜನೆ ಎಂದು ತಲೆಕೆಡಿಸಿಕೊಂಡವರೂ ಇದ್ದರು. ಅದನ್ನು ಒಂದಿಷ್ಟು ಆಳಕ್ಕಿಳಿದು ನೋಡದೇ ಹೆಗ್ಗಡೆಯ ಷಡ್ಯಂತ್ರ ಅರ್ಥವಾಗುವುದಿಲ್ಲ.

ಹೌದು, ವೀರೇಂದ್ರ ಹೆಗ್ಗಡೆ ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮೀಣಾಭಿವೃದ್ಧಿ ಯೋಜನೆ ಅಂತ ಒಂದು ಟ್ರಸ್ಟ್ ಅನ್ನು ಬಹಳ ಹಿಂದಿನಿಂದ ನಡೆಸಿಕೊಂಡು ಬಂದಿದ್ದಾರೆ. ಅದರಲ್ಲಿರುವ ಮೆಂಬರುಗಳೆಲ್ಲರೂ ವೀರೇಂದ್ರ ಹೆಗ್ಗಡೆಯವರ ಮನೆಯವರು, ಸಂಬಂಧಿಗಳೇ ಹೊರತು ಹೊರಗಿನ ಒಂದೇ ಒಂದು ನರಪಿಳ್ಳೆಯಿಲ್ಲ. ಮೂಲತಃ ಇದನ್ನು ಪ್ರಾರಂಭಿಸಿದ್ದೇಕೆಂದರೆ ಧರ್ಮಸ್ಥಳಕ್ಕೆ ಬಂದು ಬೀಳುವ ಕೋಟ್ಯಾಂತರ ರೂಪಾಯಿ ಎಲ್ಲಿಗೆ ಹೋಗುತ್ತಿದೆ, ಏನಾಗುತ್ತಿದೆ ಎಂಬ ಪ್ರಶ್ನೆಗಳು ಎದ್ದಾಗ "ಅದು ಜನರ ಅಭಿವೃದ್ಧಿಗಾಗಿ ಖರ್ಚಾಗುತ್ತಿದೆ" ಎಂಬಂತೆ ತೋರಿಸುವುದಕ್ಕಾಗಿ. ಅಂದರೆ ವರ್ಷಕ್ಕೆ ನೂರಾರು ಕೋಟಿ ರೂಪಾಯಿ ಭಕ್ತರ ದುಡ್ಡು ಹುಂಡಿಗೆ ಬಿದ್ದರೆ ಅದರಲ್ಲಿ ಒಂದಿಷ್ಟು ಚೂರನ್ನು ಅಭಿವೃದ್ಧಿಗಾಗಿ ಖರ್ಚು ಮಾಡಿ "ನೋಡಿ ಎಲ್ಲಾ ದುಡ್ಡು ಜನರ ಅಭಿವೃದ್ಧಿಗಾಗಿ ಖರ್ಚಾಗುತ್ತಿದೆ" ಎಂದು ತೋರಿಸುವ ನಾಟಕವೇ ಈ ಗ್ರಾಮೀಣಾಭಿವೃದ್ಧಿ ಯೋಜನೆ.

ಆದರೆ ವಾಸ್ತವವಾಗಿ ದೇವಸ್ಥಾನಕ್ಕೆ ಬರುವ ಭಕ್ತರ ದುಡ್ಡನ್ನು ಜನರ ...ವೃದ್ಧಿಗಾಗಿ ಖರ್ಚು ಮಾಡದೇ, ಸರ್ಕಾರದ ದುಡ್ಡನ್ನೇ ತಮ್ಮ ಹೆಸರಿನಲ್ಲಿ ...ರ್ಚು ಮಾಡುತ್ತಿದ್ದಾರೆ ವೀರೇಂದ್ರ ಹೆಗ್ಗಡೆಯವರು! ಕಳೆದ ವರ್ಷದ ...ವನ್ನೇ ನೋಡಿ. ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಸೇರಿ ಕೊಂಡು ...ಹಾಯ ಗುಂಪುಗಳಿಗೆ ಮೀಸಲಿರಿಸಿದ್ದ ದುಡ್ಡನ್ನು ಹಂಚುವುದಕ್ಕಾಗಿ ...ರ್ಮಸ್ಥಳದ ವೀರೇಂದ್ರ ಹೆಗ್ಗಡೆಗೆ ಹದಿನೈದು ಕೋಟಿ ದುಡ್ಡು ಕೊಟ್ಟಿತ್ತು. ... ಗಮನಿಸಬೇಕಾದ ವಿಚಾರ ಎಂದರೆ ನೇರವಾಗಿ ವೀರೇಂದ್ರ ಹೆಗ್ಗಡೆಗೆ ...ಡ್ಡು ಕೊಟ್ಟರೆ ಜನ ಗಲಾಟೆ ಮಾಡುತ್ತಾರೆಂಬ ಕಾರಣಕ್ಕೆ ಸ್ವಸಹಾಯ ...ಪುಗಳಿಗೆ ಹಂಚುವ ಹೆಸರಿನಲ್ಲಿ ಕೊಡಲಾಗಿತ್ತು. ಆದರೆ ಅದರಲ್ಲಿ ಎಷ್ಟು ... ಹಂಚಿಕೆಯಾಗಿತ್ತು? ಎಷ್ಟು ಅವರ ಜೇಬಿಗಿಳಿಯಿತು ಎಂಬ ಲೆಕ್ಕ ಮಾತ್ರ ...ರೂ ಇಟ್ಟಿಲ್ಲ!

ಹಾಗೆಯೇ ಶ್ರೀಕ್ಷೇತ್ರ ಗ್ರಾಮೀಣಾಭಿವೃದ್ಧಿ ಯೋಜನೆ ಎಂಬ ಟ್ರಸ್ಟ್ ...ನಲ್ಲಿ ಹೆಗ್ಗಡೆಯವರು ನಬಾರ್ಡ್‌ನಿಂದ ವಾರ್ಷಿಕ ಶೇ.6 ರೂಪಾಯಿ ... ದರದಲ್ಲಿ ಹಾಗೂ ಸಿಂಡಿಕೇಟ್ ಬ್ಯಾಂಕ್, ಕೆನರಾ ಬ್ಯಾಂಕ್, ವಿಜಯ ...ಕ್, ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಮತ್ತಿತರ ಬ್ಯಾಂಕುಗಳಿಂದ ...ರ್ಷಿಕ ಶೇ.8 ರೂಪಾಯಿ ಬಡ್ಡಿ ದರದಲ್ಲಿ ಸಾಲ ತರುತ್ತಾರೆ. ಈ ಒಟ್ಟು ...ಗಳ ಮೊತ್ತ 1500 ಕೋಟಿ ರೂಪಾಯಿಯಾಗುತ್ತದೆ. ಈ ದುಡ್ಡನ್ನು ...ರೇ ಸೃಷ್ಟಿಸಿ, ಪ್ರೋತ್ಸಾಹಿಸುತ್ತಿರುವ ಸ್ವಸಹಾಯ ಗುಂಪುಗಳಿಗೆ ವಾರ್ಷಿಕ 14-18 ರೂಪಾಯಿ ಬಡ್ಡಿ ದರದಲ್ಲಿ ಸಾಲದ ರೂಪದಲ್ಲಿ ನೀಡುತ್ತಾರೆ! ...ದರೆ ಬ್ಯಾಂಕುಗಳಿಂದ ಕಡಿಮೆ ಬಡ್ಡಿಗೆ ಸಾಲ ತಂದು ಅದನ್ನು ಬೇರೆಯವರಿಗೆ ...ನ ಬಡ್ಡಿಗೆ ಕೊಟ್ಟು ದುಡ್ಡು ಮಾಡುತ್ತಾರೆ! ನಮ್ಮ ಬ್ಯಾಂಕುಗಳು ಸ್ವಸಹಾಯ ...ಪುಗಳಿಗೆ ನೇರವಾಗಿ ಸಾಲಕೊಟ್ಟಿದ್ದರೆ ಜನರ ಮೇಲೆ ವೀರೇಂದ್ರ ಹೆಗ್ಗಡೆ ...ಸುವ ಶೆ. 8 ರೂಪಾಯಿ ಹೆಚ್ಚುವರಿ ಬಡ್ಡಿಯ ಹೊರೆಯಾದರೂ ...ಯುತ್ತಿತ್ತು.

ಸ್ವಸಹಾಯ ಗುಂಪುಗಳು ಸಾಮಾನ್ಯವಾಗಿ ಸ್ವಾಯತ್ತವಾಗಿರಬೇಕು. ಅದರ ...ತರಿಕ ಆಡಳಿತ ನಿರ್ವಹಣೆಯಲ್ಲಿ ಹೊರಗಿನವರು ಮೂಗು ...ಸುವಂತಿರಬಾರದು. ಆದರೆ ವೀರೇಂದ್ರ ಹೆಗ್ಗಡೆ ತಾನೇ ಸಾಲ ಕೊಡುವ ...ಲಕ (ಹೆಚ್ಚಿನ ಬಡ್ಡಿ ದರದಲ್ಲಿ) ಅವುಗಳೆಲ್ಲವನ್ನೂ ತನ್ನ ಹಿಡಿತದಲ್ಲಿಟ್ಟು ...ಡಿದ್ದಾರೆ. ಇವರು ತೆಗೆದುಕೊಳ್ಳುವ ತೀರ್ಮಾನಗಳನ್ನೇ ಆ ಗುಂಪುಗಳು ...ಕೂತಪ್ಪದೇ ಪಾಲಿಸುವಂತೆ ನೋಡಿಕೊಳ್ಳುತ್ತಾರೆ. ಅಷ್ಟೇ ಅಲ್ಲ, ತಮ್ಮ ...ಅಂಶಸಂಭೂತ ಇಮೇಜನ್ನು ಇನ್ನಷ್ಟು ಪ್ರಚಾರ ಮಾಡುವುದಕ್ಕೂ ಅವುಗಳನ್ನು ...ಕೊಳ್ಳುತ್ತಾರೆ.

ಇನ್ನೂ ವಿಶೇಷ ಏನೆಂದರೆ ಹಳ್ಳಿಯ ಬಡವರಿಗೆ ಹಂಚುವುದಕ್ಕಾಗಿ ...ರದಿಂದ ಗ್ರಾಮಪಂಚಾಯತಿಗೆ ಬರುವ ಶೌಚಾಲಯ ಸಾಮಗ್ರಿಯಿಂದ ...ದು ಪರಿಹಾರದ ದುಡ್ಡಿನ ತನಕ ಎಲ್ಲವೂ ಮೊದಲು ವೀರೇಂದ್ರ ...ಡೆಯವರ ಮಡಿಲಿಗೆ ಹೋಗುತ್ತವೆ. ಅವರು ಆ ಹಣವನ್ನು ಸರ್ಕಾರ ...ಟ್ಟಿದ್ದು ಎಂಬುದನ್ನು ಬಚ್ಚಿಟ್ಟು ತಾನೇ ಕೊಡುತ್ತಿರುವುದಾಗಿ ಫೋಜು ...ಟ್ಟು ಹಂಚುತ್ತಾರೆ. ಮರುದಿನ ಪತ್ರಿಕೆಗಳಲ್ಲಿ 'ವೀರೇಂದ್ರ ಹೆಗ್ಗಡೆಯವರಿಂದ ...ವರಿಗೆ ಸಾಮಗ್ರಿ ವಿತರಣೆ' ಎಂದು ವರದಿಯಾಗುತ್ತದೆ. ಇದು ಹೆಗ್ಗಡೆಯ ...ಹಾಕ್ಷತನ!


ಜನ ಪರವಲ್ಲ, ಸ್ವಪರ

ವೀರೇಂದ್ರ ಹೆಗ್ಗಡೆ ತನ್ನ ಜೀವಮಾನದಲ್ಲಿ ಎಂದೂ ಈ ನಾಡಿನ ಜ್ವಲಂತ ...ಸ್ಯೆಗಳ ಬಗ್ಗೆ ತುಟಿ ಎರಡು ಮಾಡಿದ ವ್ಯಕ್ತಿಯಲ್ಲ, ಸರ್ಕಾರ ಮೇಲಿಂದ ...ಲೆ ಜನವಿರೋಧಿ, ರೈತವಿರೋಧಿ, ದಲಿತವಿರೋಧಿ ನೀತಿಗಳನ್ನು, ಕಾನೂನು ...ನ್ನು ರೂಪಿಸುತ್ತಿದ್ದರೂ ಅದನ್ನು ಎಂದೂ ವಿರೋಧಿಸಿದವರಲ್ಲ, ಸರ್ಕಾರ ... ಕಾಯಿದೆ, ಪರಿಸರ ಕಾಯಿದೆ, ನೀರಿನ ಖಾಸಗೀಕರಣ, ಆದಿವಾಸಿಗಳ ...ಲೆಬ್ಬಿಸುವಿಕೆ, ರೈತರಿಂದ ಭೂಮಿ ಕಿತ್ತುಕೊಳ್ಳುವಿಕೆ, ವಿಶೇಷ ಆರ್ಥಿಕ ...ವಲಯಗಳ ಸ್ಥಾಪನೆ ಮುಂತಾದ ನೀತಿನಿಯಮ, ಕಾನೂನು, ಕ್ರಮಗಳನ್ನು ...ಗೊಳಿಸಿ ಜನರ ಬದುಕನ್ನು ಹಿಂಡುತ್ತಿದ್ದರೂ ಎಂದೂ ಅದರ ಬಗ್ಗೆ ...ತು ಚಕಾರ ಎತ್ತಿಲ್ಲ, ನಿಜಕ್ಕೂ ಜನರ ಬಗ್ಗೆ ಕಾಳಜಿಯಿದ್ದಿದ್ದರೆ ಈ ಕುರಿತು ...ತು ಮಾತನಾಡಬೇಕಿತ್ತು, ಆತನಿಗೆ ಜನರ ಕಾಳಜಿಗಿಂತ ಹೆಚ್ಚಾಗಿ ತನ್ನ ...ಲಯದ ಆಸ್ತಿಯನ್ನು ಉಳಿಸಿ ಬೆಳೆಸಿಕೊಳ್ಳಬೇಕೆಂಬ ಆಸೆಯೇ ಹೆಚ್ಚು ...ರದ ಜನವಿರೋಧಿ ನೀತಿಗಳ ಬಗ್ಗೆ ಮಾತನಾಡಿದರೆ ಎಲ್ಲಿ ಚಿನ್ನದ ...ಟ್ಟೆಯಿಡುವ ದೇವಾಲಯವನ್ನು ಸರ್ಕಾರ ಸ್ವಾಧೀನಪಡಿಸಿಕೊಳ್ಳುತ್ತದೆಯೋ ... ಭಯ. ಸರ್ಕಾರವನ್ನು ಈತ ವಿರೋಧಿಸುವುದಿಲ್ಲ, ಈತನನ್ನು ಸರ್ಕಾರ ...ರೋಧಿಸುವುದಿಲ್ಲ. ಈ ಭಾಯಿ-ಭಾಯಿ ಸಂಬಂಧವನ್ನು ಗಟ್ಟಿಗೊಳಿಸುವುದ ...ಮೇ ಇವರಿಗೆ ಈಗ 'ಕರ್ನಾಟಕ ರತ್ನ'ವನ್ನು ಧಾರೆ ಎರೆದಿದ್ದಾರೆ ಯಡ್ಡಿ. ...ನೀವು ಧರ್ಮಸ್ಥಳದಲ್ಲಿ ಇನ್ನೊಂದು ವಿಚಾರವನ್ನು ಸೂಕ್ಷ್ಮವಾಗಿ ಗಮನಿಸಬೇಕು. ...ರೆಯಾಗಿ ಆಡಳಿತ ಮಂಡಳಿಯಲ್ಲಾಗಲೀ, ನೌಕರ ಸಿಬ್ಬಂದಿಯಲ್ಲಾಗಲೀ, ...ಕ್ಷೇತ್ರ ಧರ್ಮಸ್ಥಳ ಗ್ರಾಮೀಣಾಭಿವೃದ್ಧಿ ಯೋಜನೆಯಲ್ಲಾಗಲೀ ಎಲ್ಲೂ ... ದಲಿತರನ್ನು ನೇಮಿಸಿಕೊಂಡಿಲ್ಲ! ಅಲ್ಲಿ ತುಂಬಿಕೊಂಡಿರುವವರೆಲ್ಲರೂ ...ಜಾತಿಗೆ ಸೇರಿದವರೆ. ಇವತ್ತು ವೀರೇಂದ್ರ ಹೆಗ್ಗಡೆ ಸಾವಿರಾರು ಎಕರೆ ...ಮಿಗೆ ಒಡೆಯ. ವೀರೇಂದ್ರ ಹೆಗ್ಗಡೆ ಕಟ್ಟಿಸಿರುವ ಒಂದೊಂದು ಮೆಡಿಕಲ್ ...ಜಿನ ಹಿಂದೆಯೂ, ಒಂದೊಂದು ಹಾಸ್ಟೆಲ್ಲಿನ ಹಿಂದೆಯೂ, ಒಂದೊಂದು ...ನ ಹಿಂದೆಯೂ, ಒಂದೊಂದು ವಾಣಿಜ್ಯ ಮಳಿಗೆಯ ಹಿಂದೆಯೂ ...ಬ್ಬು ಬಡ ರೈತರ ಹೃದಯವಿದ್ರಾವಕ ಕಣ್ಣೀರ ಕತೆಗಳಿವೆ. ಉಜಿರೆಯಲ್ಲಿ ...ಎಕರೆ ಡಿಸಿ ಮನ್ನಾ ಭೂಮಿಯನ್ನು ಶಿಕ್ಷಣ ಟ್ರಸ್ಟ್ ಹೆಸರಿನಲ್ಲಿ ಕಬಳಿಸಿದ್ದಾರೆ. ...ಇತ್ತೀಚೆಗೆ ವಿಶ್ವ ತುಳು ಸಮ್ಮೇಳನಕ್ಕೆ ಸರ್ಕಾರ ನೇರವಾಗಿ ಒಂದು ಕೋಟಿ ...ತ್ತ ಪರೋಕ್ಷವಾಗಿ ಒಂದೆರಡು ಕೋಟಿ ರೂಪಾಯಿ ನೀಡಿದೆ. ಜೊತೆಗೆ ...ಕ್‌ಗಳು, ದುಬೈ ಮತ್ತು ಬಾಂಬೆಯಲ್ಲಿರುವ ತುಳುವರು ಮತ್ತು ಸ್ವಸಹಾಯ ...ಟನೆಗಳಿಂದ ಹತ್ತಿರ ಹತ್ತಿರ ಹದಿನೈದು ಕೋಟಿ ಸಂಗ್ರಹ ಮಾಡಿದ್ದಾರೆ. ...ರಲ್ಲಿ 2-3 ಕೋಟಿ ಖರ್ಚು ಮಾಡಿ ಉಳಿದದ್ದನ್ನು ಜೇಬಿಗೆ ...ಕೊಂಡಿದ್ದಾರೆ. ಮೂಲ ತುಳುವರಾದ ದಲಿತರಿಗೆ ಕಿಂಚಿತ್ತೂ ಸ್ಥಾನ ...ದೆ ಜೈನ ಸಂಸ...ತಿಯನ್ನು ಮೆರೆದಿದ್ದಾರೆ. ಇಂಥ ಭೂಗಳ್ಳನಿಗೆ, ರೈತ-ದಲಿತ ...ಕನಿಗೆ ಈಗ 'ಕರ್ನಾಟಕ ರತ್ನ' ಧಾರೆಯೆರೆದು ಯಡ್ಡಿ ಕೃತಾರ್ಥರಾಗಿದ್ದಾರೆ! ...ಬಿಜೆಪಿ ಅಧಿಕಾರಾವಧಿ ಮುಗಿಯುವುದರೊಳಗೆ ಕನ್ನಡಿಗರು ಇನ್ನೇನು ...ಸುದ್ದಿಗಳನ್ನು ಕೇಳಬೇಕಿದೆಯೋ?

-ಕುಮಾರ್ ಬುರಡಿಕಟ್ಟಿ

ಜಾತಿವಾದಿ ದೇಜಗೌ

ಕೊಂಚ ಘನತೆ ಉಳಿಸಿಕೊಂಡಿದ್ದ 'ಕರ್ನಾಟಕ ರತ್ನ' ಪ್ರಶಸ್ತಿಯು ಈ ಬಾರಿ ಪ್ರೊ. ದೇ. ಜವರೇಗೌಡರ ಪಾಲಾಗುವ ಮೂಲಕ ಗಲ್ಲಿ ಪ್ರಶಸ್ತಿಯ ಲೆವೆಲ್ಲಿಗೆ ಕುಗ್ಗಿ ಹೋಗಿದೆ. ದೇಜಗೌರ ದುರ್ಬಲ ವ್ಯಕ್ತಿತ್ವ, ಜಾತಿವಾದ, ಧನದಾಹ, ಪ್ರಚಾರ ಪ್ರಿಯತೆ, ಆತ್ಮವಂಚನೆಗಳನ್ನೆಲ್ಲಾ ಒಟ್ಟು ರಾಶಿ ಹಾಕಿಕೊಂಡು ಈಗ ಅವರ ಕೈಗೆ ಸಿಕ್ಕಿಬಿದ್ದಿರುವ 'ಕರ್ನಾಟಕ ರತ್ನ' ಪ್ರಶಸ್ತಿಯ ದುರ್ಗತಿ ನೋಡಿದ ಮೇಲೆ ರಾಜ್ಯೋತ್ಸವ ಪ್ರಶಸ್ತಿಗೂ ಇದಕ್ಕೂ ಇನ್ನು ಮುಂದೆ ವ್ಯತ್ಯಾಸ ಉಳಿಯಲಾರದು ಎನಿಸುವಂತಿದೆ. 1992 ರಲ್ಲಿ ಶುರುವಾದ ಕರ್ನಾಟಕ ರತ್ನ ಪ್ರಶಸ್ತಿ ನೀಡಿಕೆ ಪ್ರತಿ ವರ್ಷ ನೀಡುವಂತಾದ್ದಲ್ಲ. ಈ ಹಿಂದೆ 1992 ರಲ್ಲಿ ಕುವೆಂಪು, 93 ರಲ್ಲಿ ಡಾ. ರಾಜ್, 99 ರಲ್ಲಿ ನಿಜಲಿಂಗಪ್ಪ, 2000 ರಲ್ಲಿ ವಿಜ್ಞಾನಿ ಸಿ.ಎನ್.ಆರ್. ರಾವ್, 2005 ರಲ್ಲಿ ಭೀಮಸೇನ್ ಜೋಶಿ ಹಾಗೂ 2007 ರಲ್ಲಿ ಸಿದ್ಧಗಂಗೆಯ ಶಿವಕುಮಾರ್ ಸ್ವಾಮಿಗೆ ಈ ಪ್ರಶಸ್ತಿ ಸಂದಿದೆ. ಬಹುತೇಕ ಸಿದ್ದಗಂಗಾ ಸ್ವಾಮಿ ಹೊರತುಪಡಿಸಿದರೆ ಉಳಿದವರು ಪ್ರಶಸ್ತಿಯ ಮಟ್ಟಕ್ಕೇ ಇರುವವರಾಗಿದ್ದಾರೆ. ಸಿದ್ದಗಂಗಾ ಸ್ವಾಮಿಯ ಕೋಮುವಾದ, ಕೆಟ್ಟ ಜಾತಿವಾದಿ ನಿಲುವುಗಳನ್ನು ನೋಡಿದ ಬಿಜೆಪಿಗಳು ಖುಷಿಯಿಂದ ಕರ್ನಾಟಕ ರತ್ನವನ್ನು ಮಂಜೂರು ಮಾಡಿದ್ದರು. ಈಗ ಬಹುಶಃ ದೇಜಗೌ ಆಯ್ಕೆಯ ಹಿಂದೆಯೂ ಒಕ್ಕಲಿಗರನ್ನು ಸಂತೋಷಪಡಿಸುವ ಒಂದು ಹುನ್ನಾರವಿರಲಿಕ್ಕೂ ಸಾಕು ಎಂಬುದನ್ನು ಅಲ್ಲಗಳೆಯುವಂತಿಲ್ಲ.




ಏಕೆಂದರೆ ಈ ದೇ.ಜವರೇಗೌಡರು ತಾವು ಸಾಹಿತಿ, ಶಿಕ್ಷಣ ತಜ್ಞ, ಕನ್ನಡ ಪ್ರೇಮಿ etc etc ಎಂದು ಏನೇ ಹೇಳಿಕೊಂಡರೂ ಅವರು ಮೊಟ್ಟಮೊದಲಿಗೆ ಜಾತಿವಾದಿ ಎಂಬುದೇ ಸರ್ವಕಾಲಿಕ ಸತ್ಯ. ಜೊತೆಗೆ ಸ್ವಜನಪಕ್ಷಪಾತ. ಲೋಭಗಳೆಲ್ಲಾ ತುಂಬಿಕೊಂಡು ಅವರೇ ಅವರ ಸಾಹಿತ್ಯದ ಖದರ್ರು ಕಡಿಮೆ ಮಾಡಿಕೊಂಡಿದ್ದಾರೆ.

ರೋಗಿಷ್ಟ ಜಾತಿವಾದಿ ಮನಸು

ಕುವೆಂಪು ಬದುಕಿದ್ದಾಗಿನಿಂದಲೂ ಅವರ ವಕ್ತಾರರೆಂಬಂತೆ ಪೋಸು ಕೊಟ್ಟುಕೊಂಡೇ ಬಂದಿರುವ ದೇಜಗೌ ಮೂಲತಃ ಕುವೆಂಪುರವರ ಆಶಯಗಳಿಗೆ ಗೋರಿ ತೋಡಿದ ಮನುಷ್ಯ. ಈತ ಮೈಸೂರು ವಿ.ವಿ. ಉಪಕುಲಪತಿಯಾಗಿದ್ದಾಗ ಕಿರುಕುಳ ಅನುಭವಿಸಿರುವವರು ಒಬ್ಬಿಬ್ಬರಲ್ಲ. ಹಿಂದುಳಿದ ವರ್ಗದ ಸೃಜನ, ವಿದ್ವಾಂಸ ಪ್ರೊ. ಎಲ್. ಬಸವರಾಜ್‌ರನ್ನು ತುಳಿಯಲು ಇನ್ನಿಲ್ಲದಂತೆ ಯತ್ನಿಸಿದ ದೇಜಗೌ ಅವರ ಬದಲಾಗಿ ಒಕ್ಕಲಿಗ ಮೇಷ್ಟ್ರುಗಳನ್ನಷ್ಟೇ ಸಲುಹಿದರು. ಜಿ.ಎಸ್. ಶಿವರುದ್ರಪ್ಪನವರೂ ರೀಡರ್ ಹುದ್ದೆಗೆ ಬರದಂತೆ ತಡೆದು ಅವರು ಮಹಾರಾಜ ಕಾಲೇಜಿಗೆ ಮಾತ್ರ ಸೀಮಿತವಾಗುವಂತೆ ನೀಚ ಕುತಂತ್ರ ಮಾಡಿದ್ದರು. ತಮ್ಮ ಮಗ ಶಶಿಧರ ಪ್ರಸಾದ್‌ಗೆ ಇನ್ನುಳಿದವರ ಸೀನಿಯಾರಿಟಿಯನ್ನು ಲೆಕ್ಕಿಸದೆ ಏಕಾಏಕಿ ರೀಡರ್ ಹುದ್ದೆ ಕೊಟ್ಟು ಸ್ವಾರ್ಥ ತೋರಿಸಿದ್ದರು. ತಾವು ವಿಸಿಗಿರಿಯಿಂದ ಕೆಳಗಿಳಿಯುವ ಮುನ್ನ ಹಾ.ಮಾ. ನಾಯಕರನ್ನು ಪ್ರೊಫೆಸರ್‌ಗಿರಿಗೇರಿಸಿ ಕೊನೆಗೊಮ್ಮೆ ಹಾ.ಮಾ.ನಾ. ಬೇರೆ ಯಾವುದೋ ಕಾರಣಕ್ಕೆ ದೇಜಗೌರನ್ನು ಟೀಕಿಸಿದಾಗ "ನಾನು ಅವನ್ನ ಪ್ರೊಫೆಸರ್ ಮಾಡಿದೆ, ಈಗ ನನ್ನೇ ಟೀಕಿಸ್ತಾನೆ ನೋಡಿ" ಎಂದು ಹೇಳಿ ತಮ್ಮ ಫ್ಯೂಡಲ್ ದುರ್ಬುದ್ಧಿ ಪ್ರದರ್ಶಿಸಿದ್ದರು.





ಈ ದೇಜಗೌ ವೈರುಧ್ಯ ಏನೆಂದರೆ 'ಆಚಾರ ಹೇಳೋಕೆ, ಬದನೆಕಾಯಿ ತಿನ್ನೋಕೆ' ಎಂಬಂತದ್ದು. ತಮ್ಮ ಹತ್ತಿರ ಬರುವವರಿಗೆಲ್ಲಾ 'ಕುವೆಂಪು ಮಂತ್ರ ಮಾಂಗಲ್ಯದ ರೀತಿ ಮದುವೆ ಮಾಡಿ' ಎಂದು ಪುಗಸಟ್ಟೆ ಉಪದೇಶ ಕೊಡುತ್ತಾ ತಾವು ಮಾತ್ರ ಮಗನ ಹಾಗೂ ಮೊಮ್ಮಕ್ಕಳ ಮದುವೆಯನ್ನು ಭರ್ಜರಿಯಾಗಿ ನಡೆಸಿ ಆರಾಮಾಗಿದ್ದವರು. ವೈಚಾರಿಕತೆ ಎಂದು ಎಷ್ಟೇ ಹೇಳಿಕೊಂಡರೂ ಮಠಾಧೀಶರ ಕಾಲಿಗೆ ಬೀಳುವುದರಲ್ಲಿ ದೇಜಗೌ ಮಹಾ ಪ್ರವೀಣ. ಈತ ಸುತ್ತೂರು ಸ್ವಾಮಿ ಕಾಲಿಗೆ ಡೈವ್ ಹೊಡೆಯುವ ಪ್ರಸಂಗಗಳು ಮೈಸೂರಿನ ಜನಕ್ಕೆ ಬಹಳ ಮನೋರಂಜಕವಾಗಿ ಕಾಣುತ್ತಿರುತ್ತದೆ. ಈ ಹಿಂದೆ ಕಷ್ಟಪಟ್ಟು ಕೆಲಸ ಮಾಡಿರುವ ದೇಜಗೌ ಇಷ್ಟಪಟ್ಟು ಸಾಧಿಸಿರುವುದು ಸ್ವಲ್ಪ ಕಡಿಮೆ. ಮೈಸೂರು ವಿ.ವಿ.ಯಲ್ಲಿ ಜಾನಪದ ಅಧ್ಯಯನ ವಿಭಾಗವನ್ನು ಬಲಪಡಿಸಿದ್ದು, ಟಾಲ್‌ಸ್ಟಾಯ್‌ನ ಯುದ್ಧ ಮತ್ತು ಶಾಂತಿ, ಅನ್ನಾ ಕರ್ರೇನಿನಾ, ಪುನರುತ್ಥಾನಗಳ ಅನುವಾದ ಹಾಗೂ ಲೋಹಿಯಾ, ಅಂಬೇಡ್ಕರ್, ಜೆಪಿ, ಫುಲೆ, ನಾರಾಯಣಗುರುರವರ ಜೀವನ ಚರಿತ್ರೆ ಬರೆದಿದ್ದಾರಾದರೂ ಇವರ್‍ಯಾರಿಂದಲೂ ದೇಜಗೌ ಪ್ರಭಾವಿತರಾಗಿಲ್ಲ, ಇದಕ್ಕೆ ಅವರ ಒಡೆತನದ ಕುವೆಂಪು ಟ್ರಸ್ಟೇ ಸಾಕ್ಷಿಯಾಗಿದೆ.

ಕುವೆಂಪು ಹೆಸರಲ್ಲಿ ಲೂಟಿ


ಮೈಸೂರಿನ ಜಯಲಕ್ಷ್ಮಿಪುರಂ ಬಳಿ ಹತ್ತಾರು ಎಕರೆ ಜಮೀನನ್ನು ಕುವೆಂಪು ಟ್ರಸ್ಟ್ ಹೆಸರಿನಲ್ಲಿ ಮಂಜೂರು ಮಾಡಿಸಿಕೊಂಡಿರುವ ದೇಜಗೌ ಶುದ್ಧ ಮಾರ್ವಾಡಿ ಲೆಕ್ಕಾಚಾರದ ವ್ಯಕ್ತಿ. ಅಲ್ಲಿ ಕನ್ನಡ ಮಾಧ್ಯಮಿಕ, ಪ್ರೌಢಶಾಲೆಗಳಿವೆ. ಕಾಲೇಜೂ ಇದೆ. ಆದರೆ ಯಾರಿಗೂ ಸರಳ ನೆಮ್ಮದಿಯ ಜೀವನಕ್ಕೆ ಬೇಕಿರುವಷ್ಟು ಸಂಬಳ ಕೊಡುವುದಿಲ್ಲ ಈ ಕರ್ನಾಟಕ ರತ್ನ. ಅದಿಷ್ಟೇ ಅಲ್ಲ, ಅದೇ ಜಾಗದ ರಸ್ತೆಯ ಮುಂಭಾಗ ಭಾರಿ ಶಾಪಿಂಗ್ ಕಾಂಪ್ಲೆಕ್ಸ್ ಕಟ್ಟಿಸಿ ಲಕ್ಷಾಂತರ ರೂಪಾಯಿ ಬಾಡಿಗೆ ಪಡೆಯುತ್ತಿದ್ದಾರೆ ದೇಜಗೌ. ಈ ಕಾಂಪ್ಲೆಕ್ಸ್‌ಗೆ ನಗರಪಾಲಿಕೆಯ ಅನುಮತಿಯಿಲ್ಲ. ಈಗಲೂ ದೇಜಗೌ ಅವರು ತೆರಿಗೆ, ಕಂದಾಯ ಏನನ್ನು ಕಟ್ಟುವುದಿಲ್ಲ. ಇದೊಂಥರಾ ಕಾನೂನಿನ ಚೌಕಟ್ಟಿಗೆ ಸೇರದ ಮಹಾನ್ ವ್ಯಾಪಾರ.

ದೇಜಗೌಗೆ ಮೂರೂ ಮುಖ್ಯ ಖಯಾಲಿಗಳಿವೆ. ಹೊಗಳಿಕೆ, ಹಣ ಹಾಗೂ ಸ್ಥಾನಮಾನಗಳ ಹಂಬಲಿಕೆ. ಕನ್ನಡಕ್ಕೆ ಶಾಸ್ತ್ರೀಯ ಭಾಷೆಯ ಸ್ಥಾನಮಾನ ಪಡೆಯಲು ಏಕಾಏಕಿ ಒಂದು ದಿನ ಆಮರಣಾಂತ ಉಪವಾಸ ನಡೆಸಿದ ದೇಜಗೌ ನಾಟಕೀಯ ಪ್ರಹಸನ ನಡೆಸಿದರು. ವಿನಾಕಾರಣ ಯು.ಆರ್. ಅನಂತಮೂರ್ತಿಯವರನ್ನು ಕನ್ನಡ ವಿರೋಧಿಯೆಂಬಂತೆ ಬಿಂಬಿಸಿ 'ದೇಶ ಬಿಟ್ಟು ಹೋಗುವಂತೆ' ತಿಕ್ಕಲು ಮಾತನಾಡಿದ್ದರು. ತುಳು, ಕೊಡವ ಭಾಷಾ ಅಕಾಡೆಮಿ ರಚನೆಯಾಗಲಿ ಎಂಬ ಒತ್ತಾಯ ಕೇಳಿಬಂದಾಗ 'ಅವರೆಲ್ಲಾ ಕನ್ನಡ ದ್ರೋಹಿಗಳು' ಎಂದು ಚೀರಿಕೊಂಡಿದ್ದರು ದೇಜಗೌ. ಈತನೊಬ್ಬ ಅವಿವೇಕಿಯೆನ್ನಲು ಇನ್ನೇನು ಬೇಕು ಹೇಳಿ. ದೇಜಗೌ ಮಾಲೀಕತ್ವದ ಕುವೆಂಪು ಟ್ರಸ್ಟ್‌ನಲ್ಲಿ ಅವರ ಮಗ ಶಶಿಧರ್ ಪ್ರಸಾದ್ ಹಾಗೂ ಮಗಳು ಡಾ. ಚಂದ್ರಕಲಾರೇ ಮೆಂಬರ್‌ಗಳಾಗಿದ್ದಾರೆ. ಅದರ ಆದಾಯ-ವೆಚ್ಚಗಳ ಲೆಕ್ಕ ಇದುವರೆಗೂ ಯಾರಿಗೂ ಗೊತ್ತಾಗಿಲ್ಲ.

ತಮ್ಮ 'ಹೋರಾಟದ ಬದುಕು' ಆತ್ಮಕತೆಯಲ್ಲಿ 'ನನ್ನ ಆಡು ಕಾಯೋಕೆ ಹಾಕಿದ್ರು' ಎಂದು ಹೇಳಿಕೊಳ್ಳುವ ದೇಜಗೌ ತಮ್ಮ ವೀಸಿ ಅಧಿಕಾರಾವಧಿಯಲ್ಲಿ ಹಾಗೂ ಕುವೆಂಪು ಟ್ರಸ್ಟಿನ ಓನರ್ ಆಗಿ ಈಗ ಕನ್ನಡ ಓರಾಟಗಾರ-ಚೀರಾಟಗಾರರಾಗಿ ಅನೇಕರನ್ನು ಕತ್ತೆ ಮೇಯಿಸುವ ಕೆಲಸಕ್ಕೆ ತಳ್ಳಲು ಯತ್ನಿಸಿದ್ದರೆಂಬ ಸತ್ಯ ಎದ್ದು ಕಾಣುತ್ತಿದೆ.

ದೇಜಗೌ 'ಕರ್ನಾಟಕ ರತ್ನ' ಎನಿಸಿಕೊಳ್ಳುವಷ್ಟು ದೊಡ್ಡವರಾಗಿಲ್ಲ, ಹಾಗಾಗಿ ಅವರ ಬಲೆಗೆ ಬಿದ್ದಿರುವ ಕರ್ನಾಟಕ ರತ್ನವೇ ಈಗ ಚಿಕ್ಕದಾಗಿ ಹೋಗಿದೆ.

-ಪಾರ್ವತೀಶ



ವಿವೇಚನೆ ಇಲ್ಲದ ವಿದ್ವಾಂಸ

ದೇಜಗೌಗೆ ಮೊದಲಿನಿಂದಲೂ ಅಧಿಕಾರಸ್ಥರನ್ನು ಓಲೈಸುವ ಕೆಟ್ಟ ಚಾಳಿಯಿದೆ. ಜೊತೆಗೆ ಪ್ರಚಾರದ ಹುಚ್ಚೂ ಕೂಡ. ಕೆಲವರ್ಷಗಳ ಹಿಂದೆ ಕರ್ನಾಟಕ ಕಂಡ ಅತೀ ಭ್ರಷ್ಟ ಮುಖ್ಯಮಂತ್ರಿ ಎಸ್.ಎಂ. ಕೃಷ್ಣರಿಗೆ ದೇಜಗೌ ಸಂಪಾದಕತ್ವದಲ್ಲೇ ಒಂದು ಅಭಿನಂದನಾ ಗ್ರಂಥ ಅರ್ಪಿಸಲಾಗಿತ್ತು, ಕೊಂಚ ಆತ್ಮಗೌರವ, ಘನತೆಯಿರುವ ಸಾಹಿತಿಗಳ್ಯಾರು ಮಾಡಲು ಹಿಂಜರಿಯುವ ಕೆಲಸವನ್ನು ದೇಜಗೌ ಆರಾಮಾಗಿ ಮಾಡಿದ್ದರು. ಅದಾದನಂತರ ವಂಚನೆಯ ಹಗರಣ ನಡೆಸಿದ ಗುರುಟೀಕ್ ಸಂಸ್ಥೆಯವರು ಕರೆದಾಗ ಚೂರೂ ಸಂಕೋಚ ಪಡದೆ ಹೋಗಿ ಸನ್ಮಾನ ಮಾಡಿಸಿಕೊಂಡು ಬಂದಿದ್ದರು ದೇಜಗೌ. ಇವರ ಅವಿವೇಕತನ ಪೂರ್ತಿ ಜಗಜ್ಜಾಹೀರಾಗಿದ್ದು ಮಾಫಿಯಾ ಡಾನ್ ಒಬ್ಬನ ಜೊತೆ ಜೊತೆಗೆ ಸೇರಿ ಹೊಗೇನಕಲ್ ಹೋರಾಟ ಮಾಡಲು ಹೊರಟಾಗ. ಆ ಡಾನ್‌ಗೆ ಹೊಗೇನಕಲ್ ವಿಚಾರದ ತಲೆಬುಡ ಗೊತ್ತಿರದಿದ್ದಾಗಲೂ ಸಾವಿರಾರು ವೆಹಿಕಲ್‌ಗಳಲ್ಲಿ ಜಾಥಾ ಹೊರಟಾಗ ಮೈಸೂರಿನಲ್ಲಿ ಆತನನ್ನು ದೇಜಗೌ ಸ್ವಾಗತಿಸಿ ಅವನೊಂದಿಗೆ ಒಂದೇ ವೇದಿಕೆ ಮೇಲೆ ಕೂತು ಪತ್ರಿಕಾಗೋಷ್ಠಿ ನಡೆಸಿದ್ದರು.

ದೇಜಗೌ ವಿವೇಚನೆಯಿರದ ವಿದ್ವಾಂಸ ಎನ್ನಲು ಇಂತಹ ನೂರಾರು ಉದಾಹರಣೆಗಳಿವೆ.

ಯಡ್ಡಿಯ 'ನೈಸ್' ಡೀಲ್
ಶಿಡ್ಲಘಟ್ಟದಲ್ಲಿ 50 ಲಕ್ಷ!
ಬೆಂಗಳೂರಲ್ಲಿ 80 ಸಾವಿರ




ದೇವೇಗೌಡರು ಯಡ್ಡಿ ಸರ್ಕಾರವನ್ನು 'ಬ್ಲಡಿ ಬಾಸ್ಟರ್ಡ್' ಎಂದು ಬೈದಿದ್ದು ಈಗ ಎಲ್ಲರಿಂದಲೂ ಖಂಡನೆಗೊಳಗಾಗಿದೆ. ಇದು ಖಂಡಿಸಲೇಬೇಕಾದ ಮಾತುಗಳು ನಿಜ. ಗೌಡರಂತಹ ಹಿರಿಯ ಮನುಷ್ಯನ ಬಾಯಲ್ಲಿ, ಅದೂ ಸಾರ್ವಜನಿಕವಾಗಿ, ಮೀಡಿಯಾಗಳೆದುರು ಈ ಪರಿಯ ಕೀಳು ಭಾಷೆಯ ಬಳಕೆ ಸರ್ವತಾ ಸಮರ್ಥನೀಯವಲ್ಲ.

ಆದರೆ ದೇವೇಗೌಡರ ಬೈಗುಳದ ಮಾತಿರಲಿ, ಬೆಂಗಳೂರು ಸುತ್ತಮುತ್ತ 'ನೈಸ್' ಕಂಪನಿಗಾಗಿ ಜಮೀನು ಕಳೆದುಕೊಳ್ಳುತ್ತಿರುವ ರೈತರು ಯಡ್ಡಿಗೆ ಹಾಗೂ ಬಿಜೆಪಿ ಸರ್ಕಾರಕ್ಕೆ ಬೈಯ್ಯುತ್ತಿರುವುದನ್ನೊಮ್ಮೆ ಕೇಳಬೇಕು.

ಕಿಂಚಿತ್ತಾದರೂ ಮಾನಮರ್ಯಾದೆ ಇರುವವರು ಕೂಡಲೇ ಪ್ರಾಣ ತೆಗೆದುಕೊಳ್ಳಬೇಕು..... ಹಾಗಿದೆ ರೈತರ ಶಾಪ.

ರೈತರ ಹೆಸರಿನಲ್ಲಿ ಪ್ರಮಾಣವಚನ ಸ್ವೀಕರಿಸಿ ಅಧಿಕಾರಕ್ಕೆ ಬಂದಿರುವ ಯಡಿಯೂರಪ್ಪನ ಬಿಜೆಪಿ ಸರ್ಕಾರವು ಬೆಂಗಳೂರು ಹೊರವಲಯದ ಕೆಂಗೇರಿ, ತಲಘಟ್ಟಪುರ, ಬಿಡದಿ, ನೆಲಮಂಗಲ, ಮಾಗಡಿ ರಸ್ತೆಯ ಆಸುಪಾಸಿನಲ್ಲಿ



ಬರೋಬ್ಬರಿ ಹದಿನೆಂಟು ಸಾವಿರ ಎಕರೆ ಭೂಮಿಯನ್ನು 'ನೈಸ್' ಕಂಪನಿಗೆ ಕೊಡಮಾಡುತ್ತಿದೆ. ಇದರಲ್ಲಿ ಬಹುತೇಕ ರೈತರಿಗೆ ಸೇರಿರುವ ಸಾವಿರಾರು ಎಕರೆ ಫಲವತ್ತಾದ ಭೂಮಿ ಇದೆ.


ಅಂದಹಾಗೆ ಈ ಜಮೀನುಗಳಿಗೆ ರೈತ ನಾಯಕ ಯಡಿಯೂರಪ್ಪ ನಿಗದಿ ಮಾಡುತ್ತಿರುವ ಪರಿಹಾರದ ಮೊತ್ತ ಎಷ್ಟು ಗೊತ್ತೆ?


ಎಕರೆಗೆ 80 ಸಾವಿರ ರೂಪಾಯಿ!

2 ಕೋಟಿ ಕೊಟ್ಟರೂ ಸಿಗದ ಬೆಂಗಳೂರಿನ ಈ ಜಮೀನುಗಳಿಗೆ 'ಹೋಗಲಿ ತಗೋ, ಎಲ್ಲಾದರು ಬದುಕಿಕೊ ಹೋಗು' ಎಂಬಂತೆ, ಭಿಕ್ಷೆಯಂತೆ ಈ ಜುಜುಬಿ ಹಣವನ್ನು ಕೊಡಲು ಬಂದರೆ ರೈತರು ರೊಚ್ಚಿಗೇಳದೆ ಇರುತ್ತಾರೆಯೆ? ಅವರು ಕಾಲಲ್ಲಿರುವುದನ್ನು ಕೈಗೆ ತೆಗೆದುಕೊಳ್ಳದೆ ಇರುತ್ತಾರೆಯೆ?

ಇಷ್ಟಕ್ಕೂ ಈ ಜಮೀನುಗಳು ಯಡಿಯೂರಪ್ಪನ ಅಪ್ಪನ ಆಸ್ತಿಯೂ ಅಲ್ಲ, ನೈಸ್ ಕಂಪನಿಯವರು ದುಡಿದು ಸಂಪಾದಿಸಿರುವುದೂ ಅಲ್ಲ. ಹೀಗಿರುವಾಗ ದೇವೇಗೌಡರು ಬರೀ 'ಬ್ಲಡಿ....' ಇತ್ಯಾದಿ ಬೈದರೆ ಸಾಮಾನ್ಯ ರೈತರು 'ತಲೆಹಿಡುಕ ಸರ್ಕಾರ' ಅನ್ನದೆ ಏನು ಮಾಡುತ್ತಾರೆ? ಯಡ್ಡಿ ಕೊಡಿಸಲು ಹೊರಟಿರುವ ಎಕರೆಗೆ 80 ಸಾವಿರ ಪರಿಹಾರದ ಹಣದಲ್ಲಿ ಅದೇ ಏರಿಯಾಗಳಲ್ಲಿ ಜುಜುಬಿ 20x30 ಅಳತೆಯ ಸೈಟೂ ಸಿಗುವುದಿಲ್ಲ ಎಂಬ ಸತ್ಯ ಈ ಬಿಜೆಪಿಗಳಿಗೆ ಗೊತ್ತಿಲ್ಲವೆ?

ಈ ಯಡಿಯೂರಪ್ಪನ ಮೋಸ, ವಂಚನೆಗಳು ಯಾವ ಲೆವೆಲ್ಲಿಗೆ ತಲುಪಿದೆಯೆಂದರೆ ಈಗ್ಗೆ 6 ತಿಂಗಳ ಹಿಂದೆ ಬೆಂಗಳೂರಿನಿಂದ 60 ಕಿ.ಮೀ. ದೂರದಲ್ಲಿರುವ ಶಿಡ್ಲಘಟ್ಟ ತಾಲ್ಲೂಕಿನಲ್ಲಿ ಎಕರೆಗೆ 50 ಲಕ್ಷ ರೂಪಾಯಿ ಬೆಲೆ ನಿಗದಿ ಮಾಡಿ ಕರ್ನಾಟಕ ಹೌಸಿಂಗ್ ಬೋರ್ಡ್ ಮೂಲಕ ಜಮೀನು ಖರೀದಿಸಿರುವುದು 'ನ್ಯಾಯವಾಗಿದೆ' ಎನ್ನುತ್ತಿದ್ದಾರೆ. ಆದರೆ ಬೆಂಗಳೂರಿನಿಂದ 20 ಕಿ.ಮೀ. ಫಾಸಲೆಯಲ್ಲಿರುವ ಈಗ ಬೃಹತ್ ಬೆಂಗಳೂರಿನ ಭಾಗವೇ ಆಗಿಹೋಗಿರುವ ಊರಿನ ಜಮೀನುಗಳಿಗೆ ಎಕರೆಗೆ 80 ಸಾವಿರ ರೂಪಾಯಿ ಕೊಟ್ಟರೆ ಸಾಕು ಎನ್ನುತ್ತಿದ್ದಾರೆ. ಹೊಟ್ಟೆಗೆ ಅನ್ನ ತಿನ್ನುವವರು ಯಾರಾದರೂ ಹೀಗೆ ಮಾಡುತ್ತಾರೆಯೇ? ಯಡ್ಡಿಯ ಈ ನೀಚ ಕೆಲಸಕ್ಕೆ ಕೇವಲ 'ಬ್ಲಡಿ' ಅಂದರಷ್ಟೇ ಸಾಕಾ?





ಬಾಸ್ಟರ್ಡ್, ಈಡಿಯಟ್ಸ್, ತಲೆಹಿಡುಕರು ಮತ್ತು ಬಿಎಂಐಸಿ

ಹಸಿರು ಶಾಲು ಹೊದ್ದ ಜೆಡಿಎಸ್ ನಾಯಕ ದೇವೇಗೌಡ ಬಿಎಂಐಸಿ ಯೋಜನೆಯ ಸಂತ್ರಸ್ತ ಹೆಚ್.ಗೊಲ್ಲಹಳ್ಳಿಯ ಪಂಚಲಿಂಗಯ್ಯನ ಜೊತೆ ನೈಸ್ ರಸ್ತೆ ಮೇಲೆ ನಿಂತುಕೊಂಡು ಇದ್ದಕ್ಕಿದ್ದಂತೆ ಮುಖ್ಯಮಂತ್ರಿ ಯಡಿಯೂರಪ್ಪನವರನ್ನು "ಬಾಸ್ಟರ್ಡ್, ಬೋ.... ಮಗ" ಇತ್ಯಾದಿ ಬೈದಿದ್ದಾರೆ. ಇದಕ್ಕೆ ಪ್ರತಿಕ್ರಿಯೆಯಾಗಿ ರಾಜ್ಯದ ವಿವಿಧ ಭಾಗಗಳಲ್ಲಿ ಬಿಜೆಪಿಗಳು ದೇವೇಗೌಡರ ಪ್ರತಿಕೃತಿಗೆ ಚಪ್ಪಲಿ ಹಾರ ಹಾಕಿ ಸುಟ್ಟಿದ್ದಾರೆ. ಇದು ಬಿಎಂಐಸಿ ಎಂಬ 15 ವರ್ಷಗಳ ಸುದೀರ್ಘ ವಿವಾದದ ಹೊಸ ಅಂಕ. ಇವೆಲ್ಲದರ ಪರಿಣಾಮವಾಗಿ ಮೂರು ಪ್ರಶ್ನೆಗಳು ರಾಜ್ಯದೆಲ್ಲೆಡೆ ಚರ್ಚೆಯಾಗುತ್ತಿವೆ.

ಒಂದು, ಮಾಜಿ ಪ್ರಧಾನಿಗಳಾಗಿರತಕ್ಕಂತಹ ದೇವೇಗೌಡರು ಇಂತಹ ಭಾಷೆಯನ್ನು ಬಳಸಬಹುದೇ? ಅದಕ್ಕೆ ಪ್ರತಿಯಾಗಿ ಬಿಜೆಪಿ ಪಕ್ಷದವರೂ ಚಪ್ಪಲಿ ಹಾರದಂತಹ ಪ್ರತಿಭಟನೆಗಳನ್ನು ಮಾಡಬಹುದೇ?

ಎರಡು, ಈ ಯೋಜನೆ ಯಾರ ಪಾಪದ ಕೂಸು? ದೇವೇಗೌಡರದ್ದು ಮಾತ್ರವೋ ಅಥವಾ ಅವರು ಹಡೆದ ಕೂಸನ್ನು ಮುದ್ದಾಡಿದ ಕಾಂಗ್ರೆಸ್ ಮತ್ತು ಬಿಜೆಪಿ ಸರ್ಕಾರಗಳದ್ದೋ?

ಮೂರು, ದೇವೇಗೌಡರು "ಮೂಲ ಒಪ್ಪಂದಕ್ಕೆ ಬದ್ಧವಾಗಿ ಯೋಜನೆಯನ್ನು ಜಾರಿ ಮಾಡಿದರೆ ನನ್ನದೇನೂ ಅಭ್ಯಂತರವಿಲ್ಲ, ಆದರೆ ನಿಗದಿತ ಪ್ರಮಾಣಕ್ಕಿಂತ ಹೆಚ್ಚಾಗಿ ಭೂಮಿಯನ್ನು ನೋಟಿಫೈ ಮಾಡಲಾಗಿದೆ" ಎಂದು ಹೇಳುತ್ತಿದ್ದಾರೆ. ಈ ಮೂಲ ಒಪ್ಪಂದವೇನು? ಯಡ್ಡಿ ಮತ್ತು ನೈಸ್ ಕಂಪನಿಯ ಅಶೋಕ್ ಖೇಣಿ ನಿಗದಿತ ಪ್ರಮಾಣಕ್ಕಿಂತ ಹೆಚ್ಚಿನ ಭೂಮಿ ತೆಗೆದುಕೊಳ್ಳುತ್ತಿಲ್ಲ ಎಂದು ಹೇಳುತ್ತಿರುವುದು ನಿಜವೇ?

ಈ ಲೇಖನದಲ್ಲಿ ಕೊನೆಯ ಎರಡು ಪ್ರಶ್ನೆಗಳಿಗೆ ನಿಖರವಾದ ಉತ್ತರವನ್ನು ಓದಿದನಂತರ ಬಾಸ್ಟರ್ಡ್ ಈಡಿಯಟ್ಸ್ ಯಾರು, ತಲೆಹಿಡುಕರು ಯಾರು ಎಂಬುದನ್ನು ನೀವು ತೀರ್ಮಾನ ಮಾಡಬಹುದು.


ದೇವೇಗೌಡರು ಕಳೆದ ಐದು ವರ್ಷಗಳಿಂದ ಈ ಯೋಜನೆಯ ಹಿಂದಿರುವ ರೀತಿಗೆ ತಾನು ಕಾರಣನಲ್ಲ ಎಂದು ಹೇಳುತ್ತಿದ್ದಾರೆ. ಮೊದ ಮೊದಲಿಗೆ ದೇವೇ ಗೌಡರು ಸಹಿ ಹಾಕಿದ್ದು ಕೇವಲ ಎಕ್ಸ್‌ಪ್ರೆಸ್ ಹೈವೇ ರಸ್ತೆಗೆ ಹೊರತು ಟೌನ್‌ಶಿಪ್‌ಗಳಿಗಲ್ಲಾ ಎಂಬ ಸುದ್ದಿಯು ಹರಿದಾಡುತ್ತಿತ್ತು, ಆದರೆ ಇಂದು ನಿಸ್ಸಂದೇಹವಾಗಿ ಸಾಬೀತಾಗಿರುವ ಅಂಶವೇನೆಂದರೆ, ದೇವೇಗೌಡರು ಮುಖ್ಯಮಂತ್ರಿಯಾಗಿದ್ದಾಗಲೇ ಟೌನ್‌ಶಿಪ್‌ಗಳಿಗೂ ಒಟ್ಟಿಗೆ ಮುದ್ರೆ ಒತ್ತಲಾಗಿತ್ತು.


ಮೊಟ್ಟಮೊದಲ ಒಪ್ಪಂದ ಆಗಿದ್ದು ಖೇಣಿಯ ಪಡ್ಡಕನಾದ ಕಲ್ಯಾಣಿ ಗ್ರೂಪ್ ಆಫ್ ಕಂಪೆನೀಸ್‌ನ ಮಾಲೀಕ ಬಾಬಾ ಕಲ್ಯಾಣಿ, ಎಸ್‌ಎಬಿ ಎಂಬ ಅಮೆರಿಕದ ಮಸಾಚುಸೆಟ್ಸ್‌ನ ಕಂಪೆನಿಯ ಅಧ್ಯಕ್ಷನಾಗಿದ್ದ ಅಶೋಕ್ ಖೇಣಿ ಎಂಬ ಬೀದರ್‌ನ ಭೂಮಾಲೀಕ ಮನೆತನದ ಅನಿವಾಸಿ ಭಾರತೀಯ ಹಾಗೂ ವಿಎಚ್‌ಬಿ ಎಂಬ ಮಸಾಚುಸೆಟ್ಸ್‌ನ ಮತ್ತೊಂದು ಕಂಪೆನಿಗಳೊಂದಿಗೆ. ಸರ್ಕಾರದ ಪರವಾಗಿ ಸಹಿ ಮಾಡಿದ್ದು ಮೇಜರ್ ಸಿ.ಆರ್.ರಮೇಶ್ ಎಂಬ ಪಿಡಬ್ಲ್ಯುಡಿ ಇಲಾಖೆಯ ಕಾರ್ಯದರ್ಶಿ.


ಈ ಖೂಳನ ಹೆಸರನ್ನು ನೀವು ನೆನಪಿಟ್ಟುಕೊಳ್ಳಬೇಕು. ಲೋಕಾಯುಕ್ತದಿಂದ ಈತನ ಅಕ್ರಮದ ತನಿಖೆ ನಡೆಯುತ್ತಿದ್ದಾಗ, ತನ್ನ ಡೆತ್ ಸರ್ಟಿಫಿಕೇಟ್ ತೋರಿಸಿ ಬಚಾವಾಗಿದ್ದ ಕ್ರಿಮಿನಲ್ ಈ ರಮೇಶ್. ಇದಕ್ಕೆ ಸಹಿ ಹಾಕಿದ ಕೆಲಕಾಲದ ನಂತರ ಈತ ನೈಸ್ ಕಂಪನಿಯ ಇದೇ ಬಿಎಂಐಸಿ ಯೋಜನೆಯ ಯೋಜನಾ ನಿರ್ದೇಶಕನಾದ.

ದಿವ್ಯ ಸಾನ್ನಿಧ್ಯ ವಹಿಸಿ ಸಹಿ ಹಾಕಿದವರು ಮಸಾಚುಸೆಟ್ಸ್‌ನ ಗವರ್ನರ್ ವಿಲಿಯಂ ವೆಲ್ಡ್ ಮತ್ತು ಮುಖ್ಯಮಂತ್ರಿ ದೇವೇಗೌಡರು. ಅವರೊಂದಿಗೆ ಕೂತು ಕೈಗಾರಿಕಾ ಮಂತ್ರಿಯಾಗಿ ವೀಕ್ಷಿಸಿದವರು ಇಂದಿನ ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಆರ್.ವಿ.ದೇಶಪಾಂಡೆ. ಈ ಒಪ್ಪಂದ ನಡೆದದ್ದು ಫೆ. 20, 1995ರಲ್ಲಿ ಕೇವಲ ಬೆಂಗಳೂರು- ಮೈಸೂರು ಎಕ್ಸ್‌ಪ್ರೆಸ್ ಹೈವೇಗೆ ಮಾತ್ರ.

ಅದಾದನಂತರ ಅಂದಿನ ಪಿಡಬ್ಲ್ಯುಡಿ ಮಂತ್ರಿ ಶಿವಾನಂದ ಕೌಜಲಗಿ ನೇತೃತ್ವದಲ್ಲಿ ಈ ಯೋಜನೆ ಮುಂದುವರೆಯಲು 95ರ ಜೂನ್ 5ರಂದು ಉನ್ನತ ಮಟ್ಟದ ಸಮಿತಿ ರಚನೆಯಾಯಿತು. ಅದರ ಮೊದಲ ಸಭೆ ಜೂನ್ 14ಕ್ಕೇ ನಡೆಯಿತು. ಮೇಜರ್ ರಮೇಶನೂ ಅದರಲ್ಲಿದ್ದ. ಅದರಲ್ಲಿ ಎಕ್ಸ್‌ಪ್ರೆಸ್ ಹೈವೇ, ಬೆಂಗಳೂರು ಮೈಸೂರು ಇನ್‌ಫ್ರಾಸ್ಟ್ರಕ್ಚರ್ ಕಾರಿಡಾರ್ - ಬಿಎಂಐಸಿ ಆಗಿ ಪರಿವರ್ತಿತವಾಯಿತು. ಇದಕ್ಕೆ ಸಂಬಂಧಿಸಿದಂತೆ ಸರ್ಕಾರೀ ಆದೇಶವೂ







20ನೇ ನವೆಂಬರ್ 95ರಂದು ಹೊರಬದ್ದಿತು. ಅದರಲ್ಲಿ ಟೌನ್‌ಶಿಪ್ ಸಹ ಇತ್ತು, ಸರ್ಕಾರಿ ಜಮೀನನ್ನು ಎಕರೆಗೆ 10 ರೂ.ನಂತೆ ಲೀಸ್ ಕೊಡುವ ಅಂಶವೂ ಇತ್ತು. ದೇವೇಗೌಡರೇ ಮುಖ್ಯಮಂತ್ರಿಗಳೂ ಆಗಿದ್ದರು. ಅವರು ಪ್ರಧಾನಮಂತ್ರಿಗಳಾಗಿ ದೆಹಲಿಗೆ ಬಿಜಯಂಗೈದಿದ್ದು ಜೂನ್ 1996ರಲ್ಲಿ. ಆದರೆ ಆಗ ವಶಪಡಿಸಿಕೊಳ್ಳಬೇಕೆಂದು ಹೇಳಲಾದದ್ದು 18,313 ಎಕರೆಗಳನ್ನು. ನಂತರ ಅದು ಜೆ.ಎಚ್.ಪಟೇಲರ ಕಾಲದಲ್ಲಿ 20,193 ಎಕರೆಗಳಾಯಿತು; ಇಷ್ಟು ಎಕರೆಗಳಿಗೇ ಇಂದು ಬಹುಚರ್ಚಿತವಾಗುತ್ತಿರುವ ಫ್ರೇಮ್‌ವರ್ಕ್ ಒಪ್ಪಂದವೂ ಆಯಿತು (3-4-97ರಂದು). ಆದರೆ ಪಟೇಲರ ಕಾಲದಲ್ಲೇ ಈ ಒಪ್ಪಂದವನ್ನು ಉಲ್ಲಂಘಿಸಿ 23,846 ಎಕರೆಗಳಿಗೆ ಏರಿಸಲಾಯಿತು. ನಂತರ ಎಸ್.ಎಂ.ಕೃಷ್ಣ ಮತ್ತು ಧರ್ಮಸಿಂಗರ ಕಾಲದಲ್ಲಿ ಮತ್ತಷ್ಟು ಏರಿಕೆಯಾಗಿ 29,258 ಎಕರೆಗಳಾಯಿತು.

ಈ ಹೆಚ್ಚುವರಿ ಭೂಮಿಯ ವಿರುದ್ಧವೇ ದೇವೇಗೌಡರು ಈಗ ಮಾತನಾಡುತ್ತಿರುವುದು. ಇಷ್ಟು ಭೂಮಿ ಹೆಚ್ಚಳವಾಗಿರುವುದು ಬೆಂಗಳೂರಿನ ಸುತ್ತಲೇ ಆಗಿದ್ದು ಇದರಲ್ಲಿ ಒಂದಷ್ಟು ಭಾಗ ಆಗಲೇ ನೈಸ್ ಕಂಪೆನಿಯ ಹಸ್ತಗತವೂ ಆಗಿಬಿಟ್ಟದೆ. ಮಧ್ಯೆ ಸುಮಾರು 2,500 ಸಾವಿರ ಎಕರೆಗಳಷ್ಟು ಭೂಮಿಯನ್ನು ಡೀನೋಟಿಫೈ ಮಾಡಲಾಗಿದೆಯಾದರೂ, ಹೊಸದಾಗಿ ಇನ್ನೆಷ್ಟನ್ನು ನೋಟಿಫೈ ಮಾಡಲಾಗಿದೆ ಎಂಬುದು ಯಾರಿಗೂ ಗೊತ್ತಿಲ್ಲ. ಯಾವ ಕಾರಣಕ್ಕೂ ಫ್ರೇಮ್‌ವರ್ಕ್ ಒಪ್ಪಂದವನ್ನು ಉಲ್ಲಂಘಿಸಬಾರದೆಂದು ಹೈಕೋರ್ಟ್ ಮತ್ತು ಸುಪ್ರೀಂಕೋರ್ಟ್‌ಗಳು ಕನಿಷ್ಠ ಐದು ಬಾರಿ ಈಗಾಗಲೇ ಹೇಳಿದ್ದರೂ ಈ ಒಪ್ಪಂದದ ಉಲ್ಲಂಘನೆಯನ್ನು ನೈಸ್ ಕಂಪೆನಿ ಮತ್ತು ಒಂದಾದ ಮೇಲೆ ಒಂದರಂತೆ ಬಂದ ಸರ್ಕಾರಗಳು ನಿರಂತರವಾಗಿ ಉಲ್ಲಂಘಿಸುತ್ತಲೇ ಬಂದಿವೆ. ಅಂದರೆ ಈ ವಿಚಾರದಲ್ಲಿ ದೇವೇಗೌಡರು ಹೇಳುತ್ತಿರುವುದರಲ್ಲಿ ನಿಜವಿದೆ.

ದೇವೇಗೌಡರು ಹೆತ್ತ ಕೂಸನ್ನು ಮುದ್ದಾಡಿ, ತಲೆ ಬೋಳಿಸಿದವರಲ್ಲಿ (ಕೂಸಿನದ್ದಲ್ಲಾ, ರಾಜ್ಯದ ಜನತೆಯದ್ದು) ಹಲವು ದೊಡ್ಡ ದೊಡ್ಡ ಹೆಸರುಗಳಿವೆ. ಕೆಲವನ್ನು ಹೇಳಬೇಕೆಂದರೆ ಜನತಾದಳ ಮತ್ತು ಕಾಂಗ್ರೆಸ್ ಸರ್ಕಾರಗಳೆರಡರಲ್ಲೂ ಬೃಹತ್ ಕೈಗಾರಿಕಾ ಮಂತ್ರಿಯಾಗಿದ್ದ ಈಗಿನ ಪ್ರದೇಶ ಕಾಂಗ್ರೆಸ್‌ನ ಅಧ್ಯಕ್ಷ ದೇಶಪಾಂಡೆ, ನಗರಾಭಿವೃದ್ಧಿ ಸಚಿವರಾಗಿದ್ದು ಬಿಎಂಐಸಿಎಪಿಎ (ಬಿಎಂಐಸಿ ಪ್ರದೇಶ ಯೋಜನಾ ಪ್ರಾಧಿಕಾರ)ದ ಅಧ್ಯಕ್ಷರಾಗಿದ್ದ ಹಾಲಿ ಕಾಂಗ್ರೆಸ್ ಕಾರ್ಯಾಧ್ಯಕ್ಷ ಡಿ.ಕೆ.ಶಿವಕುಮಾರ್, ಜಾತಿ-ನೆಂಟಸ್ತನ ಇತ್ಯಾದಿಗಳನ್ನು ಬೀದರ್‌ನ ಭೂಮಾಲೀಕ ಖೇಣಿಯ ಜೊತೆ ಹೊಂದಿರುವನೆಂದು ಹೇಳಲಾದ ಸರ್ಕಾರದ ಮಾಜಿ ಮುಖ್ಯ ಕಾರ್ಯದರ್ಶಿ ಬಿ.ಎಸ್.ಪಾಟೀಲ್, ಮೊದಲು ಪಿಡಬ್ಲ್ಯುಡಿ ಸಚಿವ ನಂತರ ಮುಖ್ಯಮಂತ್ರಿಯಾಗಿದ್ದ ಖೇಣಿಯ ಬೀದರ್‌ನ ಹಾಲಿ ಸಂಸದ ಧರ್ಮಸಿಂಗ್, ಮೇಲೆ ಹೇಳಲಾದ ಕ್ರಿಮಿನಲ್ ಮೇಜರ್ ಸಿ.ಆರ್.ರಮೇಶ್, ಕೆಐಎಡಿಬಿಯ ಅಧ್ಯಕ್ಷರಾಗಿದ್ದ ಐಎಎಸ್ ಅಧಿಕಾರಿ ಶಂಕರಲಿಂಗೇಗೌಡ, ಸರ್ಕಾರದಿಂದ ಬಿಎಂಐಸಿಪಿ ವಿಶೇಷ ಅಧಿಕಾರಿಯಾಗಿದ್ದು ನೈಸ್ ಕಂಪನಿಯ ಎಂಜಿ ರಸ್ತೆಯ ಮಿಡ್‌ಫೋರ್ಡ್ ಹೌಸ್‌ನಲ್ಲೇ ತನ್ನ ಕಚೇರಿಯನ್ನೂ ಹೊಂದಿದ್ದ ಬಸವರಾಜ್, ಮೇಜರ್ ರಮೇಶನಷ್ಟೇ ಕ್ರಿಮಿನಲ್ ಆದ ಬಿಎಂಐಸಿ ಯೋಜನೆಯ ವಿಶೇಷ ಜಿಲ್ಲಾಧಿಕಾರಿಯಾಗಿದ್ದು ಈಗ ವೈದ್ಯಕೀಯ ಶಿಕ್ಷಣ ಇಲಾಖೆಯಲ್ಲಿ ಹೆಚ್ಚುವರಿ ಕಾರ್ಯದರ್ಶಿಯಾಗಿದ್ದುಕೊಂಡು ಮೆಡಿಕಲ್ ಕಾಲೇಜು ನೇಮಕಾತಿಗಳಲ್ಲಿ ಅಮೇಧ್ಯ ತಿನ್ನುತ್ತಿರುವ ಅನೀಸ್ ಸಿರಾಜ್ ಮತ್ತು ಮಾಜಿ ಮುಖ್ಯಮಂತ್ರಿ ಹಾಗೂ ಹಾಲಿ ಈ ದೇಶದ ಗೌರವಾನ್ವಿತ ವಿದೇಶಾಂಗ ಸಚಿವ ಎಸ್.ಎಂ.ಕೃಷ್ಣ ಈ ಹೆಸರುಗಳು ಎದ್ದು ಕಾಣುತ್ತವೆ.

ಇದಲ್ಲದೆ ಅಪಾಧಭೂತಿಗಳ ಮತ್ತೊಂದು ಸರಮಾಲೆಯೇ ಎದ್ದು ಕಾಣುತ್ತದೆ. ಬಿಎಂಐಸಿ ಯೋಜನೆ ರಾಜ್ಯ ಕಂಡ ದೊಡ್ಡ ಹಗರಣ ಎಂದು ವಿಧಾನಪರಿಷತ್ತಿನಲ್ಲಿ ಮಾತನಾಡಿದ ಎಚ್.ಕೆ.ಪಾಟೀಲರು ನಂತರ ತಮ್ಮದೇ ಪಕ್ಷದ ಸರ್ಕಾರ ಅದನ್ನು ಕಂಡಾಪಟ್ಟೆ ಬೆಂಬಲಿಸಿ ನಿಯಮ ಉಲ್ಲಂಘಿಸಿದಾಗ ತೆಪ್ಪಗಿದ್ದರು. ಹಿಂದೆ ವಿಧಾನಸಭೆಯಲ್ಲೂ ಬಿಎಂಐಸಿ ವಿರುದ್ಧ ಮಾತನಾಡಿದ್ದ ಆರ್.ಅಶೋಕ್ ಮತ್ತು ಸುರೇಶ್ ಕುಮಾರ್ ನಂತರ ಬಿಜೆಪಿ-ಜೆಡಿಎಸ್ ಸರ್ಕಾರದಲ್ಲಿ ಸಚಿವರಾಗಿದ್ದಾಗ ನೈಸ್ ವಿರುದ್ಧ ಅಜೆಂಡಾ ಇದೆ ಎಂದ ಮಾತ್ರಕ್ಕೆ ಸಂಪುಟ ಸಭೆಯನ್ನೇ ಬಹಿಷ್ಕರಿಸಿಬಿಟ್ಟರು; ಇಂದು ಅವರುಗಳೇ ಇರುವ ಸರ್ಕಾರದಿಂದ ಎಲ್ಲಾ ರೀತಿಯ ಸಹಕಾರವನ್ನು ನೀಡುತ್ತಿದ್ದಾರೆ.



ರೈತರನ್ನು ವಂಚಿಸಿದವರು

ೀವೇಗೌಡರು ಮುಖ್ಯಮಂತ್ರಿಯಾಗಿದ್ದಾಗ 1995 ರಲ್ಲಿ ಾದ ಬೆಂಗಳೂರು-ಮೈಸೂರು ಎಕ್ಸ್‌ಪ್ರೆಸ್ ಕಾರಿಡಾರ್ ಜನೆಯು ಕಳೆದ 15 ವರ್ಷಗಳಲ್ಲಿ ನಾನಾ ವೇಷ ರೂಪಾಂತರಗೊಂಡಿದೆ. ಈಗದು ಒಂದು ಶುದ್ಧ ್ ಎಸ್ಟೇಟ್ ದಂಧೆ ಮಾತ್ರ. ಅಭಿವೃದ್ಧಿಯ ಹೆಸರಿನಲ್ಲಿ ನಿನ ಬಲ ಬಳಸಿ, ಬಡರೈತರ ಆಸ್ತಿ ಕಬಳಿಸಿ ಮವರು ಹಣ ಮಾಡಿಕೊಳ್ಳುವ ದಂಧೆಯನ್ನಾಗಿ ಈ ಜನೆಯನ್ನು ಬಳಸಿಕೊಳ್ಳಲಾಗುತ್ತಿದೆ.

ಡಿಎಸ್ ಹಾಕಿಕೊಟ್ಟ ಈ ತಳಹದಿಯ ಮೇಲೆ ನಂತರ ರಕ್ಕೆ ಬಂದ ಕಾಂಗ್ರೆಸ್‌ನವರು ಕಟ್ಟಡ ಎಬ್ಬಿಸಿ ತಾವೂ ಷ್ಟಿ ತಿಂದು ತೇಗಿದ್ದರು. ಈಗ ಹಣ ನುಂಗಲು ಯೂರಪ್ಪ ಹಾಗೂ ಬಿಜೆಪಿಗಳ ಸರದಿ ಬಂದಿದೆ. ್ಲರ ಗದ್ದಲದಲ್ಲಿ ಕೇವಲ ರಸ್ತೆ ನಿರ್ಮಿಸಲು ಬಂದಿದ್ದ ೆ ನಾಲ್ಕೈದು ಟೌನ್‌ಶಿಪ್‌ಗಳಿಗೆಂದೂ ಒಟ್ಟು ನ್ನುಂಜೂರಾತಿಯನ್ನು 20,193 ಎಕರೆಗಳಿಗೆ ಲಾಯಿತು. ಆಶ್ಚರ್ಯದ ಸಂಗತಿ ಏನೆಂದರೆ ಈ ಇಡೀ ಜನೆಯು ಒಟ್ಟು 30 ವರ್ಷದ ಅವಧಿಯದಾಗಿದ್ದು ವಧಿ ಮುಗಿದ ಬಳಿಕ ನೈಸ್‌ನವರು ತಾವು ಲೀಸ್ ಆಧಾರದಲ್ಲಿ ಪಡೆಯುವ ಸರ್ಕಾರಿ ಜಮೀನಾಗಿರುವ 14 ಸಾವಿರ ಎಕರೆಗಳನ್ನು ವಾಪಸ್ ಮಾಡಬೇಕಿತ್ತು ಆದರೆ ಎಸ್.ಎಂ. ಕೃಷ್ಣ ಸರ್ಕಾರ ಅದ್ಯಾವ ಮಾಯದಲ್ಲೋ ಗೋಲ್‌ಮಾಲ್ ಮಾಡಿ ನೈಸ್‌ನವರು 14 ಸಾವಿರ ಎಕರೆಗೆ ಬದಲಾಗಿ 11 ಸಾವಿರ ಎಕರೆ ಭೂಮಿಯನ್ನು ಸರ್ಕಾರಕ್ಕೆ ಹಿಂದಿರುಗಿಸಿದರೆ ಸಾಕು ಎಂದು ಒಪ್ಪಂದ ಬದಲಿಸಿದ್ದರು. ಅಷ್ಟೇ ಅಲ್ಲದೆ, ಬಿಎಂಐಸಿ ರಸ್ತೆಯ ಅಲೈನ್‌ಮೆಂಟನ್ನು ಪದೇಪದೇ ಮನಸೋ ಇಚ್ಛೆ ಬದಲಾಯಿಸಲಾಗುತ್ತಿದೆ. ರಸ್ತೆಗೆ ಸಂಬಂಧಿಸಿರದ ಬೆಲೆಬಾಳುವ ಭೂಮಿಗಳನ್ನು ಈ ಯೋಜನೆಯ ನೆಪದಲ್ಲಿ ಮುಗ್ಧ ರೈತರಿಂದ ಕಸಿದುಕೊಳ್ಳಲಾಗುತ್ತಿದೆಯೆಂಬ ದೂರುಗಳಂತೂ ಅಸಂಖ್ಯ.

ಮುಖ್ಯಮಂತ್ರಿ ಯಡಿಯೂರಪ್ಪನವರು 'ಈ ಯೋಜನೆ ಶುರುವಾಗಿದ್ದು ದೇವೇಗೌಡರ ಕಾಲದಲ್ಲಿ, ನಾವು ಅದಕ್ಕೆ ಹೊಣೆಯಲ್ಲ' ಎನ್ನುತ್ತಿದ್ದಾರೆ. ಆದರೆ ಕೇಳಬೇಕಾದ ಪ್ರಶ್ನೆ ಏನೆಂದರೆ 'ಯೋಜನೆ ಯಾರ ಕಾಲದಲ್ಲೇ ಶುರುವಾಗಿರಲಿ. ಅದು ಈಗ ರೈತ ವಿರೋಧಿ ಹೌದಾ ಅಲ್ಲವಾ ಎಂಬ ಪ್ರಶ್ನೆ ತಾನೆ ಮುಖ್ಯ?' ಗೌಡರ ಕಾಲದಲ್ಲಿ ಆದ ಒಪ್ಪಂದದಲ್ಲಿ "ರೈತರ ಜಮೀನು ಸ್ವಾಧೀನ ಮಾಡಿಕೊಳ್ಳುವಾಗ ಮಾರುಕಟ್ಟೆ ಬೆಲೆಯನ್ನೇ ಪರಿಹಾರವಾಗಿ ನೀಡಬೇಕು" ಎಂಬ ಷರತ್ತು ಇತ್ತು.

ಈಗ ಯಡಿಯೂರಪ್ಪ ಸಿಎಂ ಆಗಿದ್ದಾರೆ. ಇವತ್ತು 2010 ರಲ್ಲಿ ಸ್ವಾಧೀನ ಮಾಡಿಕೊಳ್ಳಲಾಗುತ್ತಿರುವ ಜಮೀನುಗಳಿಗೆ 80 ಸಾವಿರ ರೂಪಾಯಿ ಕೊಟ್ಟರೆ ಸಾಕು ಎಂದು ಯಡಿಯೂರಪ್ಪ ಹೇಳುತ್ತಿದ್ದಾರೆ.

ಕಳ್ಳನಿಗೆ ಕೊಟ್ಟರೂ ಎಕರೆಗೆ ಒಂದು ಕೋಟಿ ಬೆಲೆ ಸಿಗುವ ಈ ಭೂಮಿಗೆ ಯಡ್ಡಿ 80 ಸಾವಿರ ಎನ್ನುವಾಗ ಇವರನ್ನು 'ಬ್ಲಡಿ' ಅಷ್ಟೇ ಯಾಕೆ 'ಡಕಾಯಿತ' ಅಂದರೂ ತಪ್ಪಾಗುವುದಿಲ್ಲ

-ಪಾರ್ವತೀಶ

ರೈತರಿಗೆ ಯಡ್ಡಿ ನಾಮ




ಯಡ್ಡಿಯ ಬಲಗೈ ಬಂಟ ಮಾಲೂರಿನ ಬಿಜೆಪಿ ಶಾಸಕ ಕೃಷ್ಣಯ್ಯ ಶೆಟ್ಟಿ ವಸತಿ ಸಚಿವನಾಗಿದ್ದಾಗ ಶಿಡ್ಲಘಟ್ಟ ಭೂಹಗರಣ ನಡೆಯಿತು. ಕರ್ನಾಟಕ ಹೌಸಿಂಗ್ ಬೋರ್ಡಿನ ಚೇರ್‌ಮನ್ ಸಹ ಆಗಿದ್ದ ಕೃಷ್ಣಯ್ಯ ಶೆಟ್ಟಿ ಯಡಿಯೂರಪ್ಪನ ಮೂಗಿನ ಕೆಳಗೇ ನಿಂತು ನಡೆಸಿದ ವಂಚನೆ ಬಿಜೆಪಿಗಳು ಎಂಥ ಹಗಲು ದರೋಡೆಖೋರರೆಂಬುದಕ್ಕೆ ಜೀವಂತ ಸಾಕ್ಷಿಯಾಗಿದೆ. ಕೆಎಚ್‌ಬಿಯ ಯೋಜನೆಗೆ ಶಿಡ್ಲಘಟ್ಟ ತಾಲ್ಲೂಕಿನಲ್ಲಿ ಎಕರೆಗೆ 50 ಲಕ್ಷದಂತೆ ಭೂಮಿ ಖರೀದಿಸಬಹುದೆಂದು ಇದೇ ಯಡ್ಡಿ ಸರ್ಕಾರ 2009 ರ ಫೆಬ್ರವರಿ 20 ರಂದು ಒಂದು ಆದೇಶ ಹೊರಡಿಸಿತು. ಅದಕ್ಕೂ ಮುನ್ನ ಕೃಷ್ಣಯ್ಯ ಶೆಟ್ಟಿಯ ತಮ್ಮ ಶ್ರೀನಿವಾಸ್ ಶೆಟ್ಟಿ ಹಾಗೂ ಪಾರ್ಟನರ್ ಎ.ಬಿ. ರಮೇಶ್ ಎಂಬುವರು ಶಿಡ್ಲಘಟ್ಟ ತಾಲ್ಲೂಕಿನ ಜಂಗಮಕೋಟೆಯ ಸರಗೂರು, ಜಿ. ವೆಂಕಟಾಪುರ, ಸುರಟೂರು, ಬುಲುವನಹಳ್ಳಿ, ಹೊಸಪೇಟೆ ಗ್ರಾಮಗಳಲ್ಲಿ ರೈತರಿಂದ ಎಕರೆಗೆ 5 ಲಕ್ಷದಂತೆ ಭೂಖರೀದಿಯ ಡೀಲ್ ಕುದುರಿಸಿಕೊಂಡಿದ್ದರು. ನಂತರ ಸರ್ಕಾರಿ ಆದೇಶ ಹೊರಬಿದ್ದ ಮರುದಿನವೇ ಅಂದರೆ 2009 ರ ಫೆಬ್ರವರಿ 21 ರಂದೆ ಎಕರೆಗೆ 50 ಲಕ್ಷದಂತೆ ಕೆಎಚ್‌ಬಿ ಹಣತೆತ್ತು 10 ಎಕರೆ ಖರೀದಿಸಿತು. ಅದೇ ದಿನ ಎಸ್.ಪಿ. ರಸ್ತೆಯ ಕಾರ್ಪೊರೇಷನ್ ಬ್ಯಾಂಕಿನ ಮೂಲಕ ಶ್ರೀನಿವಾಸ ಶೆಟ್ಟಿ ಹಾಗೂ ರಮೇಶ್ 5.98 ಕೋಟಿ ಹಣ ಡ್ರಾ ಮಾಡಿಕೊಂಡರು. (ಚೆಕ್ ನಂಬರ್ 736026. ಆಮೇಲೆ ಇದೇ ರೇಟಿನಲ್ಲಿ ಒಟ್ಟು 30.31 ಎಕರೆ ಜಮೀನು ಹಸ್ತಾಂತರವಾಯಿತು. ಇದೊಂದೇ ಡೀಲಿನಲ್ಲಿ ಯಡ್ಡಿ ಹಾಗೂ ಶೆಟ್ಟಿ 13 ಕೋಟಿ ಲೂಟಿ ಹೊಡೆದಿದ್ದಾರೆ.

ಅಸಲಿ ವಂಚನೆ ಏನೆಂದರೆ ಈ ಡೀಲ್ ನಡೆಯುವಾಗ ಶಿಡ್ಲಘಟ್ಟದಲ್ಲಿ ಸರ್ಕಾರವೇ ನಿಗದಿ ಮಾಡಿದ್ದ ಜಮೀನಿನ ಬೆಲೆ ಎಕರೆಗೆ 1.20 ಲಕ್ಷ ರೂಪಾಯಿ ಇತ್ತು, ಆದರೂ ಎಕರೆಗೆ 50 ಲಕ್ಷ ಕೊಡಲಾಗಿದೆ. ಇತ್ತ ಬೆಂಗಳೂರಿನ ಸುತ್ತಮುತ್ತ ಸರ್ಕಾರಿ ಬೆಲೆಯೇ ಎಕರೆಗೆ ಕೋಟಿ ರೂಪಾಯಿ ಇದ್ದರೂ ಯಡ್ಡಿ ಸರ್ಕಾರ ರೈತರಿಗೆ 80 ಸಾವಿರ ರೂಪಾಯಿ ಕೊಟ್ಟರೆ ಸಾಕು ಎನ್ನುತ್ತಿದೆ.

ಇವರು ಎಂಥ..... ನನ್ಮಕ್ಕಳಿರಬಹುದು ಯೋಚಿಸಿ!

ೀ ಯೋಜನೆಯ ಹಿಂದೆ ಕರ್ನಾಟಕದ ಇತಿಹಾಸ ಕಂಡರಿಯದಷ್ಟು ಾಗಳು ಇವೆ. ಇದು ಕನಿಷ್ಠ 50,000 ಕೋಟಿ ಹಗರಣ. ತನ್ನ ಲಾಭ 00 ಕೋಟಿ ಇರುತ್ತದೆಂದು ನೈಸ್ ಕಂಪೆನಿ ಹೂಡಿಕೆದಾರರ ಬಳಿ ಕೊಂಡಿದೆ. ಇನ್ನೊಂದು 10,000 ಕೋಟಿಗಳಷ್ಟು ಹಣವನ್ನು ವಿವಿಧ ಳ ರಾಜಕಾರಣಿಗಳು, ಅಧಿಕಾರಿಗಳು, ಮಠಾಧೀಶರು, ಪುಂಡ ಪೋಕರಿಗಳು ್ದಾರೆ.

ದರ ಬಗ್ಗೆ ಮೊತ್ತ ಮೊದಲು ಸುದ್ದಿಯಾದದ್ದು 1996ರ ಮಾರ್ಚ್ - ್ನ ಜನವಿಮುಕ್ತಿ ಮಾಸಪತ್ರಿಕೆಯಲ್ಲಿ. ಅದರ ನಂತರ 1997ರ ಹೊತ್ತಿಗೆ ್ ಪತ್ರಿಕೆಯಲ್ಲಿ ಇದರ ಕುರಿತು ಲೇಖನವೊಂದು ಪ್ರಕಟವಾಯಿತು. ಮಾಹಿತಿ ಹಕ್ಕು, ಮಾಹಿತಿ ಎರಡೂ ಯಾರಿಗೂ ಸಿಗದ ಹೊತ್ತಿನಲ್ಲಿ ಯೋಜನೆಯ ಹೂರಣವನ್ನು ಬಯಲಿಗೆಳೆದದ್ದು ಅಂದಿನ ಕರ್ನಾಟಕ ಚನಾ ರಂಗ ಸಂಘಟನೆ. ಆ ನಂತರ ವಿಮೋಚನಾ ರಂಗದ ಕ್ರಿಯಾಶೀಲತೆ ಬಿಎಂಐಸಿ ವಿರೋಧಿ ಒಕ್ಕೂಟ ಮೂರೂ ಜಿಲ್ಲೆಗಳಲ್ಲಿ ರೂಪುಗೊಂಡಿತ್ತು. ಎಸ್.ದೊರೆಸ್ವಾಮಿ, ಡಾ.ಸಿ.ಬಂಡೀಗೌಡರಂತಹ ಹಿರಿಯರು ಅದರ ಸೇರಿಕೊಂಡರು. ರೈತಸಂಘವೂ ಸೇರಿದಂತೆ ಹಲವು ನೆಗಳು ಒಕ್ಕೂಟದಲ್ಲಿ ಕೆಲಸ ಮಾಡಿದವು. ಮಂಡ್ಯ ಲ್ಲಿ ಬಂದ್ ಮಾಡುವವರೆಗೆ ಹೋರಾಟ ಬೆಳೆ ಪಬ್ಲಿಕ್ ಹಿಯರಿಂಗ್ ಸಂದರ್ಭಗಳಲ್ಲಿ ವ್ಯಕ್ತವಾದ ಧವೂ ಸೇರಿದಂತೆ ಯೋಜನೆ ಕೆಲವು ಸಿಕ್ಕುಗಳಲ್ಲಿ ಕೊಂಡಿತು. ಹಾಗಾಗಿ ಇನ್ನು ಈ ಯೋಜನೆ ಲಾರದೆನ್ನಿಸಿ ಹೋರಾಟದ ಕಾವು ಇಳಿದಿತ್ತು.



ವರೆ ನಿಧಾನಕ್ಕೆ ಬೆಂಗಳೂರು ಸುತ್ತಲೇ ಏಳೆಂಟು ಎಕರೆ ಹೆಚ್ಚುವರಿ ಭೂಮಿಯನ್ನು ನೋಟಿಫೈ ಕೊಂಡ ನೈಸ್ ಕಂಪನಿ ತನ್ನ ಆರ್ಭಟವನ್ನು ಮಾಡಿತು. ಬಿಎಂಐಸಿ ವಿರೋಧಿ ಒಕ್ಕೂಟದ ಜೊತೆ ಅಷ್ಟಾಗಿ ಳ್ಳದಿದ್ದ ಬೆಂಗಳೂರು ಭಾಗದ ರೈತರು ಈಗ ಕಷ್ಟಕ್ಕೆ ಸಿಕ್ಕಿಕೊಂಡರು. ನೋಡುತ್ತಿದ್ದಂತೆಯೇ ಸಾವಿರಾರು ಎಕರೆ ಭೂಮಿಯನ್ನು ಮಾರುಕಟ್ಟೆ ತ್ರ ಕಾಲುಭಾಗಕ್ಕೆ ನೈಸ್ ಕಂಪೆನಿ ವಶಪಡಿಸಿಕೊಂಡಿತು. ರಸ್ತೆಗೆಂದು ಐದ ಜಮೀನನ್ನು ರೈತರ ಕಣ್ಣೆದುರೇ ಬೇರೆ ಬೇರೆ ಕುಬೇರರಿಗೆ ಾಯಿತು. ಇಂತಹ ಅಕ್ರಮಗಳ ಪಟ್ಟಿ ಮಾಡಿದರೆ ಅದು ಒಂದು ವಲ್ಲ, ಪುಸ್ತಕವೇ ಆಗುತ್ತದೆ.

ಹೊತ್ತಿಗೆ ದೇವೇಗೌಡರಿಗೂ ಖೇಣಿಗೂ ಹಳಸಿಕೊಂಡಿತ್ತು. 2004ರ ಸಣೆಗೆ ಮುಂಚೆ ಬೆಂಗಳೂರಿನ ಸುತ್ತ ಭೂಮಿ ಕಳೆದುಕೊಳ್ಳುತ್ತಿದ್ದ ಶ್ರೀಮಂತರು ಗೌಡರನ್ನು ಸಂಪರ್ಕಿಸಿದರು. ಅವರಲ್ಲಿ ಇಂದಿನ ಧೀನ ಹೋರಾಟ ಸಮಿತಿಯ ಅಧ್ಯಕ್ಷ ವಿಜಯರಾಘವನ್ ಪ್ರಮುಖರು. ರ ಇಲ್ಲದಿದ್ದಾಗ ಅಬ್ಬರಿಸುವ ಗೌಡರು, ಪಂಚೆ ಎತ್ತಿಕಟ್ಟಿ ರಾಜಭವನಕ್ಕೆ ಣಿಗೆ ತೆಗೆದರು. ಚುನಾವಣೆಯ ನಂತರ ಅಧಿಕಾರಕ್ಕೆ ಬಂದ ಕಾಂಗ್ರೆಸ್-ಜೆಡಿಎಸ್‌ನ ಸಮ್ಮಿಶ್ರ ಸರ್ಕಾರದ ಸಮಯದಲ್ಲಿ ನೈಸ್‌ಗೆ ತೊಂದರೆ ಕೊಡಲು ಅಷ್ಟಾಗಿ ಸಾಧ್ಯವಾಗಲಿಲ್ಲ. ಮಿಕ್ಕೆಲ್ಲಾ ವಿಚಾರಗಳಲ್ಲಿ ದೇವೇಗೌಡರು ಹೇಳಿದ್ದಕ್ಕೆಲ್ಲಾ ಎಸ್ ಎನ್ನುತ್ತಿದ್ದ ಧರ್ಮಸಿಂಗ್, ಈ ವಿಚಾರದಲ್ಲಿ ಮಾತ್ರ ನೈಸಾಗಿ ಖೇಣಿಯ ಪರ ನಿಲ್ಲುತ್ತಿದ್ದರು. ದೇವೇಗೌಡರು ಕೋರ್ಟಿನ ಮೆಟ್ಟಿಲು ಹತ್ತಿದರು. ದಾಖಲೆಗಳ ರಾಶಿಯನ್ನೇ ಗುಡ್ಡೆ ಹಾಕಿದರು. ಆದರೆ 18 ಸಾವಿರ ಚಿಲ್ಲರೆ ಎಕರೆ 29 ಸಾವಿರ ಆಗಿದ್ದು ಹೇಗೆ ಎಂಬುದು ಅಷ್ಟು ಸುಲಭಕ್ಕೆ ಗೊತ್ತಾಗಲಿಲ್ಲ. ನಂತರ ಸ್ವತಃ ಅವರ ಕುಮಾರ ಕಂಠೀರವ ಸಿಎಂ ಆದ ಕೂಡಲೇ ಎಲ್ಲಾ ದಾಖಲೆಗಳೂ ಸಿಕ್ಕವು.

ಫ್ರೇಮ್‌ವರ್ಕ್ ಒಪ್ಪಂದ ಉಲ್ಲಂಘನೆಯಾಗಿರುವುದರಿಂದ ಯೋಜನೆಯನ್ನು ರದ್ದುಪಡಿಸಿ, ರಸ್ತೆ ಮಾಡಲು ಜಾಗತಿಕ ಟೆಂಡರ್ ಕರೆಯುವುದು, ಇನ್ನೊಂದು ಕಂಪೆನಿಗೆ ಗುತ್ತಿಗೆ ಕೊಡುವುದು, ಅವರು ನೈಸ್ ಖರ್ಚು ಮಾಡಿದಷ್ಟು ಹಣವನ್ನು ವಾಪಸ್ ಮಾಡುವುದು ಎಂಬ ಮತ್ತೊಂದು ಯೋಜನೆಯೂ ತಯಾರಾಯಿತು. ಆದರೆ ಬಿಜೆಪಿ ಮಂತ್ರಿಗಳ ವಿರೋಧ ಮತ್ತು ಕೋರ್ಟ್‌ನಲ್ಲಿ ನೈಸ್ ಪರವಾಗಿ ಸಿಕ್ಕ ತಡೆಯಾಜ್ಞೆಯ ಕಾರಣದಿಂದ ನೈಸ್ ಬಚಾವಾಯಿತು. ಆದರೆ ಆನಂತರ ಸರ್ಕಾರ ಬಿತ್ತು. ಮುಂದಿನ ಎಲೆಕ್ಷನ್‌ನಲ್ಲಿ ಕುಮಾರಸ್ವಾಮಿಯ ವಿರುದ್ಧ ರಾಮನಗರದಲ್ಲಿ ಚುನಾವಣೆಗೆ ನಿಂತಿದ್ದು ಬೇರಾರೂ ಅಲ್ಲ. 'ಖೇಣಿ ಅಭಿಮಾನಿಗಳ ಸಂಘ'ವೆಂಬ ಪಡ್ಡೆಗಳ ಗುಂಪಿನ ಅಧ್ಯಕ್ಷ ರುದ್ರೇಶ್. ಒಂದು ಸಾಧಾರಣ ಮಧ್ಯಮ ರೈತ ಕುಟುಂಬದ ಯುವಕ ರುದ್ರೇಶ್ ತನ್ನ ಇಂತಹ ಕೆಲಸದಿಂದ ಕೋಟಿಗಳ ಕುಳವಾಗಿದ್ದ. ಇಂತಹುದೇ ಕೆಲವು ಯುವಕರು ನೈಸ್ ಪರವಾಗಿ ನಿಂತರು. ಅವರಲ್ಲಿ ಮಂಡ್ಯದ ಇಂಡುವಾಳಿನ ಸಚ್ಚಿದಾನಂದನೂ ಒಬ್ಬ. ಇಲ್ಲಿಂದ ಮುಂದಕ್ಕೆ ಖೇಣಿ-ಗೌಡ ಯುದ್ಧ ಬಹಿರಂಗವಾಗಿ ನಡೆಯಲು ಶುರುವಾಯಿತು.

ಕುಮಾರಸ್ವಾಮಿ ಇದ್ದಾಗ ಹಾಕಿಕೊಂಡಿದ್ದ ಅಧಿಕಾರಿಗಳು, ಅಡ್ವೋಕೇಟ್ ಜನರಲ್‌ಗಳು ನೈಸ್ ವಿರುದ್ಧ ಕೋರ್ಟ್‌ನಲ್ಲಿ ಅಫಿಡವಿಟ್‌ಗಳನ್ನು ಹಾಕಿದರೆ, ಯಡ್ಡಿಯ ಸರ್ಕಾರದ ಅಧಿಕಾರಿಗಳು, ಅಡ್ವೋಕೇಟ್ ಜನರಲ್‌ಗಳು ನೈಸ್ ಪರವಾಗಿ ಕೆಲಸ ಮಾಡಲಾರಂಭಿಸಿದರು. ಈಗ ಮೂಲ ಒಪ್ಪಂದಕ್ಕೆ ಭಿನ್ನವಾದ ಹಾಲಿ ಯೋಜನೆಯ ಕುರಿತು ಹತ್ತಾರು ಸುಳ್ಳುಗಳನ್ನು ಕೋರ್ಟ್‌ನಲ್ಲಿ ರಾಜಾರೋಷವಾಗಿ ಮಂಡಿಸಲಾಗುತ್ತಿದೆ. ಇದಕ್ಕೆ ವಿರುದ್ಧದ ಪಟ್ಟುಗಳನ್ನು ಹಾಕಲು ಖುದ್ದು ದೇವೇಗೌಡರು ಒಂದು ದಿನ ಸುಪ್ರೀಂಕೋರ್ಟ್‌ನಲ್ಲಿದ್ದರೆ, ಇನ್ನೊಂದು ದಿನ ಸೋಂಪುರದಲ್ಲೋ, ತಿಪ್ಪೂರಿನಲ್ಲೋ ಇರುತ್ತಾರೆ. ಜಂಗೀಕುಸ್ತಿ ಈಗ 'ಬಾ... ಬೋ' ತನಕ ಬಂದಿದೆ. ನೈಸ್ ಯಾರ ಕೂಸು ಎಂಬ ಚರ್ಚೆ ನಡೆದಿದೆ. ಯಾರ್‍ಯಾರು ಏನೇನು? ಯಾರು ಹಾದರ ಮಾಡಿದರು? ಯಾರು ಕೂಸನ್ನು ಹಡೆದರು ಎಂಬುದರ ಕುರಿತು ಓದುಗರೇ ತೀರ್ಮಾನಿಸಬೇಕು.

–ಡಾ.ವಾಸು ಎಚ್.ವಿ.
ಕರ್ನಾಟಕ ಜನಪರ ವೇದಿಕೆ

ದೇವೇಗೌಡರು ಮರೆಯುತ್ತಿರುವ ಪ್ರಶ್ನೆಗಳು

ಪ್ರಶ್ನಾವಳಿಯನ್ನು ಸಿದ್ಧ ಮಾಡಿ ಪತ್ರ ಬರೆಯುವುದರಲ್ಲಿ ಎಕ್ಸ್‌ಪರ್ಟ್ ಆಗಿರುವ ದೇವೇಗೌಡರಿಗೆ ಕೆಲವು ಪ್ರಶ್ನೆಗಳು:

1. ಇಡೀ ಯೋಜನೆಯ ಕುರಿತಾದ ಮಾಹಿತಿಯನ್ನು ತಾನೇ ಹೊರತೆಗೆದು ಹೇಳುವವರೆಗೆ ಪಾಪ ಮಣ್ಣಿನ ಮಕ್ಕಳು ಅಜ್ಞಾನದಲ್ಲಿದ್ದರು ಎಂದು ನೀವು ಹೇಳುತ್ತಿದ್ದೀರಿ. ಆದರೆ ಬಿಎಂಐಸಿ ವಿರೋಧಿ ಒಕ್ಕೂಟವು ಇದರ ಕುರಿತು ಎರಡು ಪುಸ್ತಕಗಳು, 20 ಕರಪತ್ರಗಳನ್ನು ಪ್ರಕಟಿಸಿತ್ತು. ತಮ್ಮ ಪಕ್ಷದ ಶಾಸಕರು, ಮಂತ್ರಿಗಳೇ ಇರುವ ಮಂಡ್ಯದಲ್ಲಿ ಬಹಳ ದೊಡ್ಡ ಹೋರಾಟ ನಡೆದಿತ್ತು ಎಂಬುದನ್ನು ಏಕೆ ಮರೆಯುತ್ತೀರಿ? ಆಗ ತಾವ್ಯಾಕೆ ರೈತರ ಪರ ದನಿಯೆತ್ತಲಿಲ್ಲ?
2. ಮೊದಲ ಸುತ್ತು ಪಬ್ಲಿಕ್ ಹಿಯರಿಂಗ್ ನಡೆದಾಗ ನಿಮಗೆ ಚೆನ್ನಾಗಿ ಪರಿಚಿತವಿದ್ದ ದಿವಂಗತ ಕೆ.ರಾಮದಾಸರ ಮೇಲೆ ಜನತಾದಳದ ಕಾರ್ಯಕರ್ತರ ಹಿಂಡು ಮೈಸೂರಿನಲ್ಲಿ ದಾಳಿ ಮಾಡಿತ್ತು. ಅದನ್ನು ಕೇಳಲು ಈಗ ರಾಮದಾಸರು ಬದುಕಿಲ್ಲ. ಆದರೆ ಅಂದು ಮುಡಾದ ಅಧ್ಯಕ್ಷನಾಗಿದ್ದ ನಿಮ್ಮ ಪಕ್ಷದ ಬಸವೇಗೌಡರನ್ನು ಕೇಳಿದರೆ ಸತ್ಯ ಗೊತ್ತಾಗುತ್ತದೆ. ಅದೂ ಗೊತ್ತಾಗದಿದ್ದರೆ, ಮಂಡ್ಯದ ಜ್ಯುಬಿಲಿ ಪಾರ್ಕ್‌ನಲ್ಲಿ ನಿಮ್ಮದೇ ಕಾರ್ಯಕ್ರಮದಲ್ಲಿ ಕವಿರಂಗ ಇಬ್ಬರು ಕಾರ್ಯಕರ್ತರು (ಷಣ್ಮುಖೇಗೌಡ, ನಾಗಣ್ಣ) ಬಿಎಂಐಸಿ ವಿಚಾರವಾಗಿ ಪ್ಲಕಾರ್ಡ್ ಹಿಡಿದು ಪ್ರತಿಭಟಿಸಿದರು. ಆಗಲೂ ತಮ್ಮ ಬೆಂಬಲಿಗರು ಅವರ ಮೇಲೆ ಹರಿಹಾಯ್ದಿದ್ದರು. ಆಗೇಕೆ ಯಾಕೆ ತಮಗೆ ಈ ಯೋಜನೆಯ ಸಾಧಕ ಬಾಧಕ ಗೊತ್ತಾಗಲಿಲ್ಲ?
3. ಎಲ್ಲಕ್ಕಿಂತ ಮುಖ್ಯವಾಗಿ, ನೀವು ಹೇಳುತ್ತಿರುವುದು 18 ಸಾವಿರ ಎಕರೆಗಳ, ಟೌನ್‌ಶಿಪ್‌ಗಳುಳ್ಳ ಮೂಲ ಒಪ್ಪಂದವನ್ನು ಜಾರಿ ಮಾಡಿ ಎಂದು. ಹಾಗಾದರೆ, ನಿಮ್ಮ ವಿರೋಧ ಯಾವುದಕ್ಕೆ? ಹೆಚ್ಚುವರಿ ಭೂಮಿಗೆ ಮಾತ್ರವಾ? ರೈತರ 18 ಸಾವಿರ ಭೂಮಿ ಹೋದರೆ ಪರವಾಗಿಲ್ಲವಾ?


ಅಸಲು ಪ್ರಶ್ನೆ ಏನು?

ಈ ಯೋಜನೆಯ ಬಗ್ಗೆ ಇರುವ ಅಸಲು ಪ್ರಶ್ನೆ 'ಬೋ.... ಮಗ' ವಿಚಾರದ್ದೂ ಅಲ್ಲ; ಮೂಲ ಒಪ್ಪಂದದ್ದೂ ಅಲ್ಲ. ಈ ಯೋಜನೆಯೇ ಅಪ್ರಸ್ತುತವಾಗಿತ್ತು. ಮೂಲ ಒಪ್ಪಂದದ ದಿನದಿಂದ ಇಂದಿನವರೆಗೆ ಇಡೀ ಯೋಜನೆಯ ಉದ್ದೇಶವೇ ರಿಯಲ್ ಎಸ್ಟೇಟ್ ದಂಧೆಯೇ ಹೊರತು ರಸ್ತೆ ಕಟ್ಟುವುದು ಅಲ್ಲ. ಬೆಂಗಳೂರು-ಮೈಸೂರು ಎಕ್ಸ್‌ಪ್ರೆಸ್ ಹೈವೇ ಬೇಕೆಂದು ನೈಸ್ ಕಂಪನಿ ತೋರಿಸಿದ ಸಿನೆಮಾದಲ್ಲಿ ಹೇಳಲಾಗಿದ್ದು ಏನು ಗೊತ್ತೇ?

• ಅಂದಿನ ಬೆಂ-ಮೈ ರಸ್ತೆಯನ್ನು ಅಗಲ ಮಾಡುವುದಕ್ಕೆ ಆಗುವುದಿಲ್ಲ; ಕನಕಪುರ-ಮಳವಳ್ಳಿಯ ಮೇಲೆ ಹೋಗುವ ರಸ್ತೆಯಂತೂ ಅಭಿವೃದ್ಧಿ ಮಾಡಲು ಸಾಧ್ಯವಾಗುವುದೇ ಇಲ್ಲ, ಏಕೆಂದರೆ ಈ ಎರಡೂ ರಸ್ತೆಗಳ ಅಕ್ಕಪಕ್ಕ ರಿಬ್ಬನ್ ಡೆವಲಪ್‌ಮೆಂಟ್ ಆಗಿಬಿಟ್ಟಿದೆ! ಇನ್ನು ರೈಲ್ವೇ ಮಾರ್ಗವನ್ನು ಜೋಡಿ ಮಾರ್ಗ ಮಾಡುವುದು ಆಗಲ್ಲಾ ಏಕೆಂದರೆ ರಸ್ತೆ ಮತ್ತು ರೈಲ್ವೇ ಮಾರ್ಗ ಅಕ್ಕಪಕ್ಕದಲ್ಲಿದೆ.

ಆದರೆ ವಾಸ್ತವ ಏನು? ಮಂಡ್ಯದ ಮೂಲಕ ಸಾಗುವ ಬೆಂ-ಮೈ ರಸ್ತೆ ಈಗಾಗಲೇ ಅಗಲವಾಗಿ ಜೋಡಿ ಮಾರ್ಗವಾಗಿದೆ. ನಾಲ್ಕು ಲೇನ್ ರಸ್ತೆಯಾಗಿದೆ. ಮಳವಳ್ಳಿ ಮಾರ್ಗ ರಾಷ್ಟ್ರೀಯ ಹೆದ್ದಾರಿಯಾಗಿದೆ. ರೈಲ್ವೇ ಮಾರ್ಗ ರಾಮನಗರದವರೆಗೆ ಜೋಡಿ ಮಾರ್ಗವಾಗಿದ್ದು ಉಳಿದ ಭಾಗಗಳ ಕಾಮಗಾರಿ ಸಾಗಿದೆ.

ಇಂತಹ ಸುಳ್ಳು ಈ ಯೋಜನೆಯ ಅತ್ಯಂತ ಮೂಲದಲ್ಲೇ ಇದೆ. ಹಾಗಾಗಿ ಅಸಲು ಪ್ರಶ್ನೆ ನೈಸ್ ಮತ್ತದರ ಬಿಎಂಐಸಿ ಯೋಜನೆ ಹಿಂದೆ ನಿಂತಿದ್ದ, ನಿಂತಿರುವ ರಾಜಕಾರಣಿಗಳು/ ಅಧಿಕಾರಿಗಳಿಗೆ ಯಾವುದರಲ್ಲಿ ಹೊಡೆಯುವುದು ಎಂಬುದು ಮಾತ್ರ ಆಗಿದೆ.



ಕೇಡಿ ಯಡ್ಡಿಯ ನೈಸ್ ಸುಳ್ಳು

ಇಂದು ನೈಸ್‌ಗೂ ತನಗೂ ಸಂಬಂಧವಿಲ್ಲ ಎನ್ನುತ್ತಿರುವ ಯಡಿಯೂರಪ್ಪ ಈ ರಾಜ್ಯ ಕಂಡ ಅತ್ಯಂತ ದೊಡ್ಡ ಸುಳ್ಳುಗಾರ ಎಂದು ಸಿದ್ದರಾಮಯ್ಯ ಹೇಳಿದ್ದಾರೆ.

ಕಳೆದ ಚುನಾವಣೆಯಲ್ಲಿ ರೆಡ್ಡಿಗಳಿಗೆ ಸರಿಸಾಟಿಯಲ್ಲದಿದ್ದರೂ, ಹಲವಾರು ಕ್ಷೇತ್ರಗಳ ಬಿಜೆಪಿ ಅಭ್ಯರ್ಥಿಗಳಿಗೆ ದುಡ್ಡು ಸರಬರಾಜು ಮಾಡಿದ್ದು ನೈಸ್ ಕಂಪನಿಯಲ್ಲದೆ ಯಡಿಯೂರಪ್ಪನವರೇ? ಜಾತಿ ಮತ್ತು ಅಮೇಧ್ಯ ಈ ವಿಚಾರದಲ್ಲಿ ಕೆಲಸ ಮಾಡಿಲ್ಲವೆಂದು ಯಡಿಯೂರಪ್ಪನವರು ತಮ್ಮ ಲಿಂಗದ ಮೇಲೆ ಆಣೆ ಮಾಡಿ ಹೇಳಿದರೆ, ಅವರ ತಲೆ ಬೀದರ್‌ನಿಂದ ಬಿಡದಿಯವರೆಗೂ ಹೋಳು ಹೋಳಾಗಿ ಬೀಳುತ್ತದೆ. ನಿಸ್ಸಂದೇಹವಾಗಿ ಬಿಜೆಪಿ ಇಂದು ಈ ಶತಮಾನದ ಹಗರಣದ ಪರ ನಿಂತಿದೆ. ಆರೆಸ್ಸೆಸ್‌ನ ಸಂಸ್ಥಾನವಂತರು ಅದರ ನೇತೃತ್ವ ವಹಿಸಿದ್ದಾರೆ.

ಉತ್ತರ ಕನ್ನಡ: ಹಣಕೋಣ ಬಿಟ್ಟೋಡಿದ ಥರ್ಮಲ್ ಕೋಣ!

ಹಣಕೋಣ-ಕಾರವಾರದ ಮಂದಿಯ ಪರಿಶುದ್ಧ ಪರಿಸರ ಹೋರಾಟಕ್ಕೆ ಜಯಲಭಿಸಿದಂತಾಗಿದೆ; ಒಗ್ಗಟ್ಟು-ಜನ ಶಕ್ತಿಯ ಮುಂದೆ ಪ್ರಭುತ್ವದ ಮೋಸದಾಟ ನಡೆಯದೆಂಬುದು ಸಾಬೀತಾಗಿದೆ. ಅಷ್ಟೇ ಅಲ್ಲ, ಢೋಂಗಿ ಪರಿಸರವಾದಿಗಳು-ಸ್ವಾರ್ಥಿ ಸ್ವಾಮಿಗಳ ಸೋಂಕಿಲ್ಲದ ಪರಿಸರ ಪರ ಪ್ರತಿಭಟನೆಗೆಂದೂ ಸೋಲಾಗುವುದಿಲ್ಲ ಎಂಬ ಸಂದೇಶವನ್ನು "ಹಣಕೋಣ ಹೋರಾಟ" ಇಡೀ ನಾಡಿಗೆ ಸಾರಿದೆ!





ಇದು ಜನಾಂದೋಲನದ ಜಯ!!

ಕಾರವಾರಿಗರನ್ನು ಭರ್ತಿ ಎರಡು ವರ್ಷ ಕಾಡಿದ ಆಂಧ್ರವಾಳ್ಳುಗಳ ಕಲ್ಲಿದ್ದಲು ಕರೆಂಟ್ ಕಂಪನಿ ಜನರ ಪ್ರತಿಭಟನೆಗೆ ಬೆದರಿ ಓಡಿಹೋಗಿದೆ! ಕಾರವಾರದ ಜೀವ-ಜೀವನ ಆಪೋಷನ ಪಡೆಯಲು ಅಣಿಯಾಗಿದ್ದ ಈ ಪವರ್ ಪ್ರಾಜೆಕ್ಟ್ ವಿರುದ್ಧ ರೈತ ಮೀನುಗಾರರು ಮಮತಾ ದೀದಿಯ "ಸಿಂಗೂರ್ ಮಾದರಿ" ಹೋರಾಟ ನಡೆಸಿ ಗೆದ್ದಿದ್ದಾರೆ. ಇದು ಉತ್ತರ ಕನ್ನಡದ ಪರಿಶುದ್ಧ ಪರಿಸರ ಚಳವಳಿಗೆ ಸಂದ ಮೊಟ್ಟಮೊದಲ ವಿಜಯ!

ಬಹುಶಃ ಭಾರತದ ಇನ್ಯಾವ ಕಡೆಯಲ್ಲೂ ನಡೆಯದಷ್ಟು ಹೋರಾಟ-ಚಳವಳಿ ಉತ್ತರ ಕನ್ನಡದಲ್ಲಾಗಿದೆ; ಪರಿಸರ ಪ್ರತಿಭಟನೆಗಳಿಗಂತೂ ಲೆಕ್ಕವಿಲ್ಲ, ಸರ್ಕಾರಿ ಯೋಜನೆಗಳ









"ಪ್ರಯೋಗಾಲಯ"ದಂತಾಗಿರುವ ಉತ್ತರ ಕನ್ನಡವೆಂಬ ನತದೃಷ್ಟ ಜಿಲ್ಲೆಯಲ್ಲಾದ ಅಷ್ಟೂ ಪರಿಸರ ಹೋರಾಟವನ್ನು ಪ್ರಭುತ್ವ ಹತ್ತಿಕ್ಕಿದೆ. ಪರಿಸರ ಚಳುವಳಿಗೆಲ್ಲ ಸೋಕಾಲ್ಡ್ ಪರಿಸರವಾದಿಗಳ ಮತ್ತು ಸೋಗಲಾಡಿ ಸಾಧುಗಳ ಸೂತ್ರಧಾರತ್ವದಲ್ಲಿದ್ದುದೇ ಸೋಲಿಗೆ ಪ್ರಮುಖ ಕಾರಣ!

ಆದರೆ ಹಣಕೋಣ ಹೋರಾಟದಲ್ಲಿ ಜಿಲ್ಲೆಯ ಸ್ವಯಂಘೋಷಿತ ಪರಿಸರವಾದ್ಧಿಗಳಾದ ಅನಂತ್ ಹೆಗಡೆ ಆಶೀಸರ, ಸ್ವರ್ಣವಲ್ಲಿ ಹಂಡಬಂಡಸ್ವಾಮಿ, ಸಗಣಿ ಸ್ವಾಮಿ ರಾಘವೇಶ್ವರ, ಪರಿಸರ ಪುಢಾರಿಗಳಾದ ಕಾಗೇರಿ ಮಾಣಿ, ಅನಂತ್ಮಾಣಿ... ವಗೈರೆ ವೈದಿಕವಾದಿಗಳು ಇರಲಿಲ್ಲ, ಹೀಗಾಗಿ ಕಾವು ಕಳೆದುಕೊಳ್ಳದೆ ಮುಂದುವರಿದ ಹಣ ಕೋಣ ಹೋರಾಟದಿಂದ ರೈತ-ಬೆಸ್ತರಿಗೆ ನ್ಯಾಯ ಸಿಕ್ಕಿತು; ಪರಿಶುದ್ಧ ಪರಿಸರ-ಬದುಕಿನ ಹೋರಾಟ ಗೆದ್ದಿತು!

ಇತ್ತೀಚೆಗಷ್ಟೇ ಕಡಲತಡಿಯ ತದಡಿಗೆ ಬರಲು ರೆಡಿಯಾಗಿದ್ದ ಮತ್ತೊಂದು ಪ್ರಳಯಾಂತಕ ಥರ್ಮಲ್ ಪ್ರಾಜೆಕ್ಟ್‌ಗೆ ತಡೆಬಿದ್ದಿತ್ತು, ಹಾಗಂತ ಇದೇನೂ ಪರಿಸರ ಹೋರಾಟಕ್ಕೆ ಸಿಕ್ಕಿದ ಜಯವೇನಾಗಿರಲಿಲ್ಲ, ಮಾರ್ಗರೆಟ್ ಆಳ್ವ ಎಂಬ ಸೂಪರ್ ಲೇಡಿಗೆ ದಿಲ್ಲಿಯಲ್ಲಿದ್ದ ಪ್ರಭಾವದಿಂದ ಈ ಯೋಜನೆ ಸ್ಥಗಿತಗೊಂಡಿತ್ತು, ಸದ್ರಿ ತದಡಿ ಹೋರಾಟದಲ್ಲಿ ಡಬ್ಬಲ್ ಗೇಮ್ ಸಾಧು-ಸಂತರು, ರಾಜಕಾರಣ-ಪರಿಸರ ಪುಢಾರಿಗಳಿದ್ದರು. ಹೀಗಾಗಿ ಇದೊಂದು ಅಶುದ್ಧ ಪರಿಸರ ಪ್ರತಿಭಟನೆಯಾಗಿತ್ತು, ಇದೆಲ್ಲ ಗಮನಿಸಿದರೆ ಹಣಕೋಣದಿಂದ ಇಂಡ್ ಪವರ್ ಕಂಪನಿ ಪಲಾಯನ ಮಾಡಿರುವುದು ಪರಿಸರ ಹೋರಾಟಕ್ಕೆ ಸಿಕ್ಕಿರುವ ಪ್ರಪ್ರಥಮ ಜಯವೆಂದೇ ಜಿಲ್ಲೆಯಲ್ಲಿ ವ್ಯಾಖ್ಯಾನಿಸಲಾಗುತ್ತಿದೆ. ಕಲಬೆರಕೆ ಗ್ರೀನ್-ಸ್ಯಾಫ್ರಾನ್ ಅಜೆಂಡಾಗಳಿಲ್ಲದ ಹಚ್ಚ ಹಸಿರಿನ ಹೋರಾಟಕ್ಕೆಂದೂ ಸೋಲಿಲ್ಲವೆಂಬುದು ಹಣಕೋಣ ಹೋರಾಟದಿಂದ ಖಾತ್ರಿಯಾಗಿದೆ.

ಸುಳ್ಳುಬುರುಕರ ಚಿಡ್ಡಿ ಕಂಪನಿ

ಸುಳ್ಳು ಹೇಳುತ್ತಲೇ ಕಾರವಾರಕ್ಕೆ ಇಂಡ್ ಭಾರತ್ ಪವರ್ ಕಂಪನಿ ಕಾಲಿಟ್ಟಿತ್ತು, ಮಾತಾಡುವ ಬೊಂಬೆ ಖ್ಯಾತಿಯ ಬಿಜೆಪಿಯ ರಾಷ್ಟ್ರೀಯ ನಾಯಕ ವೆಂಕಯ್ಯ ನಾಯ್ಡುನ ಕೃಪಾಶೀರ್ವಾದದ ಕಂಪನಿಯಿದು. ನಾಯ್ಡು ಅಳಿಮಯ್ಯನ ಪಾಲುದಾರತ್ವ ಹಣಕೋಣ ಪ್ರಾಜೆಕ್ಟ್‌ನಲ್ಲಿತ್ತು, ಹಾಗಾಗಿ ಬಿಜೆಪಿ ಸರ್ಕಾರವೂ ಸುಳ್ಳು ಹೇಳುತ್ತಲೇ ಜನ ವಿರೋಧಿ ಯೋಜನೆಗೆ ಸಹಕಾರ-ಸಹಾಯ ಕೊಡುತ್ತಲೇ ಬಂದಿತ್ತು, ಸುಳ್ಳುಗಳೇ ತಿರುಗು ಬಾಣವಾಗಿ ತತ್ತರಿಸಿದ ಇಂಡ್ ಕಂಪನಿ ಈಗ ಓಡಿಹೋಗಿದೆ, ಆ ಮಾತು ಬೇರೆ.

ಮೊದಲು ಸ್ಟೀಲ್ ಪ್ಲಾಂಟ್ ಹಾಕುತ್ತೇವೆ. ಪರಿಸರ ಹಾಳು ಮಾಡೋದಿಲ್ಲ, ಉದ್ಯೋಗ ಕೊಡುತ್ತೇವೆ... ಎಂದೆಲ್ಲ ಸುಳ್ಳು-ಸುಳ್ಳೇ ಹೇಳಿದ ಕಂಪನಿ ಖದೀಮರು ರೈತರಿಂದ ಬರೋಬ್ಬರಿ 223 ಎಕರೆ ಭೂಮಿ ಖರೀದಿಸಿ ಯಾಮಾರಿಸಿದ್ದರು. ಕಂಪನಿಯ ಉದ್ದೇಶ ಮಾತ್ರ ಕಲ್ಲಿದ್ದಲು ಸುಟ್ಟು ಪರಿಸರಕ್ಕೆ ವಿಷವಿಕ್ಕಿ ವಿದ್ಯುತ್ ಉತ್ಪಾದಿಸುವುದಾಗಿತ್ತು, 1900 ಕೋಟಿ ರೂನಲ್ಲಿ 450 ಮೆಗಾವ್ಯಾಟ್ ಕರಂಟ್ ತಯಾರಿಸುವ ಪ್ಲ್ಯಾನ್ ಹಾಕಲಾಗಿತ್ತು, ನಾಯ್ಡು ಕಂಪನಿ ಕೇಂದ್ರ-ರಾಜ್ಯ ಸರ್ಕಾರಗಳಿಗೂ ಆರಂಭದಿಂದಲೇ ಸುಳ್ಳು-ತಪ್ಪು ಮಾಹಿತಿ-ಪ್ರಾಜೆಕ್ಟ್ ಕೊಡುತ್ತ ಬಂದಿತ್ತು, ಜಿಲ್ಲಾಡಳಿತ-ಸ್ಥಳೀಯ ಗ್ರಾಮ ಪಂಚಾಯ್ತಿಗಳೆಲ್ಲಾ ಆಂಧ್ರವಾಳ್ಳುಗಳಿಗೆ ಕಾಲು ಕಸದಂತಾಗಿತ್ತು, ದುಡ್ಡು-ಪಾಲಿಟಿಕ್ಸ್ ಲಾಬಿ ಅಷ್ಟು ಜೋರಾಗಿತ್ತು.

ಪ್ರಳಯಾಂತಕ ಪ್ರಾಜೆಕ್ಟ್

ಯಾವಾಗ ಇಂಡ್‌ನವರದು ಸ್ಟೀಲ್ ಪ್ಲಾಂಟ್ ಅಲ್ಲ; ಅದು ಪವರ್ ಪ್ರಾಜೆಕ್ಟಂತ ಗೊತ್ತಾಯ್ತೋ ಆಗ ಜನ ತಿರುಗಿಬಿದ್ದರು. ಪಕ್ಕದ ಗೋವಾ ಸರ್ಕಾರ ಸಹ ತನ್ನ ಕೋಟೆಗಾಂವ್ ವನ್ಯಧಾಮಕ್ಕೆ, ಜನರಿಗೆ ಈ ಥರ್ಮಲ್ ಯೋಜನೆಯಿಂದ ಗಂಡಾಂತರವೆಂದು ಕೇಂದ್ರ ಸರ್ಕಾರಕ್ಕೆ ಕಂಪ್ಲೇಂಟೂ ಕೊಟ್ಟಿತು. ಹಣಕೋಣದಲ್ಲೇನಾದರೂ ಈ ಮಾರಕ ಪ್ರಾಜೆಕ್ಟ್ ಶುರುವಾದರೆ ಕಾಳಿ ನದಿಯನ್ನೇ ನಂಬಿ ತಲತಲಾಂತರದಿಂದ ಬದುಕಿರುವ ಸುತ್ತಲಿನ ಹಲವು ಹಳ್ಳಿಗರ ಬದುಕೆಂಬುದು ನರಕವಾಗುತ್ತಿತ್ತು.

ವಿದ್ಯುತ್ ತಯಾರಿಸುವಾಗ ಹೊರಬರುವ ಹಾರು ಬೂದಿ, ಸ್ಥಾವರ ಬಳಸಿ ಬಿಡುವ ಕಲುಷಿತ ನೀರು ಕಾಳಿ ನದಿಯಲ್ಲಿನ ಮೀನು, ಜಲಚರ ನಾಶ ಮಾಡುತ್ತಿತ್ತು, ಮೀನುಗಾರರು ಅಕ್ಷರಶಃ ಬೀದಿ ಪಾಲಾಗುತ್ತಿದ್ದರು. ಜತೆಗೆ ಪಕ್ಕದ ಗೋವಾದ ಕಾಣಕೋಣ ಏರಿಯಾದ ಜನ ಜೀವನವೂ ಅಪಾಯಕ್ಕೀಡಾಗುತ್ತಿತ್ತು, ಸ್ಥಾವರ ಸೈಟ್ ಸಮುದ್ರದಿಂದ ಬರೀ ಹತ್ತೇ ಕಿ.ಮೀ. ದೂರದಲ್ಲಿರುವುದರಿಂದ ಸಮುದ್ರ ಮೀನುಗಾರಿಕೆಗೂ ಕುತ್ತಾಗಿತ್ತು, ಸ್ಥಾವರ ಸ್ಥಳದ ಬಳಿಯೇ ದಾಂಡೇಲಿ ಅಭಯಾರಣ್ಯ ಮತ್ತು ಅಣಶಿ ನ್ಯಾಷನಲ್ ಪಾರ್ಕ್ ಇದೆ. ಇದೆಲ್ಲ ಪ್ರಾಜೆಕ್ಟ್‌ಗೆ ಬಲಿಯಾಗುತ್ತಿತ್ತು, ವಿದ್ಯುತ್ ಲೈನ್‌ಗಾಗಿ ಮತ್ತೆ 305 ಹೆಕ್ಟೇರ್ ಅರಣ್ಯ ಆಹುತಿಯಾಗುತ್ತಿತ್ತು. ಜೀವ ವೈವಿಧ್ಯವಂತೂ ಸರ್ವನಾಶವಾಗುತ್ತಿತ್ತು.

ಸ್ಥಾವರ ಹಠಾವೋ

ಸ್ಥಾವರದಿಂದಾಗುವ ಅಪಾಯದ ಆತಂಕ ಸಹಜವಾಗೇ ಕಾರವಾರಿಗರನ್ನು ಕಂಗೆಡಿಸಿತು. ದಿಕ್ಕೆಟ್ಟ ಜನ ಸ್ಥಾವರ ಹಠಾವೋ ಆಂದೋಲನ ಆರಂಭಿಸಿದರು. ಜನಪರ ಕಳಕಳಿಯ ಸತೀಶ್ ಸೈಲ್, ಕೆ.ಆರ್. ದೇಸಾಯಿಯಂಥವರು ಹೋರಾಟದ ಮುಂದಾಳತ್ವ ವಹಿಸಿಕೊಂಡು ಜನರನ್ನು ಸಂಘಟಿಸಿದರು. ಕಳಂಕ, ಕಪಟವಿಲ್ಲದ ಸ್ಥಾವರ ವಿರೋಧಿ ಚಳವಳಿಯ ನಾಯಕರಿಂದ ಶಕ್ತಿಶಾಲಿ ಜನಪರ-ಪರಿಸರ ಚಳವಳಿ ರೂಪುಗೊಂಡಿತು. ಹರಾಮಿ ಮಂತ್ರಿ ಆನಂದ್ ಅಸ್ನೋಟಿಕರ್‌ನ ದಾದಾಗಿರಿಗೂ ಬಗ್ಗದೆ ಜನ ಸಿಡಿದು ನಿಂತರು. ಹಲವು ಹಂತಗಳಲ್ಲಿ ಜನಾಂದೋಲನ ಕಾನೂನು ಹೋರಾಟ ಮಾಡಲಾರಂಭಿಸಿದರು.

ಜನರ ಭಾವನೆಗಳಿಗೆ ಸ್ಥಳೀಯ ಶಾಸಕ ಕಂ ಸಚಿವ ಆನಂದ್ ಅಸ್ನೋಟಿಕರ್, ಜಿಲ್ಲಾ ಮಂತ್ರಿ ಕಾಗೇರಿ ಮಾಣಿ, ಸಂಸದ ಅನಂತ್ಮಾಣಿ ಇತ್ಯಾದಿ ಅಧಿಕಾರಸ್ಥರು ಕವಡೆ ಕಿಮ್ಮತ್ತು ಕೊಡಲಿಲ್ಲ, ಬದಲಿಗೆ ಇಂಡ್ ಪವರ್ ಕಂಪನಿಯ ಬಂಡವಾಳಶಾಹಿಗಳೊಂದಿಗೆ ಒಳಗೊಳಗೆ ಚೌಕಾಸಿ ವ್ಯವಹಾರ ಕುದುರಿಸಿ ಸಂಚು ಮಾಡತೊಡಗಿದರು. ಓಟು ಕೊಟ್ಟವರ ಮರೆತು ನೋಟು ಕೊಡುವವರ ಗುಲಾಮರಾಗಿ ಹೋದರು. ಈ ಕೃತಘ್ನರು ಹೊರಗಿನ ಹಣವಂತರ ಎಂಜಲು ಕಾಸಿಗೆ ನಾಲಿಗೆಯೊಡ್ಡುತ್ತ ತಮ್ಮವರ ಮಾರಣ ಹೋಮಕ್ಕೆ ಕಂಕಣಬದ್ಧರಾಗಿ ನಿಂತರು! ಚುನಾವಣೆಯಲ್ಲಿ ಗೆಲ್ಲುವತನಕ ಥರ್ಮಲ್ ಪ್ರಾಜೆಕ್ಟ್ ವಿರುದ್ಧ ಬೊಗಳುತ್ತಿದ್ದ ಸಂಸದ ಅನಂತ್ಮಾಣಿ, ಮಂತ್ರಿ ಆನಂದ್ ಅಧಿಕಾರ ಸಿಗುತ್ತಿದ್ದಂತೆಯೇ ಜನದ್ರೋಹಿಗಳಾಗಿ ಹೋದರು.

ಪ್ರಭುತ್ವದ ಪಾತಕ

ಯಾವಾಗ ಈ ಸಂಸದ-ಸಚಿವರ ಸೋಗಲಾಡಿತನ ಬಯಲಾಯ್ತೋ ಆಗ ಸ್ಥಾವರ ವಿರೋಧಿಗಳ ಪ್ರತಿಭಟನೆಗೂ ಕಾವೇರಿತು! ಇದಕ್ಕೆ ಸಮಾನಾಂತರವಾಗಿ ಇಂಡ್ ಕಂಪನಿ ಜಿಲ್ಲಾಡಳಿತದ ಸಹಕಾರದೊಂದಿಗೆ ಕಾನೂನುಬಾಹಿರವಾಗಿ ಸ್ಥಾವರ ಕಾಮಗಾರಿಯನ್ನು ತರಾತುರಿಯಲ್ಲಿ ಮಾಡತೊಡಗಿತು. ಹಣಕೋಣದಲ್ಲಿ ಹುಕ್ ಆರ್ ಕುಕ್ ಉಷ್ಣ ಸ್ಥಾವರ ಸ್ಥಾಪಿಸುವ ಹಠಕ್ಕೆ ಯಡ್ಡಿ ಸರ್ಕಾರ ಬಿದ್ದಿತ್ತು. ಸ್ಥಳೀಯ ನಿಷ್ಪಾಪಿಗಳನ್ನು ನುಂಗಿ ನೊಣೆದಾದರೂ ಬಿಗ್ ಬಾಸ್ ವೆಂಕಯ್ಯ ನಾಯ್ಡುನ ಸಂಪ್ರೀತಗೊಳಿಸಲು ಯಡ್ಡಿ ಅದೆಂದೋ ತೀರ್ಮಾನಿಸಿ ಆಗಿತ್ತು, ಸಚಿವ-ಶಾಸಕ-ಸಂಸದ ಮತ್ತು ಸೋಕಾಲ್ಡ್ ಪರಿಸರವಾದಿಗಳನ್ನು ಮ್ಯಾನೇಜ್ ಮಾಡಿದ್ದ ಯಡ್ಡಿ-ನಾಯ್ಡು ಪಟಾಲಮ್ ಹಠ ಮಾಡುವ ಆಂದೋಲನಕಾರರ ಮೇಲೆ ಪೊಲೀಸ್ ಫೋರ್ಸ್ ಛೂ ಬಿಟ್ಟು ಇಂಡ್ ಕಂಪನಿಗೆ ದಾರಿ ಸುಗಮ ಮಾಡಿಕೊಡುವ ಸ್ಕೆಚ್ ಹಾಕಿತ್ತು.


ಪಶ್ಚಿಮ ಘಟ್ಟದ ಪರಿಸರ ರಕ್ಷಣೆಯ ಗುತ್ತಿಗೆ ಹಿಡಿದಂತೆ ಹಾರಾಡುವ ಢೋಂಗಿ ಅನಂತ್ ಹೆಗಡೆ ಆಶೀಸರನ ಪರಿಸರ ಟಾಸ್ಕ್‌ಫೋರ್ಸ್ ಎಂಬ ಗೂಟದ ಕಾರಿನ ಆಮಿಷ ಬಾಯಿ ಬಂದ್ ಮಾಡಿಸಿತ್ತು, ವರಮಾನಕ್ಕಾಗಿ ಗೋಕರ್ಣ ದೇವಾಲಯ ಕಬಳಿಸಿದ್ದ ರಾಘವೇಶ್ವರ ಸ್ವಾಮೀಗೆ ಯಡ್ಡಿ ಸರ್ಕಾರದ ವಿರುದ್ಧ ಪರಿಸರ ಮುಖವಾಡ ತೊಟ್ಟು ಮಾತಾಡುವ ನೈತಿಕ ತಾಕತ್ತೇ ಇರಲಿಲ್ಲ, ಪಾಪ! ಸ್ವರ್ಣವಲ್ಲಿ ಸ್ವಾಮಿಗೆ ಹಣಕೋಣ-ಕಾರವಾರ ಏರಿಯಾದಲ್ಲಿ ಸ್ವಜಾತಿ ಹೈಗರು ಇಲ್ಲದಿರುವುದು 'ತಟಸ್ಥ' ಗೊಳಿಸಿತ್ತು, ಇದರ ಹಿಂದೆ ಜಿಲ್ಲಾ ಮಂತ್ರಿ ಕಾಗೇರಿಯ ಕುರ್ಚಿ ಕಾಳಜಿಯೂ ಅಡಗಿತ್ತು, ಸ್ವಪಕ್ಷದ ರಾಷ್ಟ್ರೀಯ ಮಾಂಡಲೀಕ ವೆಂಕಯ್ಯ ನಾಯ್ಡುನಂಥ ದೊಡ್ಡವರ ಹುಸಾಬರಿಗೆಲ್ಲ ಹೋಗುವ ಪೈಕಿಯಲ್ಲ ಪೊಕ್ಕು ಕಾಗೇರಿ. ಮಂತ್ರಿಗಿರಿ ಕಾಪಾಡಿ ಕೊಳ್ಳುವುದೇ ಆತನಿಗೆ ದೊಡ್ಡ ಜನಪರ ಕಳಕಳಿಯಂತಾಗಿ ಹೋಗಿದೆ!

ಜೂನಿಯರ್ ಮಂತ್ರಿ ಆನಂದ್ ಅಸ್ನೋಟಿಕರ್‌ಗೆ ಇಂಡ್ ಕಂಪನಿ ಬರೋಬ್ಬರಿ 25 ಕೋಟಿ ಬಕ್ಷೀಸು ಕೊಟ್ಟಿತ್ತು, ಈ ಕಾಸನ್ನು ಆತ ಅದಿರು ಹಡಗಿಗೆ ತುಂಬಲು ಬೇಕಾದ ಬಾರ್ಜ್ ಕಟ್ಟಲು ಗುಜರಾತಿಗೆ ಕಳಿಸಿದ ಸುದ್ದಿ ಇವತ್ತಿಗೂ ಕಾರವಾರದಲ್ಲಿದೆ. ಮೊದಮೊದಲು ಉಷ್ಣ ಸ್ಥಾವರದ ವಿರುದ್ಧ ವೀರಾವೇಶದ ಮಾತಾಡುತ್ತಿದ್ದ ಸಂಸದ

ಮ್ಮಣಿ ಇದ್ದಕ್ಕಿದ್ದಂತೆ ಥಂಡ್ ಆಗಿದ್ದರ ಹಿಂದೆ ಗಣ ಮಹಿಮೆ ಅಡಗಿದೆ ಎಂದು ಜಿಲ್ಲೆಯಲ್ಲಿ ನಡೆದಿದೆ.

ಬದುಕಿನ ಹೋರಾಟ

ಕಲಿ ಹಾರಾಟಗಾರರನ್ನು ಖರೀದಿಸಿದ್ದ ಕಂಪನಿ ಮತ್ತು ಪ್ರಭೃತಿಗಳಿಗೆ ಆತಂಕಿತರ ಅನುಮಾನಗಳಿಗೆ ಸಮರ್ಥಕ ಉತ್ತರ ಕೊಡಲಾಗಲೀ ಇಲ್ಲ; ಥರ್ಮಲ್ ನ ವಿರುದ್ಧ ಸಿಡಿದೆದ್ದ ಜನರ ಧ್ವನಿ ಹತ್ತಿಕ್ಕಲು ದಿಂದ ಸಾಧ್ಯವಾಗಲಿಲ್ಲ. ಸರ್ಕಾರಿ ಪಂಡಿತರ ಕಳ್ಳಾಟ ಾದಂತೆ ಚಳವಳಿಯೂ ಚುರುಕಾಯ್ತು. ಾಟಗಾರರು ಯಾವುದೇ ಬೆದರಿಕೆ-ಪ್ರಲೋಭನೆಗೆ ಾಗದೆ ಎಚ್ಚರಿಕೆಯಿಂದ ಹೆಜ್ಜೆ ಹಾಕತೊಡಗಿದರು.



ೀಯ ಪ್ರತಿರೋಧ ಧಿಕ್ಕರಿಸಿದ ಆಂಧ್ರದ ಇಂಡ್ ಪವರ್ ಕಂಪನಿ 14.11.2007 ರಂದು ರಾಜ್ಯ ಪರವಾನಗಿ ಪಡೆದುಕೊಂಡು ವಕ್ಕರಿಸಿತು. ಹಿಂದೆ-ಮುಂದೆ ನೋಡದೆ ಭೂಖರೀದಿ, ರಿ ಕಾರ್ಯಾಚರಣೆ ಶುರು ಹಚ್ಚಿಕೊಂಡಿತು. ಘರದ ಅನಾಚಾರ- ಅವಾಂತರಗಳ ಅರಿವಿದ್ದ ಕೇಳಿದ ಪ್ರಶ್ನೆಗಳಿಗೆ ಕಂಪನಿಯ ಕೊಳಕರು ಮತ್ತು ಧೂರ್ತರು ಅಧಿಕಪ್ರಸಂಗಿ ಜವಾಬು-ಸವಾಲು ಡಗಿದರು.

ಲೀಸರನ್ನು ಬಗಲಲ್ಲಿಟ್ಟುಕೊಂಡಿದ್ದ ಕಂಪನಿ ರ ದಾದಾಗಿರಿ ಹೆಚ್ಚಾದಾಗ ಕೆರಳಿದ ಜನರು ಳಿಯುವುದು ಅನಿವಾರ್ಯವಾಯ್ತು. ಜನರ ೀಧ ಹೆಚ್ಚಾದಾಗ ಜಿಲ್ಲಾಡಳಿತ ಗತಿಯಿಲ್ಲದೆ 08 ರಂದು ಸಾರ್ವಜನಿಕ ಅಹವಾಲು ಸಭೆ . ದಶದಿಕ್ಕಿನಿಂದಲೂ ವಿರೋಧವೇ ಅಪ್ಪಳಿಸಿತು. ಪೂರ್ಣಪ್ರಮಾಣದ ಒಪ್ಪಿಗೆ ಕೊಡುವವರೆಗೆ ರಿ ಮಾಡದಂತೆ ಕಂಪನಿಗೆ ಜಿಲ್ಲಾಡಳಿತ ತಾಕೀತು ೀಕಾಗಿ ಬಂತು. ಆದರೆ ಈ ನೋಟೀಸಿಗೆ ್ ಇನ್‌ಫ್ಲೂಯೆನ್ಸ್ ಹೊಂದಿರುವ ಕಂಪನಿ ಕೇರ್ ಮಾಡಲಿಲ್ಲ. ಸಿಟ್ಟಿಗೆದ್ದ ಸ್ಥಳೀಯರು ು ಶೆಡ್, ಸ್ಥಾವರ, ಸಾಮಾನುಗಳನ್ನು ತೆರವು ವಂತೆ ಹಠ ಹಿಡಿದರು; ಗ್ರಾಮ ಪಂಚಾಯ್ತಿಯ ಷನ್ ಇಲ್ಲದ ಈ ಕೆಲಸ-ಕಾಮಗಾರಿ ಕಾನೂನು ದೆಂದು ವಾದಿಸತೊಡಗಿದರು. ಧರಣಿ-ಸತ್ಯಾಗ್ರಹ ಾಗಿ ನಡೆಯಿತು.

ರ ಪರ-ವಿರುದ್ಧ ಸಂಘರ್ಷ ಕಳೆದ ಜುಲೈನಲ್ಲಿ ತಲುಪಿತ್ತು. ಯಡ್ಡಿಯ ಚೆಡ್ಡಿ ಸರ್ಕಾರ, ಅಡ್ನಾಡಿ ಅಸ್ನೋಟಿಕರ್, ಹೊಣೆಗೇಡಿ ಜಿಲ್ಲಾಡಳಿತದ ಗಳು ರಕ್ಕಸ ಸ್ಥಾವರದ ಪರ ವಹಿಸಿದರೆ, ಕಾರವಾರಕ್ಕೆ ವೇ ತಿರುಗಿಬಿದ್ದಿತ್ತು. 2009 ರ ಜುಲೈ 17 ಹೆದ್ದಾರಿ ತಡೆ ನಡೆಯಿತು. ಆ ಪ್ರತಿಭಟನಾ ರವಾರದ ಸುತ್ತಲಿನ ಹಳ್ಳಿಗರು ಕಿತ್ತೆದ್ದು ಬಂದಿದ್ದರು. ತರದಿಂದ ಕಟ್ಟಿಕೊಂಡಿದ್ದ ಬದುಕು ಭಸ್ಮವಾಗುವ ದ ಹೆಂಗಸರೇ ಹೆಚ್ಚು ಜಮಾಯಿಸಿದ್ದರು. ಆಗಲ್ಲಿ ರ ಆನಂದ ಅಸ್ನೋಟಿಕರ್ ವಿರುದ್ಧ ಧಿಕ್ಕಾರ ು, ಇದು ಹಸೀ ಹುಂಬ ಅಸ್ನೋಟಿಕರನ ಕೆರಳಿಸಿತು. "ಸ್ಥಾವರ ವಿರೋಧಿ ಹೋರಾಟ ಾಡಿಗೆ ಮಂದಿ... ನಿಜ ಮೀನುಗಾರರ ವಿರೋಧ ಲ್ಲ" ಎಂದು ಆನಂದ್ ಹೇಳಿದ್ದು ಜನರನ್ನು ಕೆರಳಿಸಿತು. ಆಗ ಕಂಗಾಲಾದ ಆನಂದ್ ಟದ ಮುಂಚೂಣಿಯಲ್ಲಿದ್ದವರನ್ನು ಹಣಿದು ೀರಿಸಿಕೊಳ್ಳಲು ಪೊಂಚುಹಾಕಿ ಕುಳಿತುಬಿಟ್ಟ!

ರಕ್ತದ ಕಲೆ

ಂಡಾ ಗುಣಧರ್ಮದ ಆನಂದ್ ಅಸ್ನೋಟಿಕರ್‌ನ ಂದಿಗೆ ಥರ್ಮಲ್ ವಿರೋಧಿ ಹೋರಾಟಕ್ಕೆ ಅಂಟಿಕೊಂಡುಬಿಟ್ಟಿತು. ಜುಲೈ 30 ರಂದು ಹಣಕೋಣ ಯೋಜನಾ ಪ್ರದೇಶದಲ್ಲಿ ಪ್ರತಿಭಟನೆ ನಡೆಸುತ್ತಿದ್ದವರ ಮೇಲೆ ವಿನಾಕಾರಣ ಪೊಲೀಸರು ಮುಗಿಬಿದ್ದು ಹೇಯ-ಬರ್ಬರ-ಅಮಾನುಷ ಹಿಂಸಾಕಾಂಡ ನಡೆಸಿದರು. ಯದ್ವಾತದ್ವಾ ಲಾಠಿ ಬೀಸಿ ರಕ್ತ ಹರಿಸಿದರು. ಶೆಲ್ ಸಹ ಸಿಡಿಸಿ ಸತಾಯಿಸಿದರು. ಮನುಷ್ಯತ್ವ, ಶಿಷ್ಟಾಚಾರ, ಕಾನೂನು ಕಡೆಗಣಿಸಿ ಹೆಂಗಸರನ್ನು ಅಟ್ಟಾಡಿಸಿ ಬಡಿದರು; ವಿಕೃತರಂತೆ ಮೈ-ಕೈ ಎಳೆದಾಡಿದರು. ಮಕ್ಕಳು-ಮುದುಕರನ್ನೆದೆ ಥಳಿಸಿ ಕೇಕೆ ಹಾಕಿದರು. ಪೊಲೀಸ್ ವ್ಯಾನು-ಲಾಕಪ್ಪಿನಲ್ಲಿ ಹೆಂಗಸರ ಕೂಡಿ ಹಾಕಿ ಹೊಡೆದು ನೆತ್ತರು ಹರಿಸಿದರು. ದೊಡ್ಡ ದುರಂತವೆಂದರೆ, ಪೊಲೀಸರೇ ಕಲ್ಲುಬಡಿಗೆ ಜನರ ಮೇಲೆ ಬೀಸಿ ಗೂಂಡಾಗಳಂತಾಡಿದರು.

ಜುಲೈ 30 ರ ದುರ್ಘಟನೆಯಲ್ಲಿ 31 ಗಂಡಸರು ಮತ್ತು 17 ಹೆಂಗಸರನ್ನು ಬಳ್ಳಾರಿ ಕಾರಾಗೃಹಕ್ಕೆ ತಳ್ಳಲಾಗಿತ್ತು. ಪೊಲೀಸ್ ಪಾತಕದಲ್ಲಿ ಗಂಭೀರವಾಗಿ ಗಾಯಗೊಂಡಿದ್ದ ಈ ಜನರನ್ನು ಆಸ್ಪತ್ರೆಗೆ ಸೇರಿಸುವ ಬದಲು ಜೈಲಲ್ಲಿಟ್ಟು ಪೀಡಿಸಿದ್ದು ಘೋರವಾಗಿತ್ತು. ಹಣಕೋಣದ ಸುತ್ತಲಿನ ಹಳ್ಳಿಗಳಲ್ಲಿ ಈ ಪಾಪಿ ಪೊಲೀಸರು ತಿಂಗಳುಗಟ್ಟಲೆ ಭಯೋತ್ಪಾದನೆ ನಡೆಸಿದ್ದರು. ರಾತ್ರಿ-ಹಗಲೆನ್ನದೆ ಕಂಡಕಂಡವರ ಮನೆಗೆ ನುಗ್ಗಿ ಸಿಕ್ಕಸಿಕ್ಕವರನ್ನು ಠಾಣೆಗೆ ತಂದು ರಿಪೇರಿ ಮಾಡಿದ್ದರು. ಜನರು ಅನುಭವಿಸಿದ ಚಿತ್ರಹಿಂಸೆ ಹೇಳತೀರದು.

ಹೀಗೆ ಕಾಡಿದರೆ-ನೆತ್ತರು ಹರಿಸಿದರೆ ಹೋರಾಟ ಮುರಿಯಬಹುದೆಂಬ ದುರಾಲೋಚನೆ ಸರ್ಕಾರಿ ಅಧಿಪತಿಗಳದಾಗಿತ್ತು. ಪ್ರಭುಗಳ ಮನದಿಚ್ಛೆಯಂತೆಯೇ ಪೊಲೀಸರು ಪಾತಕದ ಸ್ಕೆಚ್ ಹಾಕಿಕೊಂಡು ಹಿಂಸಿಸಿದರು. ಸ್ಥಳೀಯ ಪಾಳೇಗಾರ ಆನಂದ್ ಅಸ್ನೋಟಿಕರ್‌ಗೆ ತನ್ನ ಪ್ರತಿಸ್ಪರ್ಧಿಗಳ ಹುಟ್ಟಡಗಿಸುವ ಜರೂರತ್ತಾದರೆ, ಸಿಎಂ ಯಡ್ಡಿಗೆ ಬಾಸ್ ವೆಂಕಯ್ಯ ನಾಯ್ಡುನ ಶಹಬ್ಬಾಸ್‌ಗಿರಿ ಪಡುವ ತೆವಲಾಗಿತ್ತು!

ಅನಿವಾರ್ಯವಾಯ್ತು ಪಲಾಯನ

ಯಾವಾಗ ಮುಗ್ಧ ಮಹಿಳೆಯರು-ಮುದುಕರು ಮತ್ತು ಮಕ್ಕಳಿಗೆಲ್ಲ ಪೊಲೀಸರಿಂದ ಆಳುವ ಖೂಳರು ಹೊಡೆಸಿ ರಕ್ತ ಹರಿಸಿದರೋ ಅಂದೇ ಕಾರವಾರದ ಜನರು ಇಂಡ್ ಪವರ್ ಕಂಪನಿಯನ್ನು ಓಡಿಸಿದ ಹೊರತೂ ವಿಶ್ರಮಿಸುವುದಿಲ್ಲವೆಂದು ಶಪಥ ತೊಟ್ಟಿದ್ದರು. ರಾಷ್ಟ್ರೀಯ ಪರಿಸರ ಮೇಲ್ಮನವಿ ಪ್ರಾಧಿಕಾರದಿಂದ ಯೋಜನೆಗೆ ತಡೆಯಾಜ್ಞೆಯನ್ನು ಹೋರಾಟಗಾರರು ತಂದರು. ಡಿಸಿ ಆಫೀಸ್ ಎದುರು ಪೊಲೀಸ್ ಪಾತಕದ ವಿರುದ್ಧ ಸತತ ಧರಣಿ-ಸತ್ಯಾಗ್ರಹ ನಡೆಯಿತು. ಮಂತ್ರಿ ಅಸ್ನೋಟಿಕರ್ ಮತ್ತು ಯಡ್ಡಿ ಸರ್ಕಾರಕ್ಕೆ ಜನ "ಛೀ... ಥೂ...." ಎಂದು ದಿನವೂ ಉಗಿಯಲಾರಂಭಿಸಿದರು.

ರೈತ-ಬೆಸ್ತರ ಉಗ್ರ ಆಂದೋಲನ-ಕಾನೂನು ದಾಳಿಯಿಂದ ಪವರ್ ಕಂಪನಿ ಕಂಗಾಲಾಗಿ ಹೋಯ್ತು; ಕಾರವಾರದಲ್ಲಿನ್ನು ತಮಗೆ ಉಳಿಗಾಲವಿಲ್ಲವೆಂಬುದು ಆಂಧ್ರವಾಳ್ಳುಗಳಿಗೆ ಖಾತ್ರಿಯಾಗಿ ಹೋಯ್ತು! ತಮಿಳು ನಾಡಿನ ಟುಟಿಕೋರಿನ್‌ಗೆ ಸದ್ರಿ ಪ್ರಾಜೆಕ್ಟ್ ಸ್ಥಳಾಂತರಿಸಲು ಕಂಪನಿ ನಿರ್ಧರಿಸುವಂಥ ಒತ್ತಡ ಏರ್ಪಟ್ಟಿತು. "ಅನಿರೀಕ್ಷಿತ ರಾಜಕೀಯ ಮತ್ತು ಪರಿಸರ ಕಾರಣದಿಂದ ಕಾರವಾರದಲ್ಲಿ ಥರ್ಮಲ್ ಪ್ರಾಜೆಕ್ಟ್ ಮಾಡಲು ಸಾಧ್ಯವಿಲ್ಲ... ಹಾಗಾಗಿ ಪರವಾನಗಿ ರದ್ದುಪಡಿಸಿ...." ಎಂದು ಇಂಡ್ ಕಂಪನಿ ಕೇಂದ್ರ ಪರಿಸರ ಮತ್ತು ಅರಣ್ಯ ಮಂತ್ರಾಲಯಕ್ಕೆ ಜನವರಿ 1 ರಂದು ಪತ್ರ ಬರೆಯಿತು. ಮರುದಿನ ಕಂಪನಿಯ ಕಾರ್ಯಕಾರಿಣಿ ನಿರ್ದೇಶಕ ವಾಸುರಾವ್ ಸ್ಥಾವರ ವಿರೋಧಿ ಹೋರಾಟ ಸಮಿತಿಯ ಮುಖಂಡರನ್ನು ಭೇಟಿಯಾಗಿ "ವಿದಾಯ"ವೂ ಹೇಳಿದರು. ಎರಡೂ ಕಡೆಯವರು ಜಿಲ್ಲಾಧಿಕಾರಿಗೆ ಪ್ರಾಜೆಕ್ಟ್ ಕೈಬಿಟ್ಟ ಬಗ್ಗೆ ತಿಳಿವಳಿಕೆ ಪತ್ರವೂ ಕೊಟ್ಟಿದ್ದಾರೆ.

ಅಲ್ಲಿಗೆ ಹಣಕೋಣ-ಕಾರವಾರದ ಮಂದಿಯ ಪರಿಶುದ್ಧ ಪರಿಸರ ಹೋರಾಟಕ್ಕೆ ಜಯಲಭಿಸಿದಂತಾಗಿದೆ; ಒಗ್ಗಟ್ಟು-ಜನ ಶಕ್ತಿಯ ಮುಂದೆ ಪ್ರಭುತ್ವದ ಮೋಸದಾಟ ನಡೆಯದೆಂಬುದು ಸಾಬೀತಾಗಿದೆ. ಅಷ್ಟೇ ಅಲ್ಲ, ಢೋಂಗಿ ಪರಿಸರವಾದಿಗಳು-ಸ್ವಾರ್ಥಿ ಸ್ವಾಮಿಗಳ ಸೋಂಕಿಲ್ಲದ ಪರಿಸರ ಪರ ಪ್ರತಿಭಟನೆಗೆಂದೂ ಸೋಲಾಗುವುದಿಲ್ಲ ಎಂಬ ಸಂದೇಶವನ್ನು "ಹಣಕೋಣ ಹೋರಾಟ" ಇಡೀ ನಾಡಿಗೆ ಸಾರಿದೆ!


● ನಹುಶ



ಧಾರವಾಡ: ಮುರುಘಾಮಠಕ್ಕೆ ಮುಳುಗುಂದ ಸ್ವಾಮಿ ಫೈನಲ್!

ಅಂತೂಇಂತೂ ಮುರುಘಾಮಠಕ್ಕೆ ಪೀಠಾಧಿಕಾರಿಯ ನಿಗದಿಯಾಗಿದೆ. ಮುಳುಗುಂದ ಗವಿಮಠದ ಮಲ್ಲಿಕಾರ್ಜುನ ಮಹಾಸ್ವಾಮಿ ಇದೇ 20 ರಂದು ಮುರುಘಾಮಠದ ಪೀಠ ಏರಲಿದ್ದಾರೆ.

ಕುತಂತ್ರದಿಂದ ಪೀಠ ಗಿಟ್ಟಿಸಿಕೊಂಡು, 21 ವರ್ಷಗಳಲ್ಲಿ ಮಠದ ಮುಕ್ಕಾಲು ಆಸ್ತಿಯನ್ನು ಮಾರಿಕೊಂಡು, ಮಠದೊಳಗೇ ಮಂಚದಾಟವಾಡಿದ ಡಬಲ್ ಇಂಜಿನ್ ಶಿವಯೋಗಿಸ್ವಾಮಿ ಮಠ ಬಿಟ್ಟು ಓಡಿದ ನಂತರ, ಹೊಸ ಪೀಠಾಧ್ಯಕ್ಷರು ಎಂತಹವರು ಬರುತ್ತಾರೋ ಎಂದು ಚಿಂತೆಗೀಡಾಗಿದ್ದ ಭಕ್ತ ಸಮೂಹಕ್ಕೆ ಕೊನೆಗೂ ನೆಮ್ಮದಿ ಸಿಕ್ಕಿದೆ. ಸಚ್ಚಾರಿತ್ರ್ಯದ ಮಲ್ಲಿಕಾರ್ಜುನ ಸ್ವಾಮಿ ಮಠವನ್ನು ಮತ್ತೆ ಟ್ರ್ಯಾಕಿಗೆ ತರುವ ಗುರಿಯಿಟ್ಟುಕೊಂಡೇ ಪೀಠ ಏರಲು ರೆಡಿಯಾಗಿದ್ದಾರೆ.



ಮಲ್ಲಿಕಾರ್ಜುನ ಮಹಾಸ್ವಾಮಿ

ಭಾವೈಕ್ಯತೆ, ಸೌಹಾರ್ದ ಪರಂಪರೆಯ ಸಾಕಾರಮೂರ್ತಿಯಂತಿದ್ದ ಶ್ರೀಮೃತ್ಯುಂಜಯ ಮತ್ತು ಮಹಾಂತ ಅಪ್ಪಗಳ ಜನಪರ ನಿಲುವಿನಿಂದಾಗಿ ಮುರುಘಾಮಠ ಸರ್ವಜಾತಿಯ ಜನರ ತೋಟವಾಗಿತ್ತು. ಆದರೆ ಈ 21 ವರ್ಷಗಳಲ್ಲಿ ಮಾಡಬಾರದ್ದನ್ನೆಲ್ಲ ಮಾಡಿದ ಶಿವಯೋಗಿ ಸ್ವಾಮಿ ಮಠವನ್ನು ಅಧೋಗತಿಗಿಳಿಸಿಬಿಟ್ಟಿದ್ದ. ಧಾರವಾಡದ ಮಾಜಿ ಶಾಸಕ ವಿನಯ ಕುಲಕರ್ಣಿ ಸೇರಿದಂತೆ ಮಠದ ಹಿಂದಿನ ಭಕ್ತರು ಶಿವಯೋಗಿ ಸ್ವಾಮಿಯ ಒಂದೊಂದೇ ಅಧ್ವಾನಗಳನ್ನು ಬಯಲಿಗೆಳೆಯತೊಡಗಿದಾಗಲೇ, ಶಿವಯೋಗಿ ಸ್ವಾಮಿ ಮಠ ಬಿಟ್ಟು ಓಡಲಿದ್ದಾನೆ ಎಂದು 'ಲಂಕೇಶ್' ಮೊದಲೇ ಬರೆದಿತ್ತು. ಹಿಂದಿನ ಹಿರಿಯ ಸ್ವಾಮೀಜಿ ಮಹಾಂತ ಅಪ್ಪ ಅವರ ಇಚ್ಛೆಯಂತೆ ಮುಳುಗುಂದ ಮಲ್ಲಿಕಾರ್ಜುನ ಸ್ವಾಮಿಯೇ ಪೀಠಾಧೀಶರಾಗಬೇಕು ಎಂದೂ ಪತ್ರಿಕೆ ಬರೆದಿತ್ತು. ಹಲವಾರು ಆತಂಕಗಳ ನಂತರ ಕೊನೆಗೂ ಮಲ್ಲಿಕಾರ್ಜುನ ಸ್ವಾಮಿಗೆ ಮಠದ ಪೀಠ ಒಲಿದಿದೆ.



ವಿನಯ ಕುಲಕರ್ಣಿ

ಮಲ್ಲಿಕಾರ್ಜುನ ಸ್ವಾಮಿಗಳೇ ಮುಂದಿನ ಪೀಠಾಧೀಶರೆಂದು ಹಿಂದಿನ ಗೌರವಾನ್ವಿತ ಸ್ವಾಮೀಜಿ ಮಹಾಂತಪ್ಪಗಳು ನಿರ್ಧರಿಸಿ 4.3.1983 ರಂದು ಪತ್ರ ಬರೆದು ಈ ವಿಷಯವನ್ನು ಚಿತ್ರದುರ್ಗದ ಕೇಂದ್ರ ಮಠದ ಮಲ್ಲಿಕಾರ್ಜುನ ಮುರುಘ ರಾಜೇಂದ್ರರಿಗೆ ತಿಳಿಸಿದ್ದರು. "ಈಗ ನಮಗೆ ವೃದ್ಧಾಪ್ಯ ಬಂದಿದೆ. ಸಕಲ ಕಾರ್ಯಗಳನ್ನು ನಿಭಾಯಿಸಲು ತೊಂದರೆಯಾಗುತ್ತಿದೆ. ನಮ್ಮ ತರುವಾಯ ಉತ್ತರಾಧಿಕಾರಿಯಾಗಿ ಕೆರೂರ ಕನಕೇರಿ ಮಠದ ಶಿವಸಂಗಯ್ಯ ಹಾಗೂ ರಾಜಮ್ಮನವರ ನಾಲ್ಕನೇ ಮಗನಾದ ಮಲ್ಲಿಕಾರ್ಜುನಯ್ಯರವರನ್ನು ನೇಮಕ ಮಾಡಬೇಕು. ಪೀಠ ಮುನ್ನಡೆಸಿಕೊಂಡು ಹೋಗುವ ಚಾಣಾಕ್ಷತೆ ಅವರಲ್ಲಿದೆ" ಎಂದು ಮಹಾಂತಪ್ಪ ಸ್ವಾಮಿಗಳು ನಿವೇದಿಸಿಕೊಂಡಿದ್ದರು. ಅವರ ಬಯಕೆಯಂತೆ ಇನ್ನೇನು ಮಲ್ಲಿಕಾರ್ಜುನ ಸ್ವಾಮಿಗಳ ಪೀಠಾರೋಹಣ ನಡೆಯಬೇಕು ಎನ್ನುವಷ್ಟರಲ್ಲಿ ಶಿವಯೋಗಿ ಸ್ವಾಮಿ ತನ್ನ ಕುತಂತ್ರ ಬುದ್ಧಿ ತೋರಿಸಿಬಿಟ್ಟಿದ್ದ. ಚಿತ್ರದುರ್ಗದ ಸ್ವಾಮಿಗಳ ಮೂಲಕ ಒತ್ತಡ ತಂದ ಶಿವಯೋಗಿ ಮಹಾಂತಪ್ಪ ಸ್ವಾಮಿಗಳನ್ನೂ ದಾರಿ ತಪ್ಪಿಸಿ ಪೀಠವೇರಿದ. ತನ್ನ ಸ್ವಂತ ಅಣ್ಣನ ಮಗನಾದ ಶಿವಯೋಗಿಯನ್ನು ಪೀಠಾಧಿಪತಿ ಮಾಡಿ ಭಾರಿ ತಪ್ಪನ್ನೇ ಮಾಡಿದ್ದರು ಮಹಾಂತಪ್ಪಗಳು. ಮಹಾಂತಪ್ಪಗಳ ಇಚ್ಛೆಯಂತೆ ಮಲ್ಲಿಕಾರ್ಜುನಸ್ವಾಮಿ ಮುಳಗುಂದದ ಗವಿಮಠ ನೋಡಿಕೊಳ್ಳತೊಡಗಿದರು.

ಶಿವಯೋಗಿಯ ಅಂಧಾದುಂಧಿಯಿಂದ ಬೇಸತ್ತ ಭಕ್ತರು ಆತನನ್ನು ಸೆಪ್ಟೆಂಬರ್‌ನಲ್ಲಿ ಮಠದಿಂದ ಓಡಿಸಿದ ಮೇಲೆ ಚಿತ್ರದುರ್ಗದ ಮುರುಘ ಶರಣರು ಗುರುಮಿಟಕಲ್ಲಿನ ಶಾಖಾಮಠದ ಸ್ವಾಮಿಯೊಬ್ಬರನ್ನು ಮುರುಘಾಮಠದ ಪೀಠದಲ್ಲಿ ಕೂಡ್ರಿಸಿದರು. ಆತನ ಕಡೆಯಿಂದ ಬರೋಬ್ಬರಿ ಒಂಭತ್ತು ಬಾಂಡ್ ಪೇಪರುಗಳಲ್ಲಿ ಸಹಿ ಪಡೆದರು. ಅಂದರೆ ಧಾರವಾಡದ ಮಠದ ಉಸ್ತುವಾರಿಯನ್ನು ಚಿತ್ರದುರ್ಗದ ಮಠವೇ ವಹಿಸಿಕೊಂಡಂತಾಗಿತ್ತು. ಅತ್ತ ಧಾರವಾಡ ಮಠದಲ್ಲಿ ಹೆಸರಿಗೆ ಮಾತ್ರ ಸ್ವಾಮಿಯಾಗಿರಬೇಕು, ಇತ್ತ ಗುರುಮಿಟಕಲ್ ಮಠವೂ ಕೈ ತಪ್ಪುತ್ತದೆ ಎಂದು ಹೆದರಿದ ಗುರುಮಿಟಕಲ್ ಸ್ವಾಮಿ ಎರಡೇ ದಿನದಲ್ಲಿ ತ್ಯಾಗಪತ್ರ ಬರೆದಿಟ್ಟು ಮಠದಿಂದ ಎದ್ದು ಹೋದರು. ಆಗಲೇ ಮಲ್ಲಿಕಾರ್ಜುನ ಸ್ವಾಮಿಗೆ ಅದೃಷ್ಟ ಒಲಿದು ಬಂತು. ಹಾಲಿ ಆಡಳಿತ ಮಂಡಳಿಯ ವಿನಯ ಕುಲಕರ್ಣಿ, ಸವಣೂರಿನ ಚನ್ನಬಸವ ಸ್ವಾಮಿ, ಅಗಡಿಯ ಸ್ವಾಮಿಗಳು ಸೇರಿ ಮಹಾಂತಪ್ಪರ ಇಚ್ಛೆಯಂತೆ ಮಲ್ಲಿಕಾರ್ಜುನ ಸ್ವಾಮಿಗೆ ಪಟ್ಟ ಕಟ್ಟುತ್ತಿದ್ದಾರೆ.

ಶಿವಯೋಗಿ ಮಾಡಿದ ಅಧ್ವಾನಗಳಿಂದ ಮಠಕ್ಕಾದ ಹಾನಿಯನ್ನು ತುಂಬಿ, ಹಿಂದಿನಂತೆ ಮಠವನ್ನು ಸರ್ವಧರ್ಮಗಳ ಕೇಂದ್ರವನ್ನಾಗಿ, ಅಕ್ಷರ ದಾಸೋಹದ ಅಂಗಳವನ್ನಾಗಿ ಮಾಡುವತ್ತ ಮಲ್ಲಿಕಾರ್ಜುನಸ್ವಾಮಿ ಗಮನಹರಿಸಲಿ.

● ವಿನಯ್ ಹುರುಳಿಕೊಪ್ಪಿ

ಡಬಲ್ ಇಂಜಿನ್ ಶಿವಯೋಗಿಯೀಗ ಫುಲ್‌ಟೈಟ್!



ಹಿಂದಿನ ಕಚ್ಚೆಹರುಕ ಶಿವಯೋಗಿ ಸ್ವಾಮಿ ಧಾರವಾಡ ಮಠ ಬಿಟ್ಟ ನಂತರ ಅರಸಿಕೆರೆಯ ಹಾರ್‍ನಳ್ಳಿ ಕೋಡಿಮಠದಲ್ಲಿ ಟೆಂಟ್ ಹಾಕಿದ್ದ. ಈಗ ಅಲ್ಲಿಂದಲೂ ಈತನನ್ನು ಓಡಿಸಿದ್ದಾರೆ. ಮಠ, ಶ್ರೇಯಸಿರನ್ನೆಲ್ಲ ಕಳೆದುಕೊಂಡ ಶಿವಯೋಗಿಯೀಗ ಎಣ್ಣೆ ಹೊಡೆಯಲು ಶುರು ಹಚ್ಚಿದ್ದಾನೆ.

ಮೊನ್ನೆ ಫುಲ್‌ಟೈಟಾದಾಗ ಮಠಕ್ಕೆ ನುಗ್ಗಿ ಗಲಾಟೆ ಮಾಡಿದ್ದಾನೆ. ಅಲ್ಲಿದ್ದ ಭಕ್ತರು ನಾಲ್ಕು ಬಾರಿಸಿ ಪೊಲೀಸ್ ಸ್ಟೇಷನ್ನಿಗೆ ಒಯ್ದಿದ್ದಾರೆ. ಶಿವಯೋಗಿಯ 'ಸುವಾಸನೆ' ಗ್ರಹಿಸಿದ ಪೊಲೀಸರು ಕಿಮ್ಸ್‌ನಲ್ಲಿ ಚೆಕಪ್ ಮಾಡಿದಾಗ ಸ್ವಾಮಿ ಕುಡಿದದ್ದು ಪಕ್ಕಾ ಆಗಿದೆ.

ರೈತರ ಹೆಸರಿನಲ್ಲಿ ರೈತರಿಗೆ ದ್ರೋಹ

ಯಡಿಯೂರಪ್ಪನ ಸರ್ಕಾರದ ಭೂ ಕಬಳಿಕೆಯ ವಿರುದ್ಧ ದಾವಣಗೆರೆ ಜಿಲ್ಲೆಯ ರೈತರು 'ಪ್ರಾಣ ಬಿಟ್ಟೇವು - ಭೂಮಿಯನ್ನು ಬಿಡುವುದಿಲ್ಲ' ಎಂಬ ಘೋಷಣೆಯೊಂದಿಗೆ ಜೀವನ್ಮರಣ ಹೋರಾಟಕ್ಕಿಳಿದಿದ್ದಾರೆ. ರೈತರ ಹೆಸರಿನಲ್ಲಿ ಪ್ರಮಾಣವಚನ ಸ್ವೀಕರಿಸಿದ ಯಡಿಯೂರಪ್ಪನ ಸರ್ಕಾರ ದಾವಣಗೆರೆ ಮತ್ತು ಹರಪನಹಳ್ಳಿ ತಾಲ್ಲೂಕುಗಳಲ್ಲಿ 7500 ಎಕರೆ ರೈತರ ಫಲವತ್ತಾದ ಭೂಮಿಯನ್ನು ಕಬಳಿಸಿ, ಅದನ್ನು ಅಭಿವೃದ್ಧಿಯ ಹೆಸರಿನಲ್ಲಿ ಬಹುರಾಷ್ಟ್ರೀಯ ಕಂಪನಿಗಳಿಗೆ ನೀಡುವ ಹುನ್ನಾರ ಮಾಡಿದೆ.



ಇದರಿಂದಾಗಿ ತಾವು ಸರ್ವನಾಶ ಆಗುತ್ತೇವೆಂದು ಅರಿತ ರೈತರು ತೇಜಸ್ವಿ ಪಟೇಲ್, ಪಾಸನ ಓಂಕಾರಪ್ಪ ಮುಂತಾದವರ ನೇತೃತ್ವದಲ್ಲಿ ತೀವ್ರ ಹೋರಾಟಕ್ಕೆ ಇಳಿದರು. ಆದರೆ ಯಡ್ಡಿಯ ಚೆಡ್ಡಿ ಸರ್ಕಾರ ಡಿಸೆಂಬರ್ 25ರಂದು 140 ಮಂದಿ ರೈತರು ಮತ್ತು ಕಾರ್ಮಿಕರನ್ನು ಬಂಧಿಸಿ ಅವರನ್ನು ಚಿತ್ರದುರ್ಗ, ಧಾರವಾಡ ಹಾಗೂ ಬಳ್ಳಾರಿ ಜೈಲುಗಳಿಗೆ ರವಾನಿಸಿತು. ಈ ಬಂಧಿತರಲ್ಲಿ 18 ಮಂದಿ ರೈತ ಮಹಿಳೆಯರೂ ಸೇರಿದ್ದಾರೆ.

ಜವಳಿಪಾರ್ಕ್ ಹೆಸರಿನಲ್ಲಿ ಭೂಮಿ ಕಬಳಿಕೆ


2007ರಲ್ಲಿ ಹರಿಹರ-ದಾವಣಗೆರೆ ನಡುವೆ ಜವಳಿ ಪಾರ್ಕ್ ಹೆಸರಲ್ಲಿ ಶ್ರೀಮಂತ ಕುಳಗಳು ನಡೆಸುತ್ತಿದ್ದ ಭೂ ಕಬಳಿಕೆಯ ಬಗ್ಗೆ 'ಜವಳಿ ಪಾರ್ಕ ಭೂ ಮಾಫಿಯಾ' ಎಂಬ ತಲೆಬರಹದೊಂದಿಗೆ 'ಲಂಕೇಶ್' ವಾರಪತ್ರಿಕೆಯಲ್ಲಿ ವಿವರವಾದ ವರದಿ ಪ್ರಕಟವಾಗಿತ್ತು, ನೇಕಾರರಿಗೆ ಉದ್ಯಮಗಳನ್ನು ನಿರ್ಮಿಸುತ್ತೇವೆ, ಕರಕುಶಲ ಕೆಲಸಗಾರರಿಗೆ ಅನುಕೂಲ ಮಾಡಿಕೊಡುತ್ತೇವೆ ಎಂದು ಇಲ್ಲಿನ ಒಟ್ಟು 140 ಎಕರೆ ಭೂಮಿಯನ್ನು ಕರ್ನಾಟಕ ಕೈಗಾರಿಕಾ ಪ್ರದೇಶ ಅಭಿವೃದ್ಧಿ ಮಂಡಳಿಯ ಮೂಲಕ ವಶಪಡಿಸಿಕೊಳ್ಳಲಾಯಿತು. ಆದರೆ ಅಲ್ಲೀಗ ಯಾವುದೇ ನೇಕಾರಿಕೆ ಉದ್ಯಮವಾಗಲಿ, ಕರಕುಶಲ ಕೈಗಾರಿಕೆ ಆಗಲಿ ಸ್ಥಾಪನೆಯಾಗಿಲ್ಲ, ಬದಲಾಗಿ ಬಿಜೆಪಿ ಸಂಸದ ಸಿದ್ದೇಶ್ ಮಾಲೀಕತ್ವದೆನ್ನಲಾದ 'ಶ್ರೀಶೈಲ ಎಜುಕೇಷನ್ ಟ್ರಸ್ಟ್'ಗೆ ಅನಾಮತ್ತಾಗಿ 38.36 ಎಕರೆ ಭೂಮಿಯನ್ನು ಕೊಡಲಾಗಿದೆ. ಉಳಿದಂತೆ ಇಲ್ಲಿಯ ಆಯಕಟ್ಟಿನ ಜಾಗಗಳನ್ನು ಶ್ರೀಮಂತರು ಸದ್ದಿಲ್ಲದಂತೆ ಕಬಳಿಸಿಕೊಂಡು ಕುಳಿತಿದ್ದಾರೆ.

ಹೆಸರು ನಿರಾಶ್ರಿತರದು - ಬಸಿರು ಸಿದ್ದೇಶ್‌ನದು



ವಿಶೇಷವೆಂದರೆ, ಸರ್ಕಾರ ಕಬಳಿಸಿರುವ ಜವಳಿ ಪಾರ್ಕ್ ಭೂಮಿಯು ಸಿದ್ದೇಶಿಯ ಜಿ.ಎಂ.ಐ.ಟಿ ಇಂಜಿನಿಯರಿಂಗ್ ಕಾಲೇಜಿಗೆ ಹೊಂದಿಕೊಂಡಂತೆ ನಿರ್ಮಾಣ ಗೊಂಡಿದೆ. ಅಷ್ಟೇ ಅಲ್ಲದೆ, ಸಿದ್ದೇಶಿ ತನ್ನ 'ಶ್ರೀಶೈಲ ಎಜುಕೇಷನ್ ಟ್ರಸ್ಟ್' ಹೆಸರಲ್ಲಿ ಇಲ್ಲಿಯ ಭೂಮಿ ಕಬಳಿಸಿದ್ದಾನೆ. ಇಷ್ಟರಿಂದಲೇ ತೃಪ್ತಿಗೊಳ್ಳದ ಈತ ತನ್ನ ಇಂಜಿನಿಯರಿಂಗ್ ಕಾಲೇಜಿನ ಸುತ್ತಮುತ್ತಲ ಭೂಮಿಯನ್ನು ಸಹ ಕಬಳಿಸಲು ಹೊಂಚು ಹಾಕಿದ್ದಾನೆ. ಈಗ ಇವನ ಸಂಚಿನ ಫಲವಾಗಿಯೇ 'ನಿರಾಶ್ರಿತರಿಗೆ ಮತ್ತು ವಸತಿಹೀನರಿಗೆ' ಸೈಟು ಹಂಚುವ ಹೆಸರಿನಲ್ಲಿ ಬಾತಿ ಮತ್ತು ಕರೂರು ಗ್ರಾಮಗಳ 35, 36, 94, 131, 132, 134 ಮತ್ತು 145ನೇ ಸರ್ವೆ ನಂಬರ್‌ಗಳಲ್ಲಿನ ಒಟ್ಟು 180 ಎಕರೆ ಭೂಮಿಯನ್ನು ವಶಪಡಿಸಿಕೊಳ್ಳುತ್ತೇವೆಂದು ನಗರಾಭಿವೃದ್ಧಿ ಪ್ರಾಧಿಕಾರದಿಂದ ರೈತರಿಗೆ ಈಗಾಗಲೇ ನೋಟೀಸ್‌ಗಳು ರವಾನೆಯಾಗಿವೆ.

ತಮ್ಮ ಫಲವತ್ತಾದ ಭೂಮಿಯನ್ನು ನಂಬಿಕೊಂಡು ಬದುಕುತ್ತಿರುವ ರೈತರು ಈ ಆಘಾತದಿಂದಾಗಿ ರೊಚ್ಚಿಗೆದ್ದಿದ್ದಾರೆ. ಬಿಜೆಪಿ ಸರ್ಕಾರ, ಸಂಸದ ಸಿದ್ದೇಶ್ ಮತ್ತು ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಯಶವಂತರಾವ್ ವಿರುದ್ಧ ಹೋರಾಟಕ್ಕೆ ಅಣಿಯಾದ ರೈತರು ನಗರಾಭಿವೃದ್ಧಿ ಪ್ರಾಧಿಕಾರದ ಮುಂದೆಯೇ ಅನಿರ್ದಿಷ್ಟ ಕಾಲ ಧರಣಿ ಪ್ರತಿಭಟನೆಯನ್ನು ಪ್ರಾರಂಭಿಸಿದ್ದಾರೆ. ಅಲ್ಲಿಯೇ ಗುಡಿಸಲುಗಳನ್ನು ಹಾಕಿಕೊಂಡು, ಅಡುಗೆ ಮಾಡಿಕೊಂಡು, ದನಕರು, ಕುರಿಗಳನ್ನು ಹಾಗೂ ಬೇಸಾಯದ ಪರಿಕರಗಳನ್ನು ಸಹ ಹೊತ್ತುತಂದು ತೀವ್ರ ಪ್ರತಿಭಟನೆಗೆ ಇಳಿದಿದ್ದಾರೆ. ಈ ಪ್ರತಿಭಟನೆಯ ಭಾಗವಾಗಿಯೇ 2009 ನವೆಂಬರ್ ತಿಂಗಳಲ್ಲಿ ಬೆಂಗಳೂರಿಗೆ ಕಾಲ್ನಡಿಗೆ ಜಾಥಾ ಸಹ ಹೋಗಿಬಂದಿದ್ದಾರೆ. ಬಾತಿ ಮತ್ತು ಕರೂರು ಗ್ರಾಮಗಳ ರೈತರ ನಿರಂತರ ಪ್ರತಿಭಟನೆಯು ಈಗ 140ನೇ ದಿನಕ್ಕೆ ಕಾಲಿಡುತ್ತಿದೆ.



ನಗರಾಭಿವೃದ್ಧಿ ಪ್ರಾಧಿಕಾರವು ಕಬಳಿಸಲು ಹೊರಟಿರುವ 180 ಎಕರೆ ಭೂಮಿಯ ನಕ್ಷೆಯ ಪ್ರಕಾರ ಯಾವುದೇ ಬಡವರಿಗೆ ನಿವೇಶನಗಳು ಸಿಗುವ ಸಾಧ್ಯತೆಗಳಿಲ್ಲ, ಬದಲಾಗಿ ಸಂಸದ ಸಿದ್ದೇಶಿಯ ಜಿ.ಎಂ.ಐ.ಟಿ ಇಂಜಿನಿಯರಿಂಗ್ ಕಾಲೇಜಿನ ಅಂದವನ್ನು ಹೆಚ್ಚಿಸಲು ಅದರ ಸುತ್ತಮುತ್ತ ಉದ್ಯಾನವನಗಳನ್ನು ನಿರ್ಮಿಸಲು ಮತ್ತು ಈ ಹಿಂದೆ ಜವಳಿಪಾರ್ಕ ಹೆಸರಿನಲ್ಲಿ ಭೂಮಿಯನ್ನು ಕಬಳಿಸಿದಂತೆ ರಾಜಕಾರಣಿಗಳು ಹಾಗೂ ಶ್ರೀಮಂತ ಉದ್ಯಮಿದಾರರು ಸೇರಿ ರೈತರ ಜೀವನಾಡಿಯಾದ ಭೂಮಿಯನ್ನು ಕಬಳಿಸುವುದಕ್ಕೆ ಸಹಕಾರಿಯಾಗಿದೆ. ಇಲ್ಲಿನ ಒಟ್ಟು 65 ರೈತ ಕುಟುಂಬಗಳನ್ನು ಅಕ್ಷರಶಃ ಬೀದಿಗೆ ಬಿಸಾಡಿ ಸಂಸದ ಸಿದ್ದೇಶ್ ಅಂಡ್ ಕಂಪನಿಯ ಭೂಗಳ್ಳರಿಗೆ ನಗರಾಭಿವೃದ್ಧಿ ಪ್ರಾಧಿಕಾರವು ಬೆನ್ನೆಲುಬಾಗಿ ನಿಂತಿದೆ.

ಸರ್ಕಾರಕ್ಕೆ ಎಚ್ಚರಿಕೆಯ ಫಲಕ

ದಾವಣಗೆರೆ ತಾಲ್ಲೂಕಿನ ಬಾತಿ, ಕರೂರು, ಹೊನ್ನೂರು ಗೊಲ್ಲರಹಟ್ಟಿ, ಮಲ್ಲಶೆಟ್ಟಿಹಳ್ಳಿ, ಕರಿಲಕ್ಕೇನಹಳ್ಳಿ, ಚಟ್ನೋಬನಹಳ್ಳಿ, ಕುರ್ಕಿ, ಬುಳ್ಳಾಪುರ, ಉಳುಪಿನಕಟ್ಟೆ ಗ್ರಾಮಗಳ ಒಟ್ಟು 4500 ಎಕರೆ ಫಲವತ್ತಾದ ಕೃಷಿ ಯೋಗ್ಯಭೂಮಿಯನ್ನು ಕೈಗಾರಿಕಾ ಪ್ರದೇಶಗಳಿಗೆ, ವಿಮಾಣ ನಿಲ್ದಾಣ, ವಿಶ್ವವಿದ್ಯಾನಿಲಯ ಮತ್ತು ನಿವೇಶನಗಳನ್ನು ನಿರ್ಮಿಸುತ್ತೇವೆಂದು ಸರ್ಕಾರವು ಭೂಮಿಯನ್ನು ಕಬಳಿಸಲು ಹೊರಟಿದೆ. ಸರ್ಕಾರದ ಈ ಮೋಸದ ವಿರುದ್ಧ ಕರ್ನಾಟಕ ರೈತ ಸಂಘ ಹಾಗೂ ಹಸಿರುಸೇನೆಯ ನಾಯಕರುಗಳಾದ ಹುಚ್ಚವನಹಳ್ಳಿ ಮಂಜುನಾಥ್, ಆವರಗೆರೆ ರುದ್ರಮುನಿ, ಹೊನ್ನೂರು ಮುನಿಯಪ್ಪ ಮುಂತಾದವರು ರೈತರ ಪರವಾಗಿ ನಿಂತು ಅವಿರತವಾಗಿ ಹೋರಾಟ ಮಾಡುತ್ತಿದ್ದಾರೆ. ಸರ್ಕಾರದ ಭೂಕಬಳಿಕೆಯ ವಿರುದ್ಧದ ಹೋರಾಟದ ಅಂಗವಾಗಿ ಕರೂರು ಗ್ರಾಮದಲ್ಲಿ ಜ. 6ರಂದು ಎಚ್ಚರಿಕೆಯ ಫಲಕವನ್ನು ರೈತರು ನೆಟ್ಟಿದ್ದಾರೆ.

ದಿಕ್ಕು ತಪ್ಪಿಸುವ ಹುನ್ನಾರಗಳು

ದಾವಣಗೆರೆ ಜಿಲ್ಲೆಯ ಹರಪನಹಳ್ಳಿ ತಾಲ್ಲೂಕಿನ ತೆಲಗಿ ಹೋಬಳಿಯ ರಾಗಿಮಸಲವಾಡ, ಹಣೇಮೇಗಳ ತಾಂಡ, ಶಿರಗಾನಹಳ್ಳಿ, ಅನಂತನಹಳ್ಳಿಗಳ ಒಟ್ಟು 3000 ಎಕರೆ ರೈತರ ಭೂಮಿಯನ್ನು ಕಬಳಿಸಲು ಹೊರಟಿರುವ ಸರ್ಕಾರ ಈಗಾಗಲೇ 1220 ಎಕರೆ ಭೂಮಿಯನ್ನು ವಶಪಡಿಸಿಕೊಳ್ಳುವುದಾಗಿ 229 ರೈತರಿಗೆ ನೋಟೀಸುಗಳನ್ನು ಜಾರಿಮಾಡಿದೆ. ಇಲ್ಲಿ ಸುಮಾರು 300 ರೈತ ಕುಟುಂಬಗಳು ಬೀದಿಗೆ ಬೀಳುವ ಆತಂಕದಲ್ಲಿವೆ. ನೋಟೀಸ್‌ಗಳು ಬಂದ ಕೆಲವು ದಿನಗಳಲ್ಲೆ ರೈತರು ಸಂಘಟಿತರಾಗಿ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯ ಅಧಿಕಾರಿಗಳಿಗೆ ಘೇರಾವು ಮಾಡಿ ಯಾವುದೇ ಕಾರಣಕ್ಕೂ ಭೂಮಿಯನ್ನು ಬಿಡುವುದಿಲ್ಲವೆಂದು ರೈತ ಸಂಘಟನೆಯ ನಾಯಕ ಮಹೇಶ್ವರಸ್ವಾಮಿಯವರ ನೇತೃತ್ವದಲ್ಲಿ ಹೋರಾಡಲು ಅಣಿಯಾಗಿದ್ದಾರೆ. ಇಲ್ಲಿನ ರೈತರ ಹೋರಾಟವನ್ನು ದಿಕ್ಕುತಪ್ಪಿಸಲು ಅಧಿಕಾರಿಗಳು ಇಲ್ಲಿ ಮೆಕ್ಕೆಜೋಳ ಸಂಸ್ಕರಣ ಘಟಕವನ್ನು ಸ್ಥಾಪಿಸುವುದಾಗಿ ಸುಳ್ಳು ಹೇಳುತ್ತಿದ್ದಾರೆ. ಆದರೆ ದಾಬೋಲ್ ಗ್ಯಾಸ್ ವಿದ್ಯುಚ್ಛಕ್ತಿ ಸ್ಥಾವರವನ್ನು ನಿರ್ಮಿಸುವ ಹಿಡನ್ ಅಜೆಂಡಾ ಸರ್ಕಾರಕ್ಕಿದೆ ಎನ್ನಲಾಗುತ್ತಿದೆ.


ರೈತ ಭೂಮಿ ಮಾರಿಕೊಳ್ಳುತ್ತಿರುವ ಯಡ್ಡಿ

ಭೂಮಿಯನ್ನು ಬಿಟ್ಟುಕೊಡುವುದಿಲ್ಲವೆಂಬ ರೈತರ ಹೋರಾಟವು ಕ್ರಮೇಣ ಬಲಗೊಂಡು ಈಗ್ಗೆ 3 ತಿಂಗಳಿನಿಂದ ದಾವಣಗೆರೆ ಜಿಲ್ಲೆ ಹೋರಾಟದ ಕಣವಾಗಿ ಮಾರ್ಪಟ್ಟಿದೆ. ವಿದ್ಯುಚ್ಛಕ್ತಿ ಕಡಿತದ ವಿರುದ್ಧ ಭೂಮಿಯನ್ನು ಕಳೆದುಕೊಂಡ ರೈತರ ಹೋರಾಟಕ್ಕೆ ಬೆಂಬಲವಾಗಿ ನಿಂತ ರೈತ ಸಂಘಟನೆ ಹಾಗೂ ಪ್ರಗತಿಪರ ಸಂಘಟನೆಗಳ ವತಿಯಿಂದ ಡಿ. 21ರಂದು ದಾವಣಗೆರೆ ನಗರವನ್ನು ಬಂದ್ ಮಾಡಿಸಲಾಯಿತು. 25ರಂದು ಜೈಲ್ ಬರೋ ಚಳವಳಿ, ಡಿ. 4ರಂದು ಹರಿಹರ ಬಂದ್, ಜ. 5ರಂದು ಗುಳೆ ಹೊರಡುವ ಚಳವಳಿ ಮುಂತಾದ ಪ್ರಧಾನ ಹೋರಾಟಗಳು ನಡೆಯುತ್ತಿವೆ. ಜೊತೆಗೆ ಕಳೆದ ಮೂರು ತಿಂಗಳಿನಿಂದ ಪ್ರತಿನಿತ್ಯ ಒಂದಿಲ್ಲೊಂದು ರೈತ ಹೋರಾಟಗಳು ನಡೆಯುತ್ತಿವೆ. ಭೂಮಿ ಬಿಡುವುದಿಲ್ಲವೆಂದು ಹಠ ತೊಟ್ಟು ಚಿತ್ರದುರ್ಗ ಜೈಲು ಸೇರಿರುವ ರೈತರನ್ನು ಸಂತೈಸಲು ಹೋದ ಜಿಲ್ಲಾಧಿಕಾರಿ ಅಮರನಾರಾಯಣ ರೈತ ಮಹಿಳೆಯರಿಂದ ಮುಖಕ್ಕೆ ಉಗಿಸಿಕೊಂಡು ಬಂದಿದ್ದಾನೆ. ಭೂಸ್ವಾಧೀನ ಪ್ರಕ್ರಿಯೆಯನ್ನು ಕೈಬಿಡುವವರೆಗೂ ಜೈಲಿನಿಂದ ಹೊರಬರುವುದಿಲ್ಲವೆಂದು ರೈತರು ದೃಢವಾಗಿ ಸರ್ಕಾರಕ್ಕೆ ಸವಾಲು ಹಾಕುತ್ತಿದ್ದಾರೆ.

ದಾವಣಗೆರೆ ಜಿಲ್ಲೆಯಂತೆ ರಾಜ್ಯದ ಅನೇಕ ಜಿಲ್ಲೆಗಳಲ್ಲಿ ಬಿ.ಜೆ.ಪಿ ಸರ್ಕಾರದ ವಿರುದ್ಧ ರೈತರ ಪ್ರತಿಭಟನೆಗಳು ನಡೆಯುತ್ತಿವೆ. ಆ ಹೋರಾಟಗಳು ತೀವ್ರವಾದ ಕಡೆ ಮಾತ್ರ ಭೂಸ್ವಾದೀನ ಪ್ರಕ್ರಿಯೆಯನ್ನು ಕೈಬಿಡುತ್ತೇವೆಂದು ಹೇಳಿ ತಮ್ಮ ಸರ್ಕಾರದ ವಿರುದ್ಧದ ರೈತ ಹೋರಾವನ್ನು ತಣ್ಣಗೆ ಮಾಡಿಬಿಡುವ ಹಗಲುಗನಸನ್ನು ಯಡಿಯೂರಪ್ಪ ಕಾಣುತ್ತಿದ್ದಾರೆ. ರಾಜ್ಯದಾದ್ಯಂತ ರೈತ ಕೃಷಿ ಯೋಗ್ಯ ಭೂಮಿಯನ್ನು ವಿಶೇಷ ಆರ್ಥಿಕ ವಲಯಗಳಿಗಾಗಿ ವಶಪಡಿಸಿಕೊಂಡು ರೈತಾಪಿವರ್ಗವನ್ನು ಬೀದಿಗೆ ತಳ್ಳಿ ಅವರ ಭೂಮಿಯನ್ನು ಬಂಡವಾಳಶಾಹಿಗಳಿಗೆ ಮಾರಿಕೊಳ್ಳುತ್ತಿರುವ ಸರ್ಕಾರದ ಕುತಂತ್ರದ ವಿರುದ್ಧ ರೈತರು ಹಾಗೂ ಪ್ರಗತಿಪರರು ಬೀದಿಗೆ ಬಂದು ಇನ್ನೂ ತೀವ್ರತರವಾದ ಹೋರಾಟ ಮಾಡಬೇಕಾದ ಅನಿವಾರ್ಯತೆ ಎಂದಿಗಿಂತ ಇಂದು ಜಾಸ್ತಿಯಾಗಿದೆ.

- ಚಂದ್ರಶೇಖರ ತೋರಣಘಟ್ಟ

ನಂಗೊಂದು photo ಬೇಕಿತ್ತೆ




ನಂ ಮನೆಗೆ ಬಂದ ಮಂದಿ ಕೂಡ್ರೊ ಕಡೆ
ಕಣ್ಣಿಗೆ ರಾಚೋ ಹಾಗೆ
ಮೊಳೆ ಜಡಿದು ನೇತು ಹಾಕೋಕೊಂದು
photo ಬೇಕಿತ್ತು
ಬಾಗೇವಾಡಿ ಬಸವನದೊಂದು
photo ಬೇಕಿತ್ತು

ಅರ್ಧ ನಿಮೀಲಿತ ನೇತ್ರನಾಗಿ
ಅಂಗೈಯಲ್ಲಿ ಲಿಂಗ ಹಿಡಿದು
ಧ್ಯಾನಾಸಕ್ತ ಭಂಗೀಲಿ ಕುಳಿತ
ಬಾಗೇವಾಡಿ ಬಸವನದೊಂದು
photo ಬೇಕಿತ್ತು

ಅನ್ನೋದ್ರಾಗ ನನ್ನೊಳಗಿದ್ದ
ಲಿಂಗಾಯತ ಎದ್ದು ಕೂತಿದ್ದ

ಸರ್ಕಲ್‌ದಾಗ ಕುದುರೆಮ್ಯಾಗೆ
ಕತ್ತೀ ಹಿಡಿದು ಕಿರೀಟ ಧರಿಸಿ
ಜರ್ಬಾಗಿ ಕುಂತ
ಕಲ್ಯಾಣೇಶ್ವರ ಬಸವ ಪ್ರಭುವಿನ
photo ಬೇಕಿತ್ತು
ನಂಗೊಂದು photo ಬೇಕಿತ್ತು

● ಟಿ.ಎಸ್. ಲೋಹಿತಾಶ್ವ



ಅವರು ನನಗೆ ಅವಲಕ್ಕಿಯ ಒಗ್ಗರಣೆಯೋ, ಉಪ್ಪಿಟ್ಟೋ ಒಂದೊಂದು ಸಲ ತಿನ್ನಲು ಕೊಡುವುದಿತ್ತು. ಆಗ ನೋಡಬೇಕು ನನ್ನ ಫಜೀತಿ.

"ಏ ಪೋರೀ... ಇಕಾ... ನಮ್ಮ ಹುಡ್ರೆಲ್ಲಾ ತಿಂದು ಒಂದಿಷ್ಟು ಉಪ್ಪಿಟ್ಟು ಉಳದದ ನೋಡು... ತಗೋ.. ತಿನ್ನು..." ಅಂತ ನನ್ನನ್ನು ಕರೆಯುತ್ತಿದ್ದರು. ನಾನು ಅವರ ಮುಂದೆ ನಿಂತು ಕೈ ಒಡ್ಡುತ್ತಿದ್ದೆ. ಪತ್ರೋಳಗಿಯಲ್ಲೋ, ಹಳೆಯ ಪದ್ದಿ ಕಾಗದದ ಮೇಲೋ ಅದನ್ನಿಟ್ಟು ಅಷ್ಟು ಎತ್ತರದಿಂದಲೇ ನನ್ನ ಕೈಗೆ ದೊಪ್ಪನೆ ಬಿಸಾಕುತ್ತಿದ್ದರು. ಪುಣ್ಯಕ್ಕೆ ಅದು ನನ್ನ ಕೈಯಲ್ಲಿ ಬಿದ್ದು ಭಾರ ಸಂಭಾಳಿಸಿದರೆ ಸರಿ. ಆದರೆ ಕೆಲವೊಮ್ಮೆ ಅದು ಜೋರಾಗಿ ಬಿದ್ದಾಗ ನನ್ನ ಪುಟ್ಟ ಕೈಗಳಿಗಮರದೆ ಧಡಕ್ಕನೆ ಕೆಳಗೆ ಬೀಳುತ್ತಿತ್ತು. ಆಗ ಉಪ್ಪಿಟ್ಟು ನೆಲದ ಮೇಲೆ ಚೆಲ್ಲಾಪಿಲ್ಲಿಯಾಗಿ ಹರಡಿದಾಗ ನನ್ನ ಕಣ್ಣಲ್ಲಿ ನೀರು ದಟ್ಟೈಸುತ್ತಿತ್ತು.

"ಥೂ ನಿನ್ನ... ಕೊಟ್ಟಿದ್ದು ಛೋಲೋತನ್ನಾಗಿ ಸಂಭಾಳಿಸ್ಗೊಂಡು ತಗೊಂಡು ಹಿಲ್ಲಕ್ಕನೂ ಬರಂಗಿಲ್ಲಲ್ಲೇ ನಿನಗಾ? ದಡ್ಡ ಮುಂದೀದು... ಅದೆಲ್ಲಾ ಮ್ಯಾಲಿಂದು ಎಳ್ಕೊಂಡು, ಬ್ಯಾರೆ ಪತ್ರೋಳಿಗಿ ಕುಡ್ತೀನಿ, ಹಾಕ್ಕೊಂಡು ತಿನ್ನು. ಕೆಳಗಿಂದೆಲ್ಲಾ ಎಳ್ದು ಚೆಲ್ಲಿ ನೆಲಕ್ಕ ನೀರ್ಹಾಕಿ ಸಾರಿಸಿಬಿಡು..." ಅಂತ ಆ ಹೆಂಗಸರ ಅಪ್ಪಣೆಯಾಗುತ್ತಿತ್ತು. ಸುತ್ತ ನೆರೆದ ಹುಡುಗರೆಲ್ಲ ಕಿಸಿಕಿಸಿ ನಗುತ್ತಿದ್ದುವು. ನೆಲದ ಮೇಲೆ ಬಿದ್ದದ್ದನ್ನು ಬಳ್ಕೊಂಡು ತಿನ್ನಲು ನನಗೆ ಮನಸ್ಸಿರುತ್ತಿರಲಿಲ್ಲ. ತೀರ ಅವಮಾನವಾದಂತಾಗಿ ಎಲ್ಲವನ್ನೂ ಬಳಿದೊಯ್ದು ತಿಪ್ಪೆಗೆಸೆದು ಬಂದು ನೀರಿನಿಂದ ನೆಲ ಸಾರಿಸುತ್ತಿರುವಾಗ ನನಗೆ ಜೀವ ಹೋದಂಗಾಗುತ್ತಿತ್ತು. "ಏ... ಎಷ್ಟು ಸೊಕ್ಕೇ ನಿನಗೆ? ಮ್ಯಾಲಿಂದು ಬಳ್ಕೊಂಡು ತಿನ್ನು ಅಂದ್ರ ಎಲ್ಲೋಷ್ಟೂ ಎತ್ತಿ ತಿಪ್ಪಿಗೆ ಹಾಕಿ ಬಂದೆಲ್ಲ? ಅನ್ನದ ಮ್ಯಾಲ ಇಷ್ಟು ಸೊಕ್ಕು ತೋರಸ್ತೆಲ್ಲ, ಅದಕ್ಕೇ ನಿಮ್ಮ ಶೂದ್ರ ಮಂದೀಗಿ ಆ ದೇವರು ಹೊಟ್ಟೆ ತುಂಬಾ ಅನ್ನಾ ಕೊಟ್ಟಿಲ್ಲ, ಪಾಪಿಷ್ಠ ಮುಂಡೇವು... ದರಿದ್ರ ಸಂತಾನ..." ಅಂತ ಆ ತಾಯಂದಿರು ಬೈಯ್ಯುತ್ತಿದ್ದರು. ನೀರು ಕೊಡುವಾಗಲೂ ಅಷ್ಟೇ. ಅವರು ತಂಬಿಗೆಯೆತ್ತಿ ಮೇಲಿನಿಂದ ಹಾಕಬೇಕು. ನಾನು ಬೊಗಸೆಯೊಡ್ಡಿ ಕುಡೀಬೇಕು. ಅವರು ನಮಗೆ ಚಹಾ ಕೊಡುವಾಗಲೂ ನಮಗೆಂತಲೇ ಒಂದು ಕಿವಿ ಹರಕು ಕಪ್ಪು ಸೀಕೆಯೇ ಇಟ್ಟಿರುತ್ತಿದ್ದರು. ಅದರಲ್ಲೇ ಚಹಾ ಹಾಕಿಸಿಕೊಂಡು ಕುಡಿದು ಅದನ್ನು ಬೂದಿ ಹಚ್ಚಿ ತೊಳೆದು ಹೊರಗಿನ ಮಾಡದಲ್ಲಿಡಬೇಕು.

ಇವೆಲ್ಲ ನನಗೆ ಹಿಂಸೆ ಕೊಡುತ್ತಿದ್ದವು. ಚುಚ್ಚುತ್ತಿದ್ದವು, ಕೆರಳಿಸುತ್ತಿದ್ದವು, ನಾಚಿಗೊಳಿಸುತ್ತಿದ್ದವು. ಅದೆಲ್ಲ ಕಿರಿಕಿರಿಯೇ ಬ್ಯಾಡಂತ ನಾನು ಅವರ ಮನೆಯಲ್ಲಿ ಉಂಡಿ ತಿನ್ನುವುದು, ಚಹಾ-ನೀರು ಕುಡಿಯುವುದನ್ನೇ ನಿಲ್ಲಿಸಿದೆ. ಅದಕ್ಕೂ ಸುಂದ್ರಾಬಾಯಿಯಂಥ ಮುದುಕಿಯರಿಗೆ ಸಹನೆಯಿರುತ್ತಿರಲಿಲ್ಲ. ನನ್ನ ಅಪ್ಪನನ್ನು ಕರೆದು, ಒಂದಕ್ಕೆರಡು ಪೋಣಿಸಿ, ಉಪ್ಪುಖಾರ ಹಚ್ಚಿ ಚಾಡಿ ಚುಗಲಿ ಹೇಳುತ್ತಿದ್ದರು.

"ನೀ ಏನೇ ಅನ್ನು ಶರಣಮ್ಮಾ... ನಿನ್ನ ಮಗಳು ಭಾಳ ಸೊಕ್ಕಿಂದದಾ ನೋಡಿ... ನೆಲದ ಮ್ಯಾಲ ಬಿದ್ದದ್ದು ತಗೊಂಡು ತಿನಂಗಿಲ್ಲಂತಾಳ. ಅನ್ನದ ಮ್ಯಾಲ ಇಷ್ಟೊಂದು ಸೊಕ್ಕು ತೋರಿಸಬಾರದು ನೋಡs... ಮೊದಲೇ ನಿಮ್ಮಂದಿಗಿ ಆ ದೇವರು ಅನ್ನಾ ಅರವಿ ಕೊಟ್ಟಿಲ್ಲ. ಉಪಾಸ ವನವಾಸ ಬಿದ್ದೀರಿ... ನಿನ್ ಮಗಳಿಗೆ ಒಂದಿಷ್ಟು ಬುದ್ಧಿ ಹೇಳು. ನಮ್ಮ ಪಾರಗೋಳ ಸತೀಗಿ ಸಾಲೀಗೇನು ಹೋಗ್ತಾಳ... ಅಕಿನ ತೆಲಿಮ್ಯಾಲ ಕೋಡುಬಂದಾವ... ಅದಕ್ಕೆ ಈ ಶೂದ್ರ ಮುಂಡೇವಕ್ಕ ವಿದ್ಯಾಬ್ಯಾಡಂತ ಅಂತಿದ್ರು ನಮ್ಮ ಹಿರೇರು... ಈಗಿನ ಸರಕಾರದಾ ಅಲ್ಲ ಸುಡ್ಲಿ... ಏನೇನೋ ಸುಟ್ಟುಸುಡಗಾಡಂತ ಹೊಸ ಹೊಸಾ ಕಾನೂನು ಮಾಡಿ ಹೊಲಮಾದರಿಗೂ ಸಾಲಿ ಕಲಸಲಕತ್ತಾದ..." ಅವಳ ಬೈಗುಳು ಸರ್ಕಾರದ ಕಡೆಗೂ ಹೊರಳುತ್ತಿತ್ತು.

ಇಂಥ ಮಾತುಗಳಿಂದ ಸಿಟ್ಟಿಗೆ ಬಂದ ಅವ್ವ ಮನೆಗೆ ಬಂದು ನನಗೆ ಬಡಿದು, ನಾನು ಎದುರುತ್ತರ ಕೊಟ್ಟಾಗ ಕಪಾಳಕ್ಕೆರಡೇಟು ಕೊಟ್ಟು, ತನ್ನಪ್ಪಿಕೊಂಡು ಗಳಗಳನೆ ಅತ್ತು ಬಿಡುತ್ತಿದ್ದಳು. "ಅವರು ದೇವರ ಎದಿಲಿಂದ ಹುಟ್ಟಿ ಬಂದ ಹಾರ್ರಮಂದಿ! ನಾವು ಅವರ ಹೊಲಸು ಬಳೀಲಕ್ಕ ಹುಟ್ಟಿಬಂದ ಪಾಪಿ ಮಂದಿ... ಅವರ ಸರಿಜೋಡಿ ಸೆಣಸಾಡಬಾರದು ಕೂಸು... ಪೆಟ್ಟಾಯ್ತೇನೆ ನನ್ ಬಂಗಾರದ ಗೊಂಬೀಗೀ... ನನ್ನ ಕೈ ಕಡೀಲೀ... ಅಳಬ್ಯಾಡ ಮಗಾ..." ಅಂತಂದು ಅವಳು ಅಳುತ್ತಿದ್ದರೆ ನನಗೆ ಒಳಗೊಳಗೇ ಆ ಸುಂದ್ರಾಬಾಯಿಯನ್ನು ಹಿಡ್ಕೊಂಡು ರಪರಪ ಬಡಿಯಬೇಕೆನ್ನಿಸುತ್ತಿತ್ತು.

ಇವರೆಲ್ಲ ಹೀಗೆ ಮಾಡುವುದು ನೋಡಿ ನನ್ನೊಳಗೆ, ಬಾಲ್ಯದ ಆ ಎಳೆ ವಯಸ್ಸಿನಲ್ಲಿ ಒಂದು ಹಟ ಹುಟ್ಟಿ ಬೆಳೆಯತೊಡಗಿತ್ತು. ಯಾವುದರಲ್ಲಿಯೂ ನಾವು ಅವರಿಗಿಂತ ಕಡಿಮೆ ಆಗಬಾರದು ಅಂತೆನಿಸುತ್ತಿತ್ತು. ನಾವಿದ್ದದ್ದು ಬ್ರಾಹ್ಮಣರ ಚಾಳಿನಲ್ಲಿ ಅಂತ ಹೇಳಿದ್ದೀನಲ್ಲ. ನಾನೂ ಒಂದು ತುಳಸಿಯ ಸಸಿಯನ್ನು ತಂದು ನನ್ನ ಮನೆಯ ಮುಂದೆ ಹಳೆಯ ಒಡಕು ಗಡಿಗೆಯಲ್ಲಿ ನೆಟ್ಟೆ. ದಿನಾಗಲೂ ಸ್ನಾನಮಾಡಿ ಮನೆಯ ಹೊಸ್ತಿಲಿಗೆ, ಅಂಗಳದಲ್ಲಿ ನೀರುಹಾಕಿ, ರಂಗೋಲಿಯ ಚಿತ್ತಾರ ಇಳಿಸಿ, ಆ ಗಿಡಕ್ಕೊಂದು ತಂಬಿಗೆ ಮಡಿ ನೀರೆರೆದು ಹೂವಿಟ್ಟು ಅರಿಶಿಣ ಕುಂಕುಮ ಹಚ್ಚಿ ಕೈ ಮುಗಿಯುತ್ತಿದ್ದೆ.

ಕಾರ್ತಿಕ ಮಾಸದಲ್ಲಿ ನಸುಕಿನಲ್ಲೇ ಎದ್ದು ಆಕಾಶದಲ್ಲಿ ಚಿಕ್ಕಿಗಳು ಇರುವಾಗಲೇ ಸ್ನಾನ ಮಾಡುವುದು, ಏಕಾದಶಿ, ಪಂಚಮಿ, ಶಿವರಾತ್ರಿ ಮೊದಲಾದವುಗಳಂದು ಉಪವಾಸ ಮಾಡುವುದು ಮೊದಲಾದವುಗಳನ್ನು ಮಾಡುತ್ತಿದ್ದೆ. ಆದರೆ ಅದಕ್ಕೂ ಅವರದ್ದೊಂದು ಕೊಂಕುನುಡಿ ಇದ್ದೇ ಇರುತ್ತಿತ್ತು. ನಾನು ನಲ್ಲಿಯ ಮುಂದೆ ಸರದಿಯಾಗಿ ಕೊಡ ಪಾಳಿಗಿಟ್ಟುಕೊಂಡು ನಿಂತಾಗ ಅವರವರೇ ಮಾತಾಡಿಕೊಂಡು ಮುಸಿಮುಸಿ ನಗುತ್ತಿದ್ದರು.

"ಏನೆ ಕಮಲಾ... ಕಾರ್ತಿಕ ಸ್ನಾನಾ ಮುಗಸ್ಗೊಂಡು ಬಂದೇನು? ಈಗೇನು ಈ ಹೊಲಮಾದರು ಮೊದಲು ಮಾಡಿ ಹದಿನೆಂಟು ಶೂದ್ರ ಮುಂಡೇವಲ್ಲಾ ಕಾರ್ತಿಕ ಸ್ನಾನ, ಏಕಾದಶಿ, ಎಲ್ಲಾ ಮಾಡ್ಲಕತ್ತಾವ ಸುಟ್ಟು ಬರ್ಲಿ.. ಏನಾದ್ರೇನು ನವಿಲು ಕುಣಿತಾದಂತ ಕೋಳಿನೂ ಕುಣೀಲಕ್ಕ ಹೋಗಿ ಕಾಲು ಮುರ್ಕೊಂಡಿತ್ತಂತ.. ಹಾಂಗ್ಹದ ಅಷ್ಟೇ.." ಒಬ್ಬಳ ಧ್ವನಿ. "ಅಷ್ಟಲ್ದೆ ಮತ್ತಿನ್ನೇನು ಬದ್ರಿ ಮಾವಶೀ.. ಕೋಗಿಲಾ ಹಾಡ್ತಾದಂತ ಕಾಗೀಗಿ ಹಾಡ್ಲಾಕ್ಬಂದ್ಹಾಂಗಾತ್ಯಾದೇನ್ರಿ? ಅದರ ಗಂಟಲದಿಂದ ಕಾವ್ ಕಾವ್ ಅಂತ ಕರ್ಕಶ ದನೀನೇ ಹೊರಡಾದೂ..."

ಹೀಗೆ ಮಾತಾಡುತ್ತಾ ನನ್ನ ಕಡೆಗೆ ಓರೆಗಣ್ಣಿನಿಂದ ನೋಡಿ ವ್ಯಂಗ್ಯ ನಗೆ ನಗುವಾಗಲೇ ನನ್ನ ಪಾಳಿ ಬಂದು ಕೊಡ ನಲ್ಲಿಯ ಕೆಳಗಿಡಲು ಹೋದರೆ

ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷೆಯಾಗಿರುವ ಗೀತಾ ನಾಗಭೂಷಣ ಅವರ ಬದುಕಿನ ಹಲವು ಪುಟಗಳು



ಮುರಿದು ಬಿದ್ದ ದಾಂಪತ್ಯ

"ದೂರ...ದೂರ.." ಅಂತ ಮಾರುದೂರ ಜಿಗಿಯುತ್ತಿದ್ದರು. ನಾನು ನೀರು ತುಂಬಿಕೊಂಡು ಈ ಕಡೆಗೆ ಬಂದಾಗ ಅವರು ನಳದಿಂದ ಬಂದ ನೀರಿನಿಂದಲೇ ನಳ ತೊಳೆದು, ತೋಟಿ ಸವರಿ, ನಾನು ನಡೆದು ಬಂದ ಜಾಗದಲ್ಲಿ ನೀರೆರಚುತ್ತಿದ್ದರು.

ಇಂಥ ಅಪಮಾನದ ನೋವುಗಳು ನನಗೊಬ್ಬಳಿಗೇ ಅಲ್ಲ, ಗಲ್ಲಿಯ ಎಲ್ಲಾ ಶೂದ್ರರಿಗೆ ಆಗುತ್ತಿದ್ದವಾದರೂ ಅವರ್‍ಯಾರೂ ನನ್ನಷ್ಟು ಕೀಳರಿಮೆ ಅನುಭವಿಸುತ್ತಿರಲಿಲ್ಲ. ಇದೆಲ್ಲ ತಮ್ಮ ಕರ್ಮ ಅಂತ ನಂಬಿ ಅವರೊಂದಿಗೆ ರಾಜಿಮಾಡಿಕೊಂಡೇ ಬದುಕುತ್ತಿದ್ದರು. ಹೀಗಾಗಿ ನನ್ನೊಳಗಿನ ಬಂಡಿನ ದನಿ ಬಾಯಿಗೆ ಬರದೆ ಒಳಗೊಳಗೇ ಕುದಿಯುತ್ತಿತ್ತು.

ಹೀಗೆಂದ ಮಾತ್ರಕ್ಕೆ ನಾನು ಶುರುವಿಟ್ಟದ್ದೇ ಬಂಡಾಯ ಧೋರಣೆಯ ಬರಹಗಳಿಂದಲ್ಲ, ಮೊದಮೊದಲು ನಾನೂ ಚೆಂದದ ಚೆಲುವೆಯ, ಅಂದದ ಬದುಕಿನ, ಬಹುಮಹಡಿಯ ಭವ್ಯ ಬಂಗಲೆಗಳ, ಸ್ಟಾರ್ ಹೋಟೆಲುಗಳ, ಹೋಳಿಗೆ ತುಪ್ಪ ಉಂಡು ಹೊಟ್ಟೆ ತುಂಬಿದವರ ಥಳಕು ಬಳುಕಿನ ಜೀವನದ ಬಗೆಗೆಯೇ ಬರೆದೆ. ಆಗೆಲ್ಲ ನನ್ನ ಕಾದಂಬರಿಯ ಹೀರೋಯಿನ್‌ಗಳು ಅಪ್ರತಿಮ ಸುಂದರಿಯರು, ಅವರ ದುಂಬಿಗಣ್ಣು, ತೊಂಡೆತುಟಿ, ಸೇಬುಗೆನ್ನೆ, ಸಂಪಿಗೆ ಮೂಗು, ಶಂಖಗೊರಳು, ತಾವರೆ ಮೊಗ್ಗಿನ ಮೊಲೆಗಳ ವರ್ಣನೆಯೋ ವರ್ಣನೆ ಧಮಕ್ ಧಮಕ್‌ನ ಅವರ ಬಾಳಿನಲ್ಲಿ ಸಮಸ್ಯೆಗಳಿಗೆ ಬರ, ಸಂಘರ್ಷಗಳು ಅಪರಿಚಿತ.

ಏರಿಳಿತಗಳು, ಬದಲಾಗುವ ಬಣ್ಣಗಳು, ನನ್ನ ನಿನ್ನ ನಡುವೆ, ಆಘಾತ, ಅಭಿಮಾನ, ಮೋಹ್ಪಾ, ನಿನ್ನ ತೋಳುಗಳಲ್ಲಿ, ನನ್ನ ಒಲವು ನಿನ್ನ ಚೆಲುವು ಮೊದಲಾದ ಒಂದಿಷ್ಟು ಕಾದಂಬರಿಗಳು ಈ ನಿಟ್ಟಿನಲ್ಲಿ ಹೊರಬಂದವು. ಜನಪ್ರಿಯತೆಯೂ ಪಡೆದುಕೊಂಡು ಅಸಂಖ್ಯ ಓದುಗರನ್ನು ಒದಗಿಸಿಕೊಟ್ಟವು. ಅಭಿಮಾನಿಗಳ ಪತ್ರಗಳ ಸಂಖ್ಯೆ ಜಾಸ್ತಿಯಾಯಿತು. ಪ್ರಕಾಶಕರು ನನ್ನ ಕಡೆಗೆ ನೋಡುವಂತಾಯಿತು. ಪತ್ರಿಕೆ ನಿಯತಕಾಲಿಕೆಗಳ ಸಂಪಾದಕರ ಬೇಡಿಕೆ ಜಾಸ್ತಿಯಾಯಿತು. ಎಲ್ಲ ಆಯಿತು ಖರೇ. ಆದರೆ ನನ್ನೊಳಗಿನ ಖರೇ ಕಾಳಜಿಗಳು ಹೊರಹೊಮ್ಮಲಿಲ್ಲವೆಂಬ ಅರಿಕೆ ನನಗಿದ್ದೇ ಇತ್ತು, ಇದು ನನ್ನ ಬರಹ ಅಲ್ಲ... ಬೇರೇನೋ ನಾನು ಬರೆಯಬೇಕಿದೆ. ಅಂತ ಅನಿಸುತ್ತಿತ್ತು. ಆದರೆ ಏನು? ಎಂಥದ್ದು ಅನ್ನುವ ತೊಳಲಾಟದಲ್ಲಿ ಸಮಯ ಸರಿಯುತ್ತಿತ್ತು.

ನನ್ನ ಬರಹಕ್ಕೆ ಅಂತ ಪೂರಕ ಅಧ್ಯಯನವೇನನ್ನೂ ನಾನು ಹೆಚ್ಚಿಗೆ ಮಾಡಿಲ್ಲ, ಆದರೆ ಮರಾಠಿ ದಲಿತ ಸಾಹಿತ್ಯ ಆತ್ಮಕಥೆಗಳು, ಕನ್ನಡದಲ್ಲಿಯ ಎಲ್ಲ ಪ್ರಾದೇಶಿಕ ಕಾದಂಬರಿಗಳನ್ನು ಓದಿಕೊಂಡಿದ್ದೇನೆ. ಕಾರಂತ, ಕುವೆಂಪು, ಅವರಿಂದ ಹಿಡಿದು ಇಂದಿನ ಹೊಸ ಪೀಳಿಗೆಯವರ ಕತೆ, ಕಾದಂಬರಿಗಳ ಅಧ್ಯಯನ ಮಾಡಿದ್ದೇನಾದರೂ ಇನ್ನೂ ಕಲಿಯುವುದು, ಓದುವುದು ಇದ್ದೇ ಇದೆ ಅಂತ ನನಗಾದರೂ ಅನ್ನಿಸುತ್ತಿದೆ. ಮರಾಠಿಯ ಶರಣಕುಮಾರ್ ಲಿಂಬಾಳೆ, ಗಾಯಕವಾಡ, ಚಂದ್ರಕಾಂತ ಪೋಕಳೆಯವರನ್ನು ಓದಿಕೊಂಡಿದ್ದೇನೆ. ಹಿಂದಿಯ ಕೆಲ ಪ್ರಾದೇಶಿಕ (ಹಳೆಯ) ಕಾದಂಬರಿಗಳನ್ನು ನನ್ನ ಅಧ್ಯಯನದ ತೆಕ್ಕೆಗೆಳೆದುಕೊಂಡಿದ್ದೇನೆ. ಆದರೆ ಇಂಗ್ಲಿಷ್ ಲೇಖಕರನ್ನು ಅಷ್ಟಾಗಿ ಓದಿಕೊಂಡಿಲ್ಲವೆಂದೇ ಹೇಳಬಹುದು.

ಆದರೆ ನನ್ನ ಬದುಕಿನಲ್ಲಿ ಬಂದ ಕಹಿ, ಕೆಟ್ಟ ಅನುಭವಗಳೇ ನನ್ನನ್ನು ಬರೆಯಲು ಒತ್ತಾಯ ಮಾಡಿದುವು ಅನ್ನುವುದು ಮಾತ್ರ ಸೋಳಾಣೆಯ ಸತ್ಯ.

ನನ್ನ ವೈಯಕ್ತಿಕ ನೋವುಗಳು ಕೂಡ ನನ್ನ ಬರಹಕ್ಕೆ ಒಂದು ರೀತಿಯಿಂದ ನೀರೆರೆದು ಬೆಳೆಸಿವೆಯೆನ್ನಬಹುದು. ಇಂಥ ನೋವುಗಳು ನನ್ನನ್ನು ಕಾಡಿ ತಲ್ಲಣಗೊಳಿಸಿರದಿದ್ದರೆ ನಾನು ಇಷ್ಟು ಗಟ್ಟಿಯಾದ ಸಾಹಿತ್ಯ ಸೃಷ್ಟಿಸುತ್ತಿದ್ದಿರಲಿಲ್ಲವೇನೋ. ನೋವು, ಸಂಘರ್ಷವಿಲ್ಲದ ಜೀವನ ಅದೆಂಥ ಜೀವನ!

ನಾನುಂಡ ನೋವಿನ, ಸಂಘರ್ಷದ ಬದುಕಿನ ಒಂದು ಸಣ್ಣ ತುಣುಕಾದರೂ ಇಲ್ಲಿ ದಾಖಲಿಸದಿದ್ದರೆ ಈ ಆತ್ಮಕಥನ ಬರಹ ಅಪೂರ್ಣವಾಗುತ್ತದೆ. ನನಗೊಗ್ಗದ ನನ್ನ ಮೊದಲ ಮದುವೆ; ನನ್ನ ಮತ್ತು ಅವನ ಹೊಂದಾಣಿಕೆಯಿಲ್ಲದೆ ಮುರಿದುಹೋಗಿತ್ತು, ಹಾಗೆ ಮುರಿದ ಮದುವೆಯ ಬಗ್ಗೆ ನನಗೇನೂ ಖೇದವಿರಲಿಲ್ಲವಾದರೂ ಜನರು ನನ್ನನ್ನು ನೋಡುವ ಕಣ್ಣುಗಳಲ್ಲಿ ಮುಳ್ಳುಗಳಿದ್ದಿದ್ದವು! ನಂತರ ನಾನು ಈ ನಾಗಭೂಷಣನನ್ನು ಮೆಚ್ಚಿ ಮದುವೆಯಾದದ್ದಂತೂ ಈ ಸಮಾಜ ನನ್ನನ್ನು ಅಪರಾಧಿಯ ಕಟಕಟೆಯಲ್ಲಿ ನಿಲ್ಲಿಸಿತ್ತು, ನನ್ನದಲ್ಲದ ಜಾತಿಯ ಮತ್ತು ಈ ಮೊದಲೇ ಒಂದು ಮದುವೆಯಾಗಿ ಹೆಂಡತಿ ಮಕ್ಕಳಿದ್ದ ನಾಗಭೂಷಣನನ್ನು ನಾನು ಮದುವೆಯಾದದ್ದು ನನ್ನ ತವರಿಗೆ, ಗೆಳತಿಯರಿಗೆ, ಬಂಧುಗಳಿಗೆ ತಾಳಿಕೊಳ್ಳಲಾಗಲಿಲ್ಲ. ಎಲ್ಲರೂ ಒಮ್ಮತದಿಂದ ಸಾರಾಸಗಟಾಗಿ ನನ್ನನ್ನು ದೂರ ತಳ್ಳಿದರು. ಆದರೂ ನಾನು ಗಟ್ಟಿ ಧೈರ್ಯದಿಂದ ನಾಗಭೂಷಣನ ಕೈಹಿಡಿದು ಅವನನ್ನು ನಂಬಿ ಬಂದುಬಿಟ್ಟೆ.

ನಾನು ನನ್ನ ಬಾಳಸಂಗಾತಿಯನ್ನಾಗಿ ಈ ನಾಗಭೂಷಣನನ್ನು ಆರಿಸಿಕೊಳ್ಳುವಲ್ಲಿ ತಪ್ಪಿದ್ದು ನನ್ನ ಅರಿವಿಗೆ ಬರಲು ಹೆಚ್ಚು ಕಾಲವೇನೂ ಬೇಕಾಗಲಿಲ್ಲ. ಎರಡು ಮೂರು ವರ್ಷಗಳಲ್ಲಿಯೇ ಇವನ ಬಣ್ಣ ಬಯಲಾಗಿ ನನ್ನ ಆಯ್ಕೆಯ ತಪ್ಪಿನ ಅರಿವು ನನಗಾಗತೊಡಗಿತ್ತು. ಇವನ ಹಗಲಿರುಳಿನ ಮಿತಿಮೀರಿದ ಕುಡಿತ, ಕಚ್ಚೆ ಹರಕುತನದಿಂದಾಗಿ ನಾನು ರೋಸಿ ಹೋದೆ. ನನ್ನಲ್ಲಿ ವ್ಯವಹಾರ ಜ್ಞಾನವಿಲ್ಲ, ಜನರನ್ನು ಜಡ್ಜ್ ಮಾಡುವ ಜಾಣ್ಮೆಯಿಲ್ಲ, ಭಾವುಕತೆ ಹೆಚ್ಚಾಗಿರುವ ನನ್ನ ಮೂರ್ಖತನಕ್ಕೆ ಮದ್ದಿರಲಿಲ್ಲ. ನಾಗಭೂಷಣನನ್ನು ನಾನು ನಂಬಿದ್ದೆನಲ್ಲ, ಅದೇ ನಂಬಿಕೆ ನನ್ನ ಬದುಕಿನ ದಾರಿಯಲ್ಲಿ ಮುಳ್ಳು ಬಿತ್ತಿತ್ತು. ದಿನಾ ಜಗಳ, ಕಿರಿಕಿರಿ, ಹೊಡಿಬಡಿ ಅಂತ ಶುರುವಾಯಿತು. ಅದೇ ಹಂತದಲ್ಲಿ ಇವನಿಂದ ನನಗೆ ಎರಡು ಮಕ್ಕಳೂ ಹುಟ್ಟಿದುವು. ನನ್ನ ಮನೆಯ ಮತ್ತು ಮಕ್ಕಳ ಯಾವ ಜವಾಬ್ದಾರಿಯನ್ನೂ ಈ ನನ್ನ ಗಂಡ ಅನ್ನುವ ಮನುಷ್ಯ ತೆಗೆದುಕೊಳ್ಳಲೇ ಇಲ್ಲ! ಮನೆಯ ಖರ್ಚಿಗೆ ಹಣ ಕೊಡುವುದಿರಲಿ, ನನ್ನ ತಿಂಗಳ ಪಗಾರದಲ್ಲಿ ಪಾಲುದಾರನಾಗುತ್ತಿದ್ದ. ಆಗ ನನಗೆ ಯಾರ ಆಸರೆಯೂ ಇರಲಿಲ್ಲ! ನನ್ನನ್ನು ಹೊಡೆಯಲು ಅವನಿಗೆ ಕೈಗಳ ಜೊತೆಗೆ ಕಟ್ಟಿಗೆ, ಸೊಂಟದ ಬೆಲ್ಟುಗಳೂ ಸಾಲುತ್ತಿರಲಿಲ್ಲ. ನನ್ನ ಅಳು ಅರಣ್ಯರೋದನವಾಗುತ್ತಿತ್ತು. ಮಕ್ಕಳು ಹೆದರಿ ಕಂಗಾಲಾಗಿ ಮೂಲೆಯಲ್ಲಿ ಅಡಗಿಕೊಳ್ಳುತ್ತಿದ್ದವು.

ಒಂದೊಂದಾಗಿ ನನ್ನ ಒಡವೆ ವಸ್ತು ಅಂತ ನನ್ನಲ್ಲಿದ್ದ ಬಂಗಾರ, ಹಣ ಎಲ್ಲವೂ ದೋಚಿಕೊಂಡು, ನಾನು ಪೂರಾ ಖಾಲಿಯಾದ ಮೇಲೆ ಒಂದು ದಿನ ಅವನು ನನ್ನನ್ನೂ ಮಕ್ಕಳನ್ನೂ ಬಿಟ್ಟು ತನ್ನ ಮೊದಲ ಹೆಂಡತಿಯ ಮನೆ ಸೇರಿಬಿಟ್ಟ ಮಾರಾಯ. ನನ್ನ ದೈಹಿಕ, ಮಾನಸಿಕ ಚಿತ್ರಹಿಂಸೆಯೇನೋ ಒಂದಿಷ್ಟು ಕಮ್ಮಿಯಾದಂತಾಗಿ ನೆಮ್ಮದಿಯ ಉಸಿರುಬಿಟ್ಟು ನಿರುಮ್ಮಳಾದೆ. ಆದರೂ ಎಷ್ಟೋ ರಾತ್ರಿ ಮನೆಯ ಬಾಗಿಲು ಸದ್ದಾದರೆ, ಮುಂದಿನ ರಸ್ತೆಯ ಮೇಲೆ ಸ್ಕೂಟರಿನ ಆವಾಜಾದರೆ ಸಾಕು ಮತ್ತೆ ಅವನೇ ಬಂದನೇನೋ ಅಂತ ಗಾಬರಿಯಾಗಿ ಎದೆ ಥವಗುಟ್ಟುತ್ತಿತ್ತು. ಅಸಹಾಯಕತೆಯಿಂದ ಕಂಗಾಲಾಗಿ ಮಕ್ಕಳನ್ನು ಅವುಚಿಕೊಂಡು ಇಡೀ ರಾತ್ರಿ ಹೆದರಿಕೆಯಲ್ಲೇ ಕಳೆಯುತ್ತಿದ್ದೆ. ಆಗೆಲ್ಲ ನಾನು ಅನುಭವಿಸಿದ್ದ ನೋವು, ಸಂಕಟ, ಚಿತ್ರಹಿಂಸೆ, ಅಪಮಾನ, ಒಂಟಿತನಗಳನ್ನು ನೆನೆದರೆ ಅಬ್ಬ! ನಾನು ಅದು ಹೇಗೆ ಈ ಮಕ್ಕಳನ್ನು ಉಡಿಯಲ್ಲಿ ಕಟ್ಟಿಕೊಂಡು ಬದುಕಿದೆ ಅಂತ ಆಶ್ಚರ್ಯವಾಗುತ್ತದೆ.

ಗಂಡನಿಗೆ ಗುಲಾಮಳಾಗುವ ಅಥವಾ ಸಮಸ್ಯೆಗಳೊಂದಿಗೆ ರಾಜಿ ಮಾಡಿಕೊಳ್ಳುವ ಗುಣ ನನ್ನಲ್ಲಿ ಇರಲೇಇಲ್ಲವಲ್ಲ. ಹೀಗಾಗಿ ನನ್ನ ದಾಂಪತ್ಯ ಬದುಕಿಗೆ ಸುಖ, ಶಾಂತಿ, ನೆಮ್ಮದಿಗಳು ದಕ್ಕಲೇಯಿಲ್ಲ! ನನಗೆ ನನ್ನ ಕಾಲೇಜಿನ ನೌಕರಿ (ಕೆಲಸ) ಇತ್ತು ಅಂತ ನಾನೂ ನನ್ನ ಮಕ್ಕಳೂ ಬೀದಿಗೆ ಬೀಳಲಿಲ್ಲ ಅಷ್ಟೇ. ಇಲ್ಲದಿದ್ದರೆ ನನ್ನ ಗತಿ ಏನಾಗುತ್ತಿತ್ತೋ....

ಇದೆಲ್ಲ ದಾಟಿದ ನಂತರ ಅಂದರೆ ಎಂಬತ್ತರ ದಶಕದಿಂದೀಚೆಗೆ ನಾನು ಬಂಡಾಯದ ಬರಹಕ್ಕಿಳಿದೆ. ಯಾರ ಹಂಗೂ ಇಲ್ಲದೆ ಶೋಷಣೆಯ ವಿರುದ್ಧ ದಂಗೆಯ ಬರವಣಿಗೆ ಶುರು ಮಾಡಿದೆ, ಒಂದು ರೀತಿಯಿಂದ ನನ್ನ ಗಂಡನೆನ್ನಿಸಿಕೊಂಡಿದ್ದ ಆ ಮನುಷ್ಯ ನಮ್ಮಿಂದ ದೂರ ಸರಿದದ್ದೇ ನನ್ನ ದಿಟ್ಟತನದ ಬರಹಕ್ಕೆ ಅನುಕೂಲವಾಯಿತೆನ್ನಬಹುದು. ಮುಂದೆ ಕೆಲವೇ ವರ್ಷಗಳಲ್ಲಿ ನಾಗಭೂಷಣ, ಆರೋಗ್ಯ ಕೆಟ್ಟು ಹಾಸಿಗೆ ಹಿಡಿದದ್ದು ಗೊತ್ತಾದರೂ ನಾನು ಇದೇ ಊರಲ್ಲಿದ್ದ ಅವನ ಮನೆಗೆ ಹೋಗಲಿಲ್ಲ, ಮಕ್ಕಳೂ ಹೋಗಲು ಇಷ್ಟಪಡಲಿಲ್ಲ, ಮುಂದೊಂದು ದಿನ ಅವನು ಸತ್ತ ಸುದ್ದಿ ಬಂದಾಗಲೇ ನಾನು, ನನ್ನ ಮಗನೂ ಹೋಗಿ ಅವನ ಗೋರಿಗೆ ಮೂರು ಬೊಗಸೆ ಮಣ್ಣು ಹಾಕಿ ನಮ್ಮ ಋಣ ತೀರಿಸಿಕೊಂಡು ಬಂದೆವು.

(ಸಶೇಷ)

ಎನ್.ಕೆ. ಹನುಮಂತಯ್ಯ


ಎನ್.ಕೆ. ಬಹಳ ವಿಶಿಷ್ಟವಾದ ದಲಿತ ಸಂವೇದನೆಯ ಲೇಖಕ. ಸಿದ್ದಲಿಂಗಯ್ಯ, ದೇವನೂರು, ಎನ್.ಹನುಮಂತಯ್ಯ, ಮಾಲಗತ್ತಿ ಮುಂತಾದವರದು ಮೊದಲ ತಲೆಮಾರು, ಮೊಗಳ್ಳಿ, ಕುಕ್ಕರಹಳ್ಳಿ, ಜಾಹ್ನವಿ ಮುಂತಾದವರದು ಎರಡನೆಯ ತಲೆಮಾರು ಎನ್ನುವುದಾದರೆ, ದು. ಸರಸ್ವತಿ, ಸುಬ್ಬು ಹೊಲೆಯಾರ, ಎನ್.ಕೆ. ಹನುಮಂತಯ್ಯ ಅನಸೂಯಾ ಕಾಂಬಳೆ ಇವರದು ಮೂರನೆಯ ತಲೆಮಾರು ಎನ್ನಬಹುದು.



ಎನ್.ಕೆ. ಹನುಮಂತಯ್ಯ ಒಮ್ಮೆ ಕನ್ನಡ ವಿಶ್ವವಿದ್ಯಾಲಯದಲ್ಲಿ ದಲಿತ ಚಳವಳಿಯ ಮೇಲೆ ಒಂದು ಉಪನ್ಯಾಸ ಮಾಡಿದರು. ದಲಿತ ಚಳವಳಿಯ ಸದ್ಯದ ಸ್ಥಿತಿಯನ್ನು ಅವರು ನವಿಲಿನ ಒಂದು ರೂಪಕದಲ್ಲಿ ಹೇಳಿದರು. ಅವರ ಪ್ರಕಾರ ದಲಿತ ಚಳವಳಿ, ಒಂದು ಕಾಲಕ್ಕೆ ಕರ್ನಾಟಕದ ಯಾವುದೇ ಮೂಲೆಯಲ್ಲಿ ದಲಿತರ ಮೇಲೆ ಹಲ್ಲೆಯಾದರೂ, ಅಲ್ಲಿಗೆ ಹೋಗಿ ಕ್ರಾಂತಿಯ ಮೊಟ್ಟೆಗಳನ್ನಿಟ್ಟು ಬರುವ ನವಿಲಿನ ಕೆಲಸವನ್ನು ಮಾಡುತ್ತಿತ್ತು. ನಂತರ ಆ ಮೊಟ್ಟೆಗಳು ಒಡೆದು ಅಲ್ಲಿ ಹೊಸ ನವಿಲುಗಳು ಹುಟ್ಟುತ್ತಿದ್ದವು; ಕ್ರಾಂತಿಯನ್ನು ಮುಂದುವರೆಸುತ್ತಿದ್ದವು. ಈಗ ಮೊಟ್ಟೆಯಿಡುವ ಆ ನವಿಲುಗಳೆಲ್ಲ ಧಣಿಗಳ ಖರೀದಿಗೆ ಒಳಗಾಗಿವೆ. ಅವು ಕಸಾಯಿಖಾನೆಯಲ್ಲಿ ತಮ್ಮ ಪುಕ್ಕ ತರಿಸಿಕೊಂಡು ಮಾಂಸಕ್ಕಾಗಿ ಮಾರಾಟಗೊಳ್ಳುತ್ತಿವೆ.

ಈ ರೂಪಕದಲ್ಲಿ ವರ್ತಮಾನವನ್ನು ವಿವರಿಸುವಾಗ ಅವರಲ್ಲಿ ವಿಷಾದವಿತ್ತು. ಒಂದುಕ್ಷಣ ಭಾವುಕರಾಗಿ ಅವರ ಗಂಟಲು ಬಿಗಿದು ಮಾತು ಸಹ ನಿಂತಿತು. ಈ ಪ್ರಸಂಗವು ಹನುಮಂತಯ್ಯ ಅವರ ವ್ಯಕ್ತಿತ್ವದ ಸ್ವರೂಪವನ್ನು ಮಾತ್ರವಲ್ಲ, ಅವರ ಬರೆಹದ ಪ್ರಮುಖ ಲಕ್ಷಣವನ್ನೂ ಹೇಳುವಂಥದ್ದಾಗಿದೆ. ಬಹುಶಃ ಅವರ ಬರೆಹದ ಎರಡು ಶಕ್ತಿಗಳೆಂದರೆ ಭಾವನಾತ್ಮಕ ತೀವ್ರತೆ ಮತ್ತು ರೂಪಕಗಳ ನುಡಿಗಟ್ಟು. ಈ ಶಕ್ತಿಗಳು ಈಚೆಗೆ ಬರೆಯುತ್ತಿರುವ ಕವಿಗಳಲ್ಲೇ ಅವರನ್ನು ವಿಶಿಷ್ಟರನ್ನಾಗಿಸಿವೆ. ತಮ್ಮ ಕವಿತೆಗಳಲ್ಲಿ ಎನ್‌ಕೆ ಹುಟ್ಟಿಸುತ್ತಿರುವ ಹೊಸಭಾಷೆಯು ಓದುಗರ ಗ್ರಹಿಕೆಗಳನ್ನು ಭಗ್ನಗೊಳಿಸಿ, ಅವರ ಪ್ರಜ್ಞೆಯನ್ನು ತಟ್ಟನೆ ಹೊಸವಿಸ್ತಾರಕ್ಕೆ ಹಿಗ್ಗಿಸುವಷ್ಟು ಪ್ರಭಾವಶಾಲಿಯಾಗಿದೆ. ನೋಡಲು ಸರಳವೆಂದು ತೋರುವ ಅವರ 'ಅವ್ವ ನಿಂತೇಯಿದ್ದಾಳೆ' ಕವನ ಗಮನಿಸಬೇಕು. ಅದು ನಮ್ಮನ್ನು ಅಪ್ಪಳಿಸುವಂತೆ ಆವರಿಸಿಕೊಳ್ಳುತ್ತದೆ.

ಎನ್‌ಕೆ ಬಹಳ ವಿಶಿಷ್ಟವಾದ ದಲಿತ ಸಂವೇದನೆಯ ಲೇಖಕ. ಸಿದ್ದಲಿಂಗಯ್ಯ, ದೇವನೂರು, ಎನ್.ಹನುಮಂತಯ್ಯ ಮಾಲಗತ್ತಿ ಮುಂತಾದವರದು ಮೊದಲ ತಲೆಮಾರು, ಮೊಗಳ್ಳಿ, ಕುಕ್ಕರಹಳ್ಳಿ, ಜಾಹ್ನವಿ ಮುಂತಾದವರದು ಎರಡನೆಯ ತಲೆಮಾರು ಎನ್ನುವುದಾದರೆ, ದು. ಸರಸ್ವತಿ, ಸುಬ್ಬು ಹೊಲೆಯಾರ, ಎನ್.ಕೆ. ಹನುಮಂತಯ್ಯ ಅನಸೂಯಾ ಕಾಂಬಳೆ ಇವರದು ಮೂರನೆಯ ತಲೆಮಾರು ಎನ್ನಬಹುದು. ಗಮನಿಸಬೇಕಾದ್ದು ಈ ಮೂರನೆಯ ತಲೆಮಾರು ಲೋಕವನ್ನು ಗ್ರಹಿಸುತ್ತಿರುವ ಮತ್ತು ಬರೆಹದಲ್ಲಿ ಕಂಡರಿಸುತ್ತಿರುವ ಪರಿಯ ಭಿನ್ನತೆ. ಅದು ದಲಿತ ಸಾಹಿತ್ಯ ಪರಂಪರೆಯ ಶಕ್ತಧಾರೆಯನ್ನು ಮುಂದುವರೆಸುತ್ತಿದೆ ಮಾತ್ರವಲ್ಲ, ಅದಕ್ಕೆ ಹೊಸವೊಗಗಳನ್ನು ಜೋಡಿಸಿ ಮುಂದುವರೆಸುತ್ತಿದೆ. ಆದರೂ 'ದಲಿತ ಸಂವೇದನೆ' ಎಂಬ ಪರಿಭಾಷೆಯಲ್ಲಿ ಎನ್‌ಕೆ ಅವರ ಬರೆಹವನ್ನು ಹಿಡಿಯುವುದು ಕಷ್ಟವೆನಿಸುತ್ತದೆ. ಅದು ದಲಿತ ಸಂವೇದನೆಯನ್ನು ವಿಶ್ವಪ್ರಜ್ಞೆಯ ವಿಶಾಲ ಭಿತ್ತಿಯಲ್ಲಿಟ್ಟು ನೋಡುವ ಅಥವಾ ಲೋಕಕಟ್ಟುವ ಕಾಳಜಿಗಳನ್ನೂ ದಲಿತ ಭಿತ್ತಿಯಲ್ಲಿ ಅಳವಡಿಸುವ ಅನನ್ಯವಾದ ಕಾಯಕದಲ್ಲಿ ತೊಡಗಿಕೊಂಡಿದೆ.



ಹೊನ್ನಾವರದ ಸರ್ಕಾರಿ ಪದವಿ ಕಾಲೇಜಿನಲ್ಲಿ ಕನ್ನಡ ಅಧ್ಯಾಪಕರಾಗಿರುವ ಎನ್‌ಕೆ, ಈತನಕ 'ಹಿಮದ ಹೆಜ್ಜೆ' (1997), 'ಚಿತ್ರದ ಬೆನ್ನು' (2006) ಎಂಬ ಕವನ ಸಂಕಲನಗಳನ್ನೂ, 'ಎಂ.ವಿ.ವಾಸುದೇವರಾವ್' (2002) ಎಂಬ ವ್ಯಕ್ತಿಚಿತ್ರವನ್ನೂ, 'ಜಲಸ್ಥಂಭ' (2003) ಎಂಬ ನಾಟಕವನ್ನೂ, 'ಕ್ರಾಂತಿಯ ವಸಂತ' (2008) ಎಂಬ ಜೀವನ ಚರಿತ್ರೆಯನ್ನೂ ಪ್ರಕಟಿಸಿದ್ದಾರೆ. ಅಂಬೇಡ್ಕರ್ ವೈಚಾರಿಕತೆ, ಬುದ್ಧನ ಕರುಣೆ, ಅಲ್ಲಮನ ಬೆಡಗು, ಲಂಕೇಶರ ತಳಮಳ–ಇವೆಲ್ಲವೂ ಅವರಲ್ಲಿ ಸಂಗಮಗೊಂಡಂತಿದೆ. ಅವರ ಬರೆಹದಲ್ಲಿ ಅಪಮಾನಕ್ಕೆ ಲೋಕದ ಕ್ರೌರ್ಯಕ್ಕೆ ತೀಕ್ಷ್ಣವಾಗಿ ಮಿಡಿಯುವ ಗುಣವೂ ಇದೆ; ಲೋಕದ ಚೆಲುವಿಗೆ ವಿಸ್ಮಯಪಡುವ ಮತ್ತು ಮೇರೆಮೀರುವಂತೆ ಸಂಭ್ರಮಿಸುವ ಗುಣವೂ ಇದೆ.

ಆದರೆ ಹೃದಯದ ಮೂಲಕವೇ ಲೋಕದ ವಿದ್ಯಮಾನಗಳನ್ನು ನೋಡುವುದು ಮತ್ತು ಪ್ರತಿಕ್ರಿಯಿಸುವುದು ಎನ್‌ಕೆ ಬರೆಹದ ಸ್ವಭಾವವಾಗಿದೆ. ಇದರ ಒಂದು ಸಮಸ್ಯೆಯೆಂದರೆ, ಕೊಚ್ಚಿಹೋಗುವಂತಹ ಭಾವುಕ ತೀವ್ರತೆಯಲ್ಲಿ ಬೌದ್ಧಿಕತೆಯನ್ನು ಬಿಟ್ಟುಕೊಡುವುದು. ಇದರಿಂದ ಅವರ ಬರೆಹದ ರಾಜಕೀಯ ಪ್ರಜ್ಞೆ ಕೆಲಮಟ್ಟಿಗೆ ಮರುಕಳಿಸುವುದುಂಟು. ಇದಕ್ಕೆ ಸಾಕ್ಷಿ, ಕಳೆದ ವರ್ಷ ಅಮೆರಿಕೆಯ ಅಧ್ಯಕ್ಷೀಯ ಚುನಾವಣೆಯಲ್ಲಿ ಬರಾಕ್ ಹುಸೇನ್ ಒಬಾಮಾ ಗೆದ್ದಾಗ ಎನ್‌ಕೆ ಬರೆದ ಒಂದು ಕವನ. ಅದರಲ್ಲಿ ಒಬಾಮನನ್ನು ಕಪ್ಪುಚಂದಮಾಮನೆಂದೂ ಕಪ್ಪುಜನರ ಬಾಳಿನ ಕತ್ತಲೆಯನ್ನು ಬೆಳಗಲು ಅವನು ಬಂದಿದ್ದಾನೆಂದೂ ಸಂಭ್ರಮದ ಬಣ್ಣನೆಯಿತ್ತು. ಈ ಸಂಭ್ರಮದ ಹಿಂದಿನ ಸದಾಶಯವನ್ನು ಅರ್ಥಮಾಡಿಕೊಳ್ಳಬಹುದು. ಆದರೆ ಅದು ಲೋಕವಾಸ್ತವವನ್ನು ಭಾವುಕತೆಯಲ್ಲಿ ಗ್ರಹಿಸಿದ ಪರಿಣಾಮವೂ ಆಗಿದೆ. ದಲಿತ ಚಳವಳಿಯ ಪತನಕ್ಕೆ ಪಡುವ ವಿಷಾದವಿರಲಿ, ಕಪ್ಪುವರ್ಣೀಯನೊಬ್ಬ ಅಧಿಕಾರಕ್ಕೆ ಬಂದನೆಂದು ಪಡುವ ಸಂಭ್ರಮವಿರಲಿ, ಭಾವಾವೇಶದಲ್ಲಿ ಚಿಂತನಶೀಲತೆಯನ್ನು ಕೈಬಿಡುವ ಎಲ್ಲ ಬರೆಹವೂ ಜಿಜ್ಞಾಸೆಯ ಚೂಪುತನಕ್ಕೆ ಎರವಾಗುತ್ತದೆ. ಆದರೆ ಎನ್‌ಕೆ ಅರಿವುಗೆಡದ ತನ್ಮಯತೆಯಲ್ಲಿ ಬರೆಯುವ ಗಳಿಗೆಗಳು ಬೇಕಾದಷ್ಟು ಇವೆ. ಅಲ್ಲಿ ಅವರು ಬಾಳಿನ ವೈರುಧ್ಯಗಳನ್ನು ಅನೇಕ ಸರಳ ರಚನೆಗಳಲ್ಲಿ ತಾಳ್ಮೆಯಿಂದ ಪರಿಣಾಮಕಾರಿಯಾಗಿ ಹಿಡಿದಿಡುತ್ತಾರೆ. "ಚಮ್ಮಾರನ ಜೋಡುಮೆಟ್ಟ ಕಮ್ಮಾರನ ಖಡ್ಗ ಹಿಡಿದು ಕಾಯುತಾನಲ್ಲೊ ರಾಜ ಕಾಯುತಾನಲ್ಲೊ" ಎಂದು ಆರಂಭವಾಗುವ ಒಂದು ಪುಟ್ಟ ಪದ್ಯವನ್ನು ಗಮನಿಸಬೇಕು. ಇಲ್ಲಿ ವರ್ಗಗಳ ನಡುವಣ ವೈರುಧ್ಯಗಳನ್ನು ವಾಚ್ಯವಾಗಿಸದೆ ಅದರ ಸಂಕೀರ್ಣತೆಗೆ ಮುಕ್ಕಾಗದಂತೆ ಹಿಡಿಯುವ ಯತ್ನವಿದೆ.

ಎನ್‌ಕೆ ಅವರ ಕವನಗಳು ಅನುಭವ ಚಿಂತನೆ ದರ್ಶನಗಳನ್ನು ರೂಪಕಗಳ ಮೂಲಕವೇ ವ್ಯಕ್ತಪಡಿಸುವ ಹಟತೊಟ್ಟಂತೆ ರಚನೆಗೊಳ್ಳುತ್ತವೆ. ನಮ್ಮ ಕಾಲದಲ್ಲಿ ಹೀಗೆ ರೂಪಕಗಳನ್ನೇ ಕವಿತೆಯ ಭಾಷೆಯಾಗಿಸಿಕೊಂಡಿರುವ ಕವಿಪ್ರತಿಭೆಗಳು ವಿರಳ. ಈ ರೂಪಕ ಸೃಷ್ಟಿಗೆ ಬೇಕಾದ ಪ್ರಚಂಡ ಕಲ್ಪನಾ ಪ್ರತಿಭೆಯೂ ಅವರಲ್ಲಿದೆ. ಆದರೆ ಈ ರೂಪಕಗಳ ವ್ಯಸನವೇ ಅನೇಕ ಕಡೆ ಅವರ ಕವಿತೆಯನ್ನು ಅಸ್ಪಷ್ಟತೆಗೆ ತಳ್ಳುತ್ತಿರುವ, ಕವಿತೆಯಲ್ಲಿ ಸಹಜವಾಗಿ ನೆಲೆಸಬೇಕಾದ ಸರಳತೆಯನ್ನು ಕಳೆಯುತ್ತಿರುವ ಸಾಧ್ಯತೆಗೂ ದೂಡಿದಂತಿದೆ. 'ಆ ಒಂದು ಹನಿ ಮಳೆ' ಹಾಗೆ ಪ್ರತಿಮೆಗಳ ಕಗ್ಗಾಡಲ್ಲಿ ಸಿಲುಕಿರುವ ಕವನ. ಇದಕ್ಕೆ ಹೋಲಿಸಿದರೆ, 'ಏಡಿ' ಮುಂತಾದ ಸಹಜೋಕ್ತಿಯಲ್ಲಿ ಹುಟ್ಟಿದ ಕವಿತೆಗಳೇ ಹೆಚ್ಚು ಅರ್ಥವತ್ತಾಗಿವೆ ಅನಿಸುತ್ತದೆ. ಎನ್‌ಕೆ ಅವರ ಕಾವ್ಯದ ರೂಪಕಗಳಲ್ಲಿ ಕೆಲವು ಚಿತ್ರಗಳು ಮತ್ತೆಮತ್ತೆ ಬರುತ್ತವೆ. ಉದಾಹರಣೆಗೆ, ಜಾತಿಕ್ರೌರ್ಯದಲ್ಲಿ ನಲುಗಿರುವ ದಲಿತ ಸಮುದಾಯದ ಚಿತ್ರವನ್ನು ಹಿಡಿಯಲು ಕವಿ ಬಳಸುವ ಮಲಿನ ನೀರು, ಕೊಳೆತ ಶವ, ಸುಡುವ ಬೆಂಕಿ ಇತ್ಯಾದಿ. ಅಪಾರ ದುಗುಡ ಮತ್ತು ವಿಷಾದ ತುಂಬಿರುವ ಈ ರೂಪಕ ಚಿತ್ರಗಳು ಕೆಲವೊಮ್ಮೆ ದಿಗ್ಭ್ರಮೆ ಬರಿಸುವಂತೆ ಭೀಭತ್ಸವಾಗಿವೆ. ಹೊರಬರಲು ಸಾಧ್ಯವೇ ಇಲ್ಲವೇನೊ ಎಂಬ ಹತಾಶೆಯ ಉಸಿರುಗಟ್ಟಿದ ಜಗತ್ತೊಂದು ಅವರ ಬರೆಹದಲ್ಲಿ ಒಡಮೂಡುತ್ತದೆ. ಇದು ಲೇಖಕರ ಅತಿಸೂಕ್ಷ್ಮತೆಯಿಂದ ಹುಟ್ಟಿರುವ ಉತ್ಪ್ರೇಕ್ಷಿತ ಚಿತ್ರವೊ ಅಥವಾ ದಲಿತ ಸಮಾಜದ ವೇದನಗಳಿಗೆ ನಾವು ಇನ್‌ಸೆನ್ಸಿಟಿವ್ ಆಗಿರುವುದರಿಂದ ನಮಗದು ಅತಿ ಅನಿಸುತ್ತದೆಯೊ ಕಾಣೆ.

'ಚಿತ್ರದ ಬೆನ್ನು' ಕವನ ಸಂಕಲನವು ಕನ್ನಡದ ಮಹತ್ವದ ಕೃತಿಗಳಲ್ಲಿ ಒಂದು. ಇದರಲ್ಲಿರುವ 37 ಕವನಗಳು ಕನ್ನಡದ ಝಗಝಗಿಸುವ ಪ್ರತಿಭೆಯೊಂದನ್ನು ಓದುಗರ ಅನುಭವಕ್ಕೆ ತರುತ್ತವೆ. ಪ್ರತಿಪದ್ಯವೂ ಒಂದೊಂದು ಬಗೆಯ ಪ್ರಯೋಗವನ್ನು ಮಾಡಿರುವಂತೆ ಇಲ್ಲಿನ ಅಭಿವ್ಯಕ್ತಿಯ ವೈವಿಧ್ಯವಿದೆ. ಪಲ್ಲವಿಯಂತೆ ಅನುರಣನಗೊಳ್ಳುವ ಒಂದು ಸಾಲು ಕವಿತೆಯಲ್ಲಿ ಮತ್ತೆಮತ್ತೆ ಬಂದು ಹೊಸ ಅರ್ಥವಂತಿಕೆ ಹುಟ್ಟಿಸುವ ಪರಿಯನ್ನು ಗಮನಿಸಬಹುದು. "ಕಿರುಬೆರಳಲಿ ಕಡಲನೆತ್ತಿ ಹಣೆಬೊಟ್ಟನಿಟ್ಟು ಗಿರಿಯ ಉಗುರಲೆತ್ತಿ ಕಿವಿಯೋಲೆಯಿಟ್ಟು" ಎಂಬ ಮಹೋಪಮೆಗಳನ್ನು ಎನ್‌ಕೆ ಸಹಜವಾಗಿ ಹುಟ್ಟಿಸಬಲ್ಲರು. ವಾಸ್ತವದಾಚೆಯ ಯಾವಯಾವುದೋ ಅರ್ಥಗಳಿಗೆ ಕೈಚಾಚುವ ಅವರ ಅನೇಕ ಕವಿತೆಗಳು ಮಹತ್ವಾಕಾಂಕ್ಷೆಯಿಂದ ಕೂಡಿವೆ. ಅಲ್ಲಿ ಅಲ್ಲಮನದೂ ಎಚ್.ಎಸ್. ಶಿವಪ್ರಕಾಶರದೂ ಇನ್ನೂ ಅರಗದ ಪ್ರಭಾವವೂ ಇದ್ದಂತೆ ಭಾಸವಾಗುತ್ತದೆ. 'ಗುರುವಿನ ಹೆಣ' 'ಎರೆಹುಳದ ಬಾಯೊಳಗೆ ಕರಗುವ ಆನೆಗಳು' 'ಯೋಗಿಯ ಕಣ್ಣಲ್ಲಿ ಚಿಗುರುವ ಏಣಿ' ಇತ್ಯಾದಿ ಕವನಗಳು ಇಂತಹವು. ಬೆಡಗಿನ ಈ ಪರಿಭಾಷೆಯು ಯಾಕೊ ಕವನಗಳ ಮೇಲೆ ಭಾರವಾಗಿ ಹೇರಿಕೊಂಡಿದೆ ಅನಿಸುತ್ತದೆ. ಯು.ಆರ್. ಅನಂತಮೂರ್ತಿಯವರು ಹನುಮಂತಯ್ಯ "ಇದು ಸಾಮಾಜಿಕ, ಇದು ವೈಯಕ್ತಿಕ, ಇದು, ಆಧ್ಯಾತ್ಮಿಕ ಎಂದು ವಿಂಗಡಿಸಲಾರದಂತೆ" ಬರೆಯುತ್ತಿದ್ದಾರೆ ಎಂದು ಹೇಳುತ್ತಾರೆ. ಇದು ನಿಜ. ಆದರೆ ಈ ಹಲವು ಆಯಾಮಗಳ ಏಕೀಭವಿಸುವಿಕೆಯಲ್ಲಿ ಯಾವುದೊ ಒಂದು ಸಂಗತಿ (ಚಿಂತನಶೀಲತೆ) ಮಿಸ್ಸಿಂಗ್ ಎಂದು ಕೂಡ ಅನಿಸುತ್ತಿದೆ.

ಬೂಸಾ ಚಳವಳಿ ಖ್ಯಾತಿಯ ಬಸವಲಿಂಗಪ್ಪನವರ ಬದುಕಿನ ಮೇಲೆ ಎನ್‌ಕೆ ಬರೆದಿರುವ ಪುಸ್ತಕವು, ಒಂದು ವಿಶಿಷ್ಟ ಬಗೆಯ ಜೀವನ ಚರಿತ್ರೆ. ಇದನ್ನು ಅವರು ಕರ್ನಾಟಕದ ದಲಿತರ ಆತ್ಮಚರಿತ್ರೆಯಂತೆ ಕೂಡ ಬರೆಯಲು ಯತ್ನಿಸಿದ್ದಾರೆ. ಇದಕ್ಕಾಗಿ ಚರಿತ್ರಕಾರರ ಅಲಿಪ್ತ ಧಾಟಿಗೆ ಬದಲಾಗಿ, ಆತ್ಮಾವಲೋಕನದ ಆಪ್ತ ವಿಧಾನವೊಂದನ್ನು ಬಳಸಿದ್ದಾರೆ. ಇದರಿಂದ ಈ ಕೃತಿಯು, ಮಾಹಿತಿಗಾಗಿ ಓದುವುದಕ್ಕಿಂತ, ಅದರಲ್ಲಿ ಲಾವಾರಸದಂತೆ ಹರಿದಿರುವ ಲೇಖಕರ ತಳಮಳಗಳಿಗಾಗಿ ಓದುವಂತಹ ರೂಪ ಪಡೆದುಕೊಂಡಿದೆ. ಇದರ ಆರಂಭದಲ್ಲಿ ಲೇಖಕರು, "ಹಗಲುಇರುಳಿನ ಬಲೆಯೊಳಗೆ ಪಕ್ಕದಲ್ಲೇ ಬೇಟೆಗಾರರ ಒಲೆ ಉರಿಯುತ್ತಿದೆ. ಈಗ ಹಾಡಲೇ ಬೇಕು ಈ ಪುಟ್ಟ ಕೊಕ್ಕಿನಲೇ ಬೇಟೆಗಾರರು ನಿದ್ರಿಸುವಂತೆ, ಈಗ ಈ ಪುಟ್ಟ ಕೊಕ್ಕನೇ ಖಡ್ಗವಾಗಿಸಬೇಕು ಬಲೆ ಹರಿದು ಬಯಲ ಸೇರುವಂತೆ" ಎಂದು ಹೇಳಿಕೊಳ್ಳುವುದುಂಟು. ಇದೊಂದು ಬಗೆಯಲ್ಲಿ ಬರೆಹದ ಉದ್ದೇಶದ ಘೋಷದಂತೆಯೂ ಇದೆ. ಇದು, ದಮನಕಾರಿ ಸಮಾಜವೊಂದರಲ್ಲಿ ಬದಲಾವಣೆ ಬಯಸುವ ಎಲ್ಲರಿಗೂ ಸಂಘರ್ಷ ಅನಿವಾರ್ಯವೆಂದು ನಂಬಿರುವ ಪರಿಯನ್ನು ಸೂಚಿಸುತ್ತಿರಬಹುದು. ವಿಶೇಷವೆಂದರೆ ಹನುಮಂತಯ್ಯನವರಲ್ಲಿ ಮತ್ತೆಮತ್ತೆ ಬರುವ ಹಕ್ಕಿಗಳ ರೂಪಕ. ಬಲೆಗೆ ಸಿಕ್ಕ ಹಕ್ಕಿಗಳು ಸತ್ತಂತೆ ನಟನೆ ಮಾಡಿ ಇಡೀ ಬಲೆಯನ್ನೇ ಹೊತ್ತುಕೊಂಡು ಹಾರಿಹೋಗುವ ಜನಪ್ರಿಯ ಕತೆಯೊಂದಿದೆ. ಅದು ಸಾಮುದಾಯಿಕ ಕ್ರಿಯಾಶೀಲತೆಯನ್ನು ಸೂಚಿಸುವಂತಹ ರೂಪಕ ಕತೆ. ಆದರೆ ಇಲ್ಲಿ ಬಲೆಯನ್ನು ಹರಿದು ಬಯಲನ್ನು ಸೇರುವ ಆಶಯವನ್ನು ವ್ಯಕ್ತಪಡಿಸುತ್ತಿರುವುದು ಒಂಟಿ ಹಕ್ಕಿ. ಇದು ಏಕಾಂಗಿ ಹೋರಾಟದ ರೂಪಕವೊ ಹೊಸತಲೆಮಾರಿನ ದಲಿತರಲ್ಲಿ ಸಾಮುದಾಯಕ ಪ್ರಜ್ಞೆಯೊಳಗೆ ನಂಬಿಕೆಯೇ ಕಳೆದುಹೋಗಿರುವ ದ್ಯೋತಕವೊ ತಿಳಿಯುತ್ತಿಲ್ಲ. ಒಬಾಮಾ ಕುರಿತ ಪದ್ಯವಾಗಲಿ, ಬಸವಲಿಂಗಯ್ಯನವರನ್ನು ಕುರಿತು 'ಕ್ರಾಂತಿಯ ವಸಂತ' ಎಂದು ಕರೆಯುವಿಕೆಯನ್ನಾಗಲಿ, ಈ ಹಿನ್ನೆಲೆಯಲ್ಲಿ ಅರ್ಥಮಾಡಿಕೊಳ್ಳಬೇಕಿದೆ.

'ಕ್ರಾಂತಿಯ ವಸಂತ' ಕೃತಿಯ ಕೊನೆಯು ಲೇಖಕರ ಆರ್ತವಾದ ಆಶಯಗಳಿಂದ ಕೂಡಿದೆ. "ನಾನು ನಿಂತ ಹೆಣನಾತದ ನೀರಿನಿಂದ ಹಾರಿದ್ದಾಯ್ತು. ಕ್ರಾಂತಿಯ ಬೆಳಕಿನ ರೆಕ್ಕೆ ನನ್ನ ತೋಳುಗಳಲ್ಲಿ ಮೂಡಿ ಸಾವಿನಿಂದ ತಪ್ಪಿಸಿಕೊಂಡದ್ದಾಯ್ತು. ಆ ಸಾವು ಸಾವಲ್ಲ ಕೊಲೆ. ಅಂಥ ಕೊಲೆಯಿಂದ ಕಾಪಾಡಿದ ಕ್ರಾಂತಿಗೆ ಕೈಮುಗಿಯುತ್ತೇನೆ. ಈಗ ನಾನಿರುವ ಸ್ಥಳದಲ್ಲಿ ಎಷ್ಟೊಂದು ಜನರಿದ್ದಾರೆ! ಎಲ್ಲರೂ ತಮಗರಿವಿದ್ದೊ ಇಲ್ಲದೆಯೊ ಕುಲದ ಕುಲುಮೆಗೆ ಬಿದ್ದ ಕಣ್ಣು ಕಿವಿಮೂಗು ಎಲ್ಲವನ್ನೂ ನೀಗಿಕೊಂಡು ಹೆಳವರಾಗುತ್ತಿದ್ದಾರೆ"; ಇಂತಹ ದಾರುಣ ಸ್ಥಿತಿಯನ್ನು ಕವಿ ಕವನಗಳಲ್ಲೂ ಚಿತ್ರಿಸುವುದುಂಟು. "ಕ್ರಾಂತಿ ಎಂದರೆ ಹಿಂಸೆಯಲ್ಲ ಬದಲಾವಣೆ. ಒಣಮರದ ಚಿಗುರು ಕ್ರಾಂತಿ. ಬತ್ತಿದ ಕೆರೆಗೆ ನೀರು ಬರುವುದು ಕ್ರಾಂತಿ. ಶೋಷಿತರು ತಮ್ಮ ನೋವನ್ನು ಸಮಾಜ ಬದಲಾವಣೆಯ ಆಧ್ಯಾತ್ಮವನ್ನಾಗಿ ಮಾಡಿಕೊಳ್ಳುವುದು ಕ್ರಾಂತಿ. ಅಂಥ ಕ್ರಾಂತಿಯ ವಸಂತ ನಮ್ಮದಾಗಲಿ" ಎಂದೂ ಅವರು ಹೇಳುವುದುಂಟು. ಎನ್‌ಕೆ, ಆದರ್ಶ ಮತ್ತು ಕನಸುಗಳ ಕವಿ. ಇವೇ ಅವರ ಬರೆಹದಲ್ಲಿ ಹೊರಲಾಗದ ಹೊರೆಯಂತೆಯೂ ಆಗಿಬಿಟ್ಟಿವೆ.

ಕಾವ್ಯಕ್ಕೆ ಹೋಲಿಸಿದರೆ ಎನ್‌ಕೆ ಗದ್ಯವು ಅಷ್ಟು ದೊಡ್ಡದಲ್ಲ. ಕವಿತೆಗೆ ರೂಪುಗೊಂಡ ರೂಪಕದ ಭಾಷೆ ಗದ್ಯದ ತರ್ಕಶೀಲತೆಯನ್ನೇ ಮಂಕುಗೊಳಿಸುವಂತೆ ತುಂಬಿಕೊಳ್ಳುತ್ತದೆ. ಕುವೆಂಪು ಮುಂತಾದ ಹಿರಿಯ ಲೇಖಕರು ಬುದ್ಧಿ ಭಾವಗಳನ್ನು ಒಂದಕ್ಕೆ ಮತ್ತೊಂದನ್ನು ಬಲಿಗೊಡದೆ, ಸಮತೋಲನದಲ್ಲಿ ಬಳಸಿ ವೈಚಾರಿಕ ಗದ್ಯವನ್ನೂ ಭಾವನಾತ್ಮಕವಾದ ಕಾವ್ಯವನ್ನೂ ಸೃಷ್ಟಿಸಿದರು ಎಂಬುದನ್ನು ಇಲ್ಲಿ ನೆನೆಯಬೇಕಿದೆ.

ತೇಜಸ್ವಿ ತಮ್ಮ ಬರೆಹಕ್ಕೆ ಕುವೆಂಪು ಲೋಹಿಯಾ ಕಾರಂತರ ಪ್ರೇರಣೆಗಳ ಬಗ್ಗೆ ಘೋಷಿಸಿಕೊಂಡಿದ್ದರು. ಅದನ್ನು ನೆನಪಿಸುವಂತೆ, ಎನ್‌ಕೆ, ಕುವೆಂಪು ಹಾಗೂ ಲಂಕೇಶ್ ಅವರ ಭಾಷೆ ಮತ್ತು ದರ್ಶನಗಳಿಗೆ ತಮ್ಮ ಕೃತಜ್ಞತೆಯನ್ನು ಅರ್ಪಿಸುವುದುಂಟು. ಹೊಸತಲೆಮಾರಿನ ಲೇಖಕರ ಪರಂಪರೆಯ ಪ್ರಜ್ಞೆ ಕುತೂಹಲಕಾರಿಯೂ ಮಾರ್ಮಿಕವೂ ಆಗಿದೆ. ತನ್ನೆಲ್ಲ ಯಶಸ್ಸಿನೊಂದಿಗೆ ಎನ್ಕೆ ಅವರ ಬರೆಹವು, ನಮ್ಮ ಕಾಲದ ಬದಲುತ್ತಿರುವ ವಾಸ್ತವವನ್ನು ಹಿಡಿಯಲು ಬೇಕಾದ ನುಡಿಗಟ್ಟಿಗಾಗಿ ಹೊಸತಲೆಮಾರಿನ ಲೇಖಕರು ನಡೆಸಿರುವ ಹೋರಾಟದ ಚಿತ್ರವನ್ನೂ ಸಹ ನೀಡುತ್ತದೆ. ಈ ಹೋರಾಟದಲ್ಲಿ ನಮ್ಮ ಅನೇಕ ಹಿರೀಕರನ್ನು ಹಿಂದಿಕ್ಕುವ ಕಸುವನ್ನು ಸಹ ಅದು ಪ್ರಕಟಿಸಿಬಿಟ್ಟಿದೆ.

ಇವುರಿಬ್ಬರ ಜಗಳದಿಂದ ರೈತರಿಗೆ ವಳ್ಳೆದಾದ್ರೆ ಸಾಕು

ಹಾಸನ ಜಿಲ್ಲೆಯ ಬುಕ್ಕನ ಬೆಟ್ಟದ ಜಾತ್ರೆಗೆ ಕರ ಹೊಡೆದುಕೊಂಡು ಹೋಗುವ ತಯಾರಿ ನಡೆಸಿದ್ದ ಕಾಳಮಾವ ಆ ವಿಷಯವಾಗಿ ಒಳಗೊಳಗೇ ಗೊಣಗಿಕೊಳ್ಳುತ್ತಿದ್ದ. ತನ್ನ ಕರುವನ್ನು ಜಾತ್ರೆಗೆ ಹೊಡೆದುಕೊಂಡು ಹೋಗುವುದಕ್ಕಿಂತಲೂ ಜಾತ್ರೆಗೆ ಬಂದಿರುವ ಲಕ್ಷಾಂತರ ರೂಪಾಯಿಗಳ ಜೋಡಿ ಕರುಗಳನ್ನು ನೋಡಿಬರುವ ಬಯಕೆ ಅವನದಾಗಿತ್ತು. ಆಗ ಕಾಣಿಸಿಕೊಂಡ ಉಗ್ರಿ,

"ಕಾಳಮಾವ, ಮಜಾ ಗೊತ್ತೆ?" ಎಂದ.

"ಏನ್ಲಾ?"

ಬಯಲುಸೀಮೆ ಕಟ್ಟೆಪುರಾಣ

▶ಬಿ. ಚಂದ್ರೇಗೌಡ

"ಇಷ್ಪೊರ್ಸದ ಮ್ಯಾಲೆ ದ್ಯಾವೇಗೌಡ್ರು ನಿನ್ನಂಗೆ ಮಾತಾಡ್ಯವುರೆ."

"ನನ್ನಂಗೇನು ಮಾತಾಡಿದ್ದನೂ?"

"ಎಡೂರಪ್ಪನ್ನ ಬಾಯಿಗೆ ಬಂದಂಗೆ ಬೋದುಬುಟ್ಟವುನೆ."

"ಬೈಸಿಗಳೊ ಅಂತ ಕ್ಯಲಸ ಅವುನ್ಯಾಕೆ ಮಾಡಬೇಕು?"

"ಇಸಿಸಿ, ಅವುನು ಮದ್ದಿಂದ ಮಾಡ್ತ ಬಂದಿರದೇ ಅಂತ ಕ್ಯಲಸಲವೆ. ಅದ್ಕೆ ಚಿಕ್ಕ ಸಣ್ಣ ಬೋದುಬುಡದೆ."

"ಏನಂತ ಬೋದವುನ್ಲ?" ಎಂದಳು ಜುಮ್ಮಿ.

"ಅಯ್ಯೋ ಅದೇಳಂಗಿಲ್ಲ ಕಣೆ."

"ನಿನ್ನವುನ್.... ನಿನ್ನೆದ್ದಿತ್ತಾ... ಅಂತ ಬೋದಿದ್ದನೇನ್ಲ?" ಎಂದ ಸೀರ.

"ಅವ್ಯಲ್ಲ ನಿನ್ನ ಬೋಗಳ ಕಣಮಾವ. ದ್ಯಾವೇಗೌಡ ಇಂಗ್ಲೀಸು, ಕನ್ನಡ, ಸಮುಸ್ಕ್ರತದಲ್ಯಲ್ಲ ಬೋದು ಮಡಿಗ್ಯವುನೆ. ಅದ್ರಿಂದ ಬಿಜೆಪಿಗಳು ಕೆರಳಿ ಅವುನ ಫೊಟಾ ತಗಂಡು ರಸ್ಕಡದಲ್ಲಿ ವಡದು ಗ್ವಂಬೆ ಮಾಡಿ ಸುಡಕ ಕುಂತವೆ. ಗೊತ್ತೆ?"

"ಅಂತಾ ಬೋಗಳ ಇನ್ನೇನು ಬೋದಿದ್ದನೂ?"

"ನಿಮ್ಮತ್ರದಲ್ಲಿರೊ ಬೋಗಳ ಯಾವುನೂ ಬೋದಿಲ್ಲ ಅವುನು. ನೀವು ಬಯ್ಯೋ ಬೋಗಳವ ಮನುಸಾದೋನು ಯಾರ ಕೇಳಕ್ಕಾದತೇ. ಆದ್ರೆ ದ್ಯಾವೇಗೌಡ ಏನಂದವುನಪ್ಪಾ ಅಂದ್ರೆ ಎಡೂರಪ್ಪ ಯಕ್ಕಡ ತಿನ್ನೊ ಮುಖ್ಯಮಂತ್ರಿ ಅಂದುಮುಬುಟ್ಟವುನೆ?" ಎಂದ ಉಗ್ರಿ.

"ಅಂಗನ್ನದಿಲ್ಲವಲ್ಲಾ" ಎಂದ ಕಾಳಮಾವ.

"ನೀನಿಂಗಂತಿ ಅಂತ ನನಿಗೆ ಮದ್ಲೆ ಗೊತ್ತಿತ್ತು ಕಣಮಾವ. ಯಾಕಂದ್ರೆ ದೇವೇಗೌಡನ ಮನೆತನದ ಭಾಸೆನೆ ಬ್ಯಾರೆ ಆದ್ರೆ ಅವುನು ರಾಜಕೀಯದಲ್ಲಿ ಬಳಸೊ ಬಾಸೆನೆ ಬ್ಯಾರೆ."

"ಅದರಲ್ಯಲ್ಲ ನಮ್ಮ ಶ್ರೀಕಂಠಯ್ಯನೇ ಸರಿ ಕಂಡ್ರ, ನಮ್ಮಂಗೇ ಮಾತಾಡ್ತನೆ" ಎಂದು ಸೀರ ಮೆಚ್ಚುಗೆ ವ್ಯಕ್ತಪಡಿಸಿದ.

"ಶ್ರೀಕಂಠಯ್ಯನ ಸುದ್ದಿ ಈಗ್ಯಾಕೆ ತಗದಿಯಾ, ಅವುನ ಕತೆ ಮುಗುದು ಭಾಳ ದಿನಾಯ್ತು."

"ಅಂಗರೆ ತೀರೋದನೇನ್ಲ" ಎಂದಳು ಜುಮ್ಮಿ.

"ತೀರೋಗಿಲ್ಲ ಕಣೆ. ತೀರೋದ್ರೆ ಸೀರ ಮಾವ ವಾರಗಟ್ಲೆ ಹೋಗಿ ಅವುರ ಮನೆಲೆ ಇರದಿಲವೆ. ಅವುನೆ ಪಾಪ ಬಿಜೆಪಿಗೋಗಿದ್ದ, ಅಲ್ಲಿ ಈ ಮುದಿ ಹೋರಿಯ ಯಾರೂ ಕ್ಯಾರೆ ಅನ್ನಲಿಲ್ಲ. ಈಗ ತಿರಗ ಕಾಂಗ್ರೆಸ್ ಮನೆ ಹುಡಿಕ್ಕಂಡು ವಂಟವುನೆ. ಅವುನ್ನ ತಿರಗ ಕರದು ಮನೆಲಿ ಕೂರಿಸಿಗಳಕ್ಕೆ ಯಾರೂ ತಯಾರಿಲ್ಲ. ಅಲ್ಲಿಗೇನಾಯ್ತು ನೀನೆ ಹೇಳು."

"ಅವುಂದಿರ್ಲಿ ದ್ಯಾವೇಗೌಡುಂದೇಳ್ಳ" ಎಂದ ಕಾಳಮಾವ. ಅಷ್ಟರಲ್ಲಿ ಬಂದ ವಾಟಿಸ್ಸೆ,

"ದ್ಯಾವೇಗೌಡ್ರುದೇನು ಅಂತ ನಾನೇಳ್ತಿನಿ ದ್ವಡಪ್ಪ, ಯರಡನೇ ಸತಿ ದ್ಯಾವೇಗೌಡ್ರು ವಿರುದ್ಧ ಭಾರಿ ಪ್ರತಿಭಟನೆ ನ್ಯಡಿತಾ ಅದೆ. ಅಂಗೇ ನೋಡಿದ್ರೆ ಯರಡು ಪ್ರತಿಭಟನೆನೂ ಕರಟ್ಟು" ಎಂದ.

"ನೀನಿನ್ನೆನಂತಿಲಾ. ಸ್ಯಾರದ ಗಂಡನಿಗೆ ಮೊಸರಲ್ಲಿ ಕಲ್ಲು ಅಂದಂಗೇ" ಎಂದ.

"ಅಲ್ಲಾ ದ್ವಡಪ್ಪ, ಎಡೂರಪ್ಪನ್ನ ಬೋಳಿಮಗ, ಯಕ್ಕಡ ತಿನ್ನೊನು ಅನ್ನಬವುದಾ ನೀನೇ ಹೇಳು. ದೇಶಪಾಂಡೆ ಇವುರ ಮಗನ್ನ ಚಪ್ರಾಸಿ ಅಂದಿದ್ಕೆ ಎಷ್ಟು ಸಿಟ್ಟು ಬಂದಿತ್ತು ದ್ಯಾವೇಗೌಡ್ರಿಗೆ. ಅಂಗೆ ಎಡೂರಪ್ಪನ ಕಡಿಯೋರಿಗೂ ಸಿಟ್ಟು ಬಂದದೆ."

"ಎಡೂರಪ್ಪ ಏನಂದವುನ್ಲ?"

"ಅವುನು ಡೀಸೆಂಟಾಗ್ಯವುನೆ ದ್ವಡಪ್ಪ. ದ್ಯಾವೇಗೌಡ್ರ ಎದುರಿಗೆ ಸುಸಂಸ್ಕೃತವಾಗಿ, ತಾಳ್ಮೆಯಿಂದ, ಧೀಮಂತ ನಾಯಕನಂಗೆ ಮಾತಾಡ್ತ ಅವುನೆ. ಆಶ್ಚರ್ಯ ಅಂದ್ರೆ ಅವುನಿಗೆ ಇಂತ ಮಾತು ಸೂಟಾಗಿ ಕಾಣ್ತಯಿಲ್ಲ. ನಿಜವಾಗ್ಲು ದ್ಯಾವೇಗೌಡ್ರ ಬೋಗಳಕ್ಕೆ ಅವುನೂ ಬೈಬೇಕಾಗಿತ್ತು. ಆಗ ಜಗಳ ಇಂಟರೆಸ್ಟಾಗಿರದು."

"ಏಟೇ ಆಗ್ಲಿ ಜಗಳ ಕಂಡ್ರೆ ಹಾಲು ಅನ್ನ ಉಂಡಂಗಾಡೋನಲವೆ ನೀನು."

"ದ್ವಡಪ್ಪ ಆ ಮಾತ ವಾಪಸ್ ತಗೊ. ರಾಜಕಾರಣಿಗಳ ಜಗಳ ನೋಡಿದೇಟಿಗೆ ಹಾಲು ಅನ್ನ ಉಂಡಂಗಾಗದು ಟಿ.ವಿ.ಯೋರಿಗೆ, ನನಿಗಲ್ಲ. ದ್ಯಾವೇಗೌಡ್ರು ಎಡೂರಪ್ಪನ ಜಗಳದ ಮ್ಯಾಲೆ ವಸ ಕಾರ್ಯಕ್ರಮನೆ ಮಾಡ್ತ ಕುಂತವುರೆ. ಅವುರಿಗೆ ಬೇಕಾದ್ದೇ ಅನ್ಯರ ಜಗಳ ಕಂಡರೆ ಆಲೋಗಡ್ಡ ವುಂಡಂತಾಡುವರು ಅನ್ನು."


"ಯಾರಿಗೂ ಹೇಳಂಗಿಲ್ಲ ಕಣೊ ವಾಟಿಸ್ಸೆ. ಯಲ್ಲಾರಿಗೂ ತಲೆ ಕೆಟ್ಟೊಗ್ಯದೆ. ಒಬ್ಬನೇ ಒಬ್ಬನೂ ಕೇಳಿಸಿಗಳಂಗೆ ಮಾತಾಡ್ತಯಿಲ್ಲ. ಏನೇನೊ ಹ್ಯಲು ಪ್ಯಲಿನಂಗೆ ಮಾತಾಡ್ತವೆ" ಎಂದ ಉಗ್ರಿ.

"ದ್ಯಾವೇಗೌಡ ಯಗಡೆ ಜ್ವತೆ ಜಗಳಾಡವಾಗ ಒಂದೇ ಒಂದು ತಪ್ಪನೂ ಮಾತಾಡತಿರಲಿಲ್ಲ ಅಲವೆ?" ಎಂದ ಕಾಳಮಾವ.

"ಊ ಕಣಮಾವ, ಯಕ್ಕಡ ಅನ್ನಕ್ಕೂ ಕಾಲಿನಲ್ಲಿರೊ ವಸ್ತು ಅಂತ ಹೇಳತಿದ್ದ. ಜನತಾದಳದ ಎದುರಿಗೆ ಮೊಟ್ಟಮೊದ್ಲು ಜನ ಸೇರಿಸಿ ಸಭೆ ಮಾಡಿದಾಗ ನನ್ನ ಬಗ್ಗೆ ಹಗುರವಾಗಿ ಮಾತನಾಡತಕ್ಕಂತ ವ್ಯಕ್ತಿಗೆ ಕಾಲಿನಲ್ಲಿರುವ ವಸ್ತುವನ್ನು ತೋರಿಸಿ ಉತ್ತರ ಕೊಡಬೇಕಾಯ್ತದೆ ಅಂದಿದ್ದ ಗೊತ್ತೆ?"

"ಮಿಸ್ಟರ್ ಉಗ್ರಿ, ದ್ಯಾವೇಗೌಡ ಅಂತ ಮಾತಾಡ್ತನೆ ಅನ್ನದು, ಅವುನು ಯಾರ ಮ್ಯಾಲೆ ಜಗಳಾಡ್ತನೆ ಅನ್ನದು ಮುಖ್ಯ. ರಾಮಕೃಷ್ಣ ಯಗಡೆ ಜೊತೆ ಜಗಳಾಡದು ಅಂದ್ರೆ ಎಡೂರಪ್ಪನ ಮ್ಯಾಲೆ ಜಗಳಾಡಿದಂಗಲ್ಲ. ಅದೆ ಬ್ಯಾರೆ ಇದೆ ಬ್ಯಾರೆ" ಎಂದ ವಾಟಿಸ್ಸೆ.

"ಅದ ನಾನೂ ಒಪ್ತಿನಿ ಕಣೊ. ಆದ್ರೆ ದೇವೇಗೌಡ ವಿಧಾನಸಭೆಲಾಗ್ಲಿ ಹೊರಗಾಗ್ಲಿ ಮಾತಾಡಿದ್ದು ಹಾಸನ ಜಿಲ್ಲೆ ಮಾತಲ್ಲ. ಅವುನಿಗೆ ಯಾವನೊ ಒಬ್ಬ ಬ್ರಾಹ್ಮಣ ಮದ್ಲಿಗೆ ಭಾಸಣ ಬರಕೊಡ್ತಿದ್ನಂತೆ. ಅದ ದ್ಯಾವೇಗೌಡ ಎಷ್ಟು ಚೆನ್ನಾಗಿ ಉರವಡಕಂಡಿದ್ದ ಅಂದ್ರೆ ನಮ್ಮ ಮಾತೆ ಅವನ ಬಾಯಿಲಿ ಬತ್ತಿರಲಿಲ್ಲ."



"ನಿಜ ಕಣೊ ಉಗ್ರಿ. ಪರಿಗ್ ಜಾಂಪಲ್ ಶ್ರೀಕಂಠಯ್ಯ ಎದುರಿಗೆ ಸಿಕ್ಕಿದ್ರೆ 'ಏನ್ಲಾ ಚನ್ನಾಗಿದ್ದಿಯೇನ್ಲ ನಿಮ್ಮಪ್ಪಂಗವುನ್ಲ' ಅಂತ ಕೇಳೋಸು. ಅದೇ ದ್ಯಾವೇಗೌಡ 'ಸೌವುಕ್ಯವೇನಪ್ಪಾ ನಿಮ್ಮ ತಂದೆ, ಹೇಗಿದ್ದಾರಪ್ಪ' ಅಂತ ಕೇಳತಿದ್ದ. ಆದ್ರೆ ಈಗ ಎಡೂರಪ್ಪನ್ನ ಬೋದಿರದ ನೋಡಿದ್ರೆ ಅವುನ ಮಕ್ಕಳೆ ಒಪತಾಯಿಲ್ಲ, ಇದಕೇನೇಳ್ತೀ."

"ನೋಡು ಮತ್ತೆ, ಮೈಮ್ಯಾಲೆ ಎಚ್ಚರ ಇಲ್ಲ ಅಂದ್ರೆ ಏನಾಯ್ತದೆ. ಆಗೊಂದ ಸತಿ ಡಿ.ಕೆ. ಶಿವಕುಮಾರ ಇದೇ ದ್ಯಾವೇಗೌಡುನ್ನ ಕಾರ್ಪೊರೇಟ್ ದ್ಯಾವೇಗೌಡ ಅಂದಿದ್ದ, ಅದ್ಕೆ ದಳದೋರ್ಯಲ್ಲ ಗಲಾಟೆ ಮಾಡಿದ್ರು. ಈಗ ಬಿಜೆಪಿಗಳು ಮಾಡಿದ್ರು."

"ಅದ್ಯಾಕ್ಲ ದ್ಯಾವೇಗೌಡ ಅಂಗಂದ?" ಎಂದ ಕಾಳಮಾವ.

"ಅದೂ, ಸುಗರ್ರುದಂತೆ ದ್ವಡಪ್ಪಾ, ಬಿಪಿನೂ ಇದ್ದತಂತೆ. ಯರಡೂ ಏರಿದಾಗ ಅಂಗೆ ಮಾತಾಡ್ತರೆ. ಅಮ್ಯಾಲೆ ಕ್ಷಮೆ ಕೇಳ್ತರೆ. ಆದರಿಂದ ಏನೂ ಮಾಡಕ್ಯಾಗದಿಲ್ಲ, ಇಟೀಸ್ ಆಲ್ ಕಾಮನ್."

"ಕಾಮನ್ನು ಅಂತ ಎಷ್ಟು ಸಲೀಸಾಗೇಳ್ತೀಯೋ. ಇವುರ ಮಾತಿಂದ ಜನಗಳು ಹ್ವಡದಾಟಕತ್ತಿಗಂಡ್ರೆ ಬುಡ ಸೋದ್ಯಾರೂ. ಅರಸೀಕ್ಯರೆಲಿ ನೋಡಿದ ಯಂಗಾಯ್ತು."

"ಅಲ್ಲೇನಾಯ್ತು?"

"ಅಲ್ಲಿ ತ್ರಿಬಲ್ಲೆಕ್ಸ್ ರಂ ತಗಂಡು ತಲೆಬಾಡು ತಿನ್ನೊನಂಗೆ ಕಾಣೊ ಯಮ್ಮೆಲ್ಲೆ ಅವುನೆ. ಅವುನ ಕಡಿಯ್ಯೋರ್ಯಲ್ಲ ದ್ಯಾವೇಗೌಡ ಹೇಳಿದ್ದೇ ಸರಿ ಅನ್ನಂಗೆ ಜಾಥಾ ತಗುದ್ರು. ಅವುರೆಷ್ಟು ಜನಿದ್ರು ಅಂದ್ರೆ ಬಿಜೆಪಿಗಳೇ ಹೆದ್ರಿಕಂಡು ಓಡಿದವಂತೆ."

"ಅಂಗಾದ್ರೆ ಕಷ್ಟ. ದಳದಲ್ಲಿ ಈ ನಮ್ಮ ಸೀರ ಮಾವನಂಥೋರೇ ಜಾಸ್ತಿ. ಇನ್ನ ಬಿಜೆಪಿಲಿ ಒಂದಾದ್ರು ನ್ಯಟ್ಟಗಿಲ್ಲ. ಇಂಥೋರು ಹ್ವಡದಾಟಕತ್ತಿಗಂಡ್ರೆ ಕರ್ನಾಟಕದ ಕತೆಯೇನು ಅಂತ."

"ಇದೊಂತರ ಲಿಂಗಾಯಿತ್ರ ಒಕ್ಕಲಿಗರು ಜಗಳದಂಗೆ ಕಾಣ್ತಾ ಅದಲವೆ."

"ಅಂಗೇಳಕ್ಕೆ ಬರದಿಲ್ಲ. ಬಿಜೆಪಿಗಳು ದಳದೋರ ಜಗಳದಂಗೆ ಕಾಣ್ತಾ ಅದೆ. ಆದ್ರೆ ಸೇರೊ ಜನಸಂಖ್ಯೆ ನೋಡಿದ್ರೆ ಸ್ವಲುಪ ನಿಜ.

"ಏನೇ ಆಗ್ಲಿ ಯಸ್ಸೆಂ ಕೃಷ್ಣ ಜಂಟ್ಲು ಮ್ಯಾನು ಇವುರಿಗೋಲ್ಸಿದ್ರೆ."

"ನಿಜ ಕಣೊ. ಅವುನು ಮಾತ್ರ ಯಾವಾಗ್ಲು ಹದ್ದುಮೀರಿ ಮಾತಾಡಿದೋನಲ್ಲ. ಒಂದು ಸತ್ತಿ ಮಾತ್ರ ಸದಾನಂದಗೌಡನ್ನ ಹಲ್ಲು ಗಿಸಗ ಅಂಥ ಬೋದು ಕಡಿಗೆ ಫೋನು ಮಾಡಿ ಕ್ಷಮಾಪಣೆ ಕೇಳಿದ್ದ."

"ಯಾರ ಕೈಲೂ ನಿಷ್ಟೂರಾಗಬಾರದು ಅನ್ನೊರು ಎಸ್ಸೆಂ ಕೃಷ್ಣನಂಗೆ ಮಾತಾಡ್ತರೆ. ಜನಕ್ಕೆ ಏನಾರ ಮಾಡಬೇಕು ಅನ್ನೊರು ಜಗಳಾಡ್ತರೆ. ಈ ಎಡೂರಿ ದ್ಯಾವೇಗೌಡ್ರ ಜಗಳದಿಂದ ರೈತರಿಗೆ ವಳ್ಳೆದಾದ್ರು ಸಾಕು." ●

ಒಂದು ದಿನದ 'ಸರ್ಕಸ್'



ಒಂದು ದಿನದ ಕ್ರಿಕೆಟ್ ಮತ್ತು ಐದು ದಿನದ ಟೆಸ್ಟ್ ಬಗ್ಗೆ ಅಲ್ಲಲ್ಲಿ ಕೇಳಿರುವುದನ್ನು ನಮ್ಮ ಓದುಗರಿಗಾಗಿ ಟಿಪ್ಪಣಿ ಮಾಡುತ್ತೇನೆ. ಕ್ರಿಕೆಟ್ ಎಂಥ ಅದ್ಭುತ ಆಟ ಎಂಬುದನ್ನು ಅದರ ಐದು ದಿನದ ವೈಭವ ನೋಡಿ ಮಾತ್ರ ಮೆಚ್ಚಬಹುದು. ಐದು ದಿನದ ಟೆಸ್ಟ್‌ನಲ್ಲಿ ಪ್ರತೀ ಟೀಮ್ ಎರಡು ಇನ್ನಿಂಗ್ಸ್ ಮಾಡಬೇಕಾಗುತ್ತದೆ- ಅದು ಮನುಷ್ಯರ ಗುಣವನ್ನವಲಂಬಿಸಿದೆ. ಒಂದು ಇನ್ನಿಂಗ್ಸ್‌ನಲ್ಲಿ ಸ್ಕೋರ್ ಮಾಡದವನು ಇನ್ನೊಂದರಲ್ಲಿ ಮಾಡಬಹುದು; ಹಾಗೆಯೇ ಒಂದು ಇನ್ನಿಂಗ್ಸ್‌ನಲ್ಲಿ ಹೊಂದಾಣಿಕೆ ...ಮುದಿರುವ ಕೂಡ ಇನ್ನೊಂದು ಇನ್ನಿಂಗ್ಸ್‌ಗಾಗಿ ಒಗ್ಗಟ್ಟು, ಏಕಾಗ್ರತೆ ಪಡೆಯಬಹುದು. ...ಯೇ ಈ ಟೆಸ್ಟ್‌ನಲ್ಲಿಯ ಲೆಕ್ಕಾಚಾರ. ಎದುರಾಳಿಗೆ ಎಷ್ಟು ಟೈಂ ಕೊಟ್ಟರೆ ಆತನನ್ನು ...ಲಿಸಬಹುದು ಅಥವಾ ಡ್ರಾ ಮಾಡಿಕೊಳ್ಳಬಹುದು; ಇದೆಲ್ಲ ಲೆಕ್ಕಾಚಾರ, ಪ್ಲಾನಿಂಗ್; ...ನ ಐದು ದಿನವೂ ಗುಪ್ತವಾಗಿ ಹರಿಯುತ್ತಿರುತ್ತದೆ. ಹಾಗೆಯೇ ಈ ಐದು ದಿನಗಳ ...ಬದ್ಧತೆ-ಬೌಲಿಂಗ್, ಬ್ಯಾಟಿಂಗ್, ಫೀಲ್ಡಿಂಗ್‌ನ ಏರಿಳಿತ, ಹಠಾತ್ತನೆ ಕಂಡುಬರುವ ಸ್ಫೋಟ ... ಸೌಮ್ಯತೆ.


...ಟೆಸ್ಟ್‌ಗೆ ಹೋಲಿಸಿದರೆ 'ಒಂದು ದಿನದ ಕ್ರಿಕೆಟ್' ಸಾಂಪ್ರದಾಯಕ ಸಂಗೀತದ ಎದುರು ...ತು ಸಂಗೀತವಿದ್ದಂತೆ. ಪ್ರೇಮಕ್ಕೆ ಕಾಮವನ್ನು ಹೋಲಿಸಿದಂತೆ. ಕೆಲವರು "ಟೆಸ್ಟ್ ...ದಂತೆ, ಒಂದು ದಿನದ ಕ್ರಿಕೆಟ್ ವೇಶ್ಯಾ ಸಂಗದಂತೆ" ಅನ್ನುತ್ತಾರೆ. ಓವರ್‌ಗಳನ್ನು ...ತಗೊಳಿಸುತ್ತಾರೆ. ಆ ಬ್ಯಾಟಿಂಗ್‌ಗೆ ಹತೋಟಿ ಇಲ್ಲ, ಬೌಲರ್‌ಗೆ ಸಾಕಷ್ಟು ದೂರ ...ಒಂದು ಬಾಲ್ ಮಾಡುವ ವೇಳೆ ಕೂಡ ಇರುವುದಿಲ್ಲ. ಒಂದು ಸಲ ಔಟಾದರೆ ಆ ...ಯೇ ಅವನ ಪಾಲಿಗೆ ಮುಗಿಯಿತು. ಚುರುಕು, ನಿಖರತದಿಂದಾಗಿ ಟೆಸ್ಟ್‌ನಲ್ಲಿ ಚೆನ್ನಾಗಿ ...ನ ಹುಡುಗರು ಆ ಆಟದಲ್ಲಿ ಸೋಲುವ ಅಪಾಯವಿದೆ.


ಪತ್ರ ಪ್ರಚಂಡರು

ಸಂಪಾದಕನಾದವನಿಗೆ ಜನ ಏನೆಂದು ಮಾತಾಡಿಕೊಳ್ಳುತ್ತಾರೆ, ಯೋಚಿಸುತ್ತಾರೆ ಎನ್ನುವುದು ಗೊತ್ತಾಗುವುದು (ಮುಖ್ಯವಾಗಿ) ಆತನಿಗೆ ಬರುವ ಪತ್ರಗಳ ಮೂಲಕ. ನಮ್ಮ ಪತ್ರಿಕೆಗೆ ಪ್ರತೀದಿನ ನೂರಾರು ಪತ್ರಗಳು ಬರುತ್ತವೆ. ಅದೇಕೋ ನನಗೆ ಟೈಪ್ ಮಾಡಿದ ಪತ್ರಗಳು ಇಷ್ಟವಾಗುವುದಿಲ್ಲ; ಕನ್ನಡ ಟೈಪ್‌ರೈಟಿಂಗ್‌ನ ಕೊಂಬು, ಒತ್ತುಗಳು ನನ್ನ ಮನಸ್ಸು ಗೆದ್ದೇ ಇಲ್ಲ. ಎರಡನೆಯದಾಗಿ, ಪತ್ರಗಳನ್ನು ಬರೆಯುವುದನ್ನೇ ವೃತ್ತಿಯನ್ನಾಗಿ ಮಾಡಿಕೊಂಡಿರುವವರ ಪತ್ರಗಳೆಂದರೆ ನನಗೆ ಅಸಹ್ಯ. ಅಂಥ ಪತ್ರ ನೋಡಿದೊಡನೆ ನನಗೆ ಗೊತ್ತಾಗುತ್ತದೆ- ಈ ಪತ್ರಿಕೆಯ ನಿಲುವೇನು, ಹೇಗೆ ಬರೆದರೆ ಪತ್ರ ಪ್ರಕಟವಾಗುತ್ತದೆ- ಎಂಬುದೆಲ್ಲ ಈತನಿಗೆ ಗೊತ್ತು. ಜೀವಂತ ಮಿದುಳು ಹೀಗೆ ಕೆಲಸ ಮಾಡುವುದಿಲ್ಲ. ನೇರವಾಗಿ, ಸರಳವಾಗಿ, ಸತ್ಯ ಹೇಳುವ ಏಕಮಾತ್ರ ಉದ್ದೇಶದಿಂದ ಬರೆಯುವವರು ನನಗೆ ಇಷ್ಟ.... ಪತ್ರಗಳ ವಿಭಾಗವೊಂದು ಚರ್ಚೆ; ಅಲ್ಲಿ ಕ್ಲೀಷೆಗಳಿದ್ದರೆ ಆ ವಿಭಾಗವೇ ವ್ಯರ್ಥವಾಗುತ್ತದೆ. ಇಲ್ಲಿ ನಾನು ನಿರ್ಜೀವ ವೃತ್ತಿವಂತ ಪತ್ರಕಾರರ ಪಟ್ಟಿಯನ್ನೇ ಕೊಡಬಲ್ಲೆ, ಅದೆಲ್ಲ ಬೇಡ.

ಎರಡನೆಯದಾಗಿ ಕಣ್ಣಾಮುಚ್ಚಾಲೆ. ಇಲ್ಲಿ ಬರುವ ಚಿತ್ರವಿಚಿತ್ರ ಪ್ರಶ್ನೆಗಳ ಬಗ್ಗೆ ಬಹಳ ಬರೆಯಬಲ್ಲೆ. ಒಮ್ಮೆ ಗೋಪಾಲಗೌಡರು ತಮ್ಮ ಭಾಷಣದಲ್ಲಿ 'ಕಾವಿ, ಖಾಕಿ, ಖಾದಿ' ಬಟ್ಟೆಯ ಜನರನ್ನು ಕುರಿತು ಮಾತಾಡಿದರು. ಕಾವಿಯ ಜಗದ್ಗುರುಗಳು, ಖಾಕಿಯ ಪೊಲೀಸರು ಮತ್ತು ಖಾದಿಯ ರಾಜಕಾರಣಿಗಳನ್ನು ಕುರಿತು ವ್ಯಂಗ್ಯವಾಗಿ ವಿವರಿಸಿದರು. ಅದೆಂತೋ ಈ ಮಾತು ತುಂಬ ಪ್ರಖ್ಯಾತ. ಕಣ್ಣಾಮುಚ್ಚಾಲೆಗೆ ಬರುವ ಹಲವಾರು ಪ್ರಶ್ನೆಗಳಲ್ಲಿ ಈ ಮಾತು ಬರುತ್ತದೆ. ಹಾಗೆಯೇ ಹೆಣ್ಣಿನ ತಾಳಿ ಬಗ್ಗೆ. ನಾನು ಸಾಮಾನ್ಯವಾಗಿ ಉತ್ತರಿಸುವುದು ಹೊಸ ಬಗೆಯ ಪ್ರಶ್ನೆಗಳನ್ನು ಮಾತ್ರ. ಗಾಂಭೀರ್ಯದಲ್ಲಿನ ತಮಾಷೆ, ತಮಾಷೆಯಲ್ಲಿನ ಲೈಂಗಿಕತೆ-ಹೀಗೆ ಚಕಿತಗೊಳಿಸುವುದು ನನಗೆ ಇಷ್ಟ. ಅಲ್ಲದೆ ಈ ಪತ್ರಗಳು ಮತ್ತು ಪ್ರಶ್ನೋತ್ತರದಿಂದ ಯಾರ ಮನಸ್ಸೂ ನೋಯಬಾರದು; ಅದೊಂದು ಕ್ರೀಡೆಯ ರೀತಿಯಲ್ಲಿ ಇರಬೇಕು.


-ಮಾರ್ಚ್ 8, 1992






ಮಾತೊಂದು ಹಗರಣ ನುಂಗಿತು

'ಗೌಡರೆ ಹಾ ಗೌಡರೆ
ಬೈದಿರಿ ಬೈದಿರಿ
ಮನಮುಟ್ಟಿ ಬೈದಿರಿ
ಚೆನ್ನಾಗಿ ಬೈದೆನ್ನ ಧನ್ಯನ ಮಾಡಿದಿರಿ
ಚಿರಋಣಿಯು ನಾ ನಿಮಗೆ'





ಎಚ್.ಎಲ್. ಕೇಶವಮೂರ್ತಿ

ಯಡ್ಯೂರಪ್ಪ ಮನೆಯಿಂದ ಸುಶ್ರಾವ್ಯವಾಗಿ ಹಾಡು ಕೇಳಿಬರುತ್ತಿತ್ತು. 'ಕಾಪಿ' ರಾಗ ಕೇಳಲು ಹಿತವಾಗಿತ್ತು.

ಅರೆ, ಇದೇನು... ಮಾಜಿ ಪ್ರಧಾನಿ ಅವಾಚ್ಯ ಶಬ್ದಗಳಿಂದ ಮುಖ್ಯಮಂತ್ರಿಯನ್ನು ಬೈದದ್ದು ಇಡೀ ರಾಜ್ಯಕ್ಕೇ ಕಳಂಕ ತಂದಿದೆ ಎಂದು ಭಾಜಪ ಪ್ರಪಂಚ ಸಿಡಿದೆದ್ದು ಮಾಜಿ ಪ್ರಧಾನಿ ಪ್ರತಿಕೃತಿಗೆ ಚಪ್ಪಲಿ ಪೂಜೆ ಸಲ್ಲಿಸಿ ಅಗ್ನಿಸ್ಪರ್ಶ ಮಾಡುತ್ತಿರುವ ಸಂದರ್ಭದಲ್ಲಿ ಇಂತಹ ಹಾಡು ಕೇಳಿಬರುತ್ತಿದೆಯಲ್ಲ... ಎಂತಹ ವಿಶಾಲಹೃದಯ ಮುಖ್ಯಮಂತ್ರಿಯದ್ದು ಎಂದು ಗಮನವಿಟ್ಟು ಕೇಳುತ್ತಾ ನಿಂತೆ.

'ಬದುಕಿದೆನು ಬದುಕಿದೆನು ಅಪವಾದವೆನಗೆ ಹಿಂಗಿತು
ಪದುಮನಾಭನಗರದ ನಾಲಿಗೆಯೊಲುಮೆ ಎನಗಾಯಿತು
ಸಡಿಲ ನಾಲಿಗೆಯಿಂದಮಗೆ ಮುಕುತಿ ದೊರೆಯುವಂತಾಯಿತು
ಬೈಗಳೆಮ್ಮ ಕಿವಿಗೆ ಅಮೃತವಾಯಿತು'

ಮತ್ತೆ ಅದೇ ದನಿ 'ಕಾಂಬೋದಿ' ರಾಗದಲ್ಲಿ ಹಾಡುತ್ತಾ ಇದೆ. ಯಾವೋನಾದರೂ ಆಧುನಿಕ ದಾಸ ಸನ್ಮಾನ್ಯ ಮುಖ್ಯಮಂತ್ರಿಯವರನ್ನು ಅಪಹಾಸ್ಯ ಮಾಡಲು ಈ ಮಾರ್ಗ ಹುಡುಕಿರಬಹುದೆ ಎಂದು ತರ್ಕಿಸಿ ಇಣುಕಿ ನೋಡಿದೆ. ಇಲ್ಲ ಯಡ್ಯೂರಪ್ಪನವರೇ ಆನಂದ ತನ್ಮಯರಾಗಿ ಹಾಡುತ್ತಿದ್ದರು!

ನನಗೆ ದೇವೇಗೌಡರು ಆಡಿದ ಮಾತು ಕಾಡುತ್ತಿತ್ತು. ಭಾವ ಸಮಾಧಿಯಿಂದ ಅವರನ್ನು ಎಬ್ಬಿಸಿ ವಾಸ್ತವ ಪ್ರಪಂಚಕ್ಕೆ ತರಲು '..... ಸಾರ್ ಬ್ಲಡಿ ಬಾಸ್ಟರ್ಡ್' ಅನ್ನುವುದಕ್ಕಿಲ್ಲ ಉಲ್ಲಾಸಭರಿತರಾದರು!

'ನಿಂದಕರಿರಬೇಕು ತಮ್ಮಾ
ಹಂದಿಯಿದ್ದರೆ ಕೇರಿ ಹ್ಯಾಂಗೆ ಶುದ್ಧಿಯೋ ಹಾಂಗೆ
ಅಂದಂದು ಮಾಡಿದ ಪಾಪವೆಂಬ ಮಲ
ತಿಂದು ಹೋಗುವರಯ್ಯ ನಿಂದಕರು
ವಂದಿಸಿ ಸ್ತುತಿಸುವ ಜನರೆಲ್ಲರು ನಮ್ಮ
ಪೊಂದಿದ ಪುಣ್ಯವನೊಯ್ಯುವರಯ್ಯ'

ಎಂದು ನಾದನಾಮ ಕ್ರಿಯೆಯಲ್ಲಿ ತಮ್ಮ ಸಂಗೀತಧಾರೆ ಹರಿಸಿದರು!

ದಂಗಾದೆ! ಉಗ್ರಪ್ಪನವರಿಂದ 'ಚಟಗಾರ ಗಂಡು' ಎಂಬ ಬಿರುದಾಂಕಿತರಾದ ಸನ್ಮಾನ್ಯರಿಂದ ಈ ವೇದಾಂತ!

ಭ್ರಷ್ಟಾಚಾರದಿಂದ ಬಂದದ್ದು ಪಾಕರಿಕೆ ಬರಿಸಿರಬೇಕು. ಪಾಪ ಅವರು ತಾನೆ ಎಷ್ಟೊಂತ ತಿಂದಾರು!

ನಾನು ಪಲ್ಲವಿ ಅನುಪಲ್ಲವಿ ಹಾಡಬೇಕು ಅಂತಿದ್ದೆ ಅಷ್ಟರಲ್ಲಿ ಅವರು

'ಸಮಯ ಸಾಲದೆನಗೆ
ಪೋಗಿ ಬರುವೆನುನಾ
ತ್ರೀ ಈಡಿಯಟ್ಸ್‌ಗೆ'

ಎಂದು ಅದ್ಯಾವುದೋ ಗೊತ್ತಿಲ್ಲದ ರಾಗದಲ್ಲಿ ಹಾಡಲು ಪ್ರಾರಂಭಿಸಿದರು. ಪಾದದಿಂದ ನೆತ್ತಿಯವರೆಗೆ ಸಂತೋಷ ಅನ್ನೋದು ಉಕ್ಕಿ ಬರುತ್ತಿತ್ತು. ಆ ಆನಂದಮಯ ದೃಶ್ಯವನ್ನು ಕಣ್ತುಂಬಿಸಿಕೊಳ್ಳೋಣ ಅನ್ನುವಷ್ಟರಲ್ಲಿ ಕೆಂಪು ದೀಪದ ಕಾರಿಗೆ ಹಾರಿ ಕುಳಿತರು.

ಸ್ಥಿತ ಪ್ರಜ್ಞನನ್ನು ನೋಡಿದ ಅನುಭವ ಆಯಿತು!

ಮಾರನೆ ದಿನ ಸುದ್ದಿಗೋಷ್ಠಿ. ಇಂತಹ ಮಹಾನುಭಾವರ ದರ್ಶನವೇ ಒಂದು ಭಾಗ್ಯ ಎಂದುಕೊಂಡು ಹೋದೆ. ಎಂತಹ ಮುಖಭಾವ ಅಂತೀರಿ.... ಗೋವಿನ ಹಾಡಿನ ಗೋವು ಇದೆಯಲ್ಲ ಥೇಟ್ ಹಾಗೇನೆ. ಇವರ ತಲೆ ತೆಗೆದು, ಅದರ ತಲೆ ಕತ್ತರಿಸಿ ಅದಲುಬದಲು ಮಾಡಿದರೂ ಏನೂ ವ್ಯತ್ಯಾಸ ಗೋಚರಿಸುವಂತಿರಲಿಲ್ಲ! ಈ ಗೋವು ಹೇಳಿತು- 'ಈ ವಿಷಯ ಕುರಿತು ರಾಜಾದ್ಯಂತ ಚರ್ಚೆ ನಡೆಯಲಿ.'

ಯಾವ ವಿಷಯ ಕುರಿತ ಚರ್ಚೆ ಅದು?

ಆತುರ ಬೇಡಿ.

ಸ್ವಲ್ಪ ಫ್ಲಾಷ್ ಬ್ಯಾಕ್.

ನೈಸ್ ವಿರುದ್ಧ ಹೋರಾಟ ನಡೆಯುತ್ತಿತ್ತು.

'ಇದು ಅವರ ಪಾಪದ ಕೂಸು. ನಾನು ತಂದೆಯಾಗಲು ಸಿದ್ಧನಿಲ್ಲ' ಎಂದಿತು ಗೋವು. 'ಇನ್ನಾದರೂ ಅಪಪ್ರಚಾರ ನಿಲ್ಲಿಸಿ' ಎಂದು ಮೊರೆ ಇಟ್ಟಿತು.

ದುಷ್ಟ ವ್ಯಾಘ್ರ ಕಿವಿಗೆ ಹಾಕಿಕೊಳ್ಳಲಿಲ್ಲ ಈ ಮಾತು. ಪ್ರತಿಭಟನೆ ಮುಂದುವರೆಸಿತು.

'ಕೆಟ್ಟ ಹೆಸರು ತರಲು ಹೀಗಾಡುತ್ತಿದೆ' ಎಂದಿತು. 'ಅಭಿವೃದ್ಧಿ ತಡೆಯಲು ಈ ತಂತ್ರ ಅಂತಾನೂ ಗೋಳಾಡಿತು. ರೋಸತ್ತು 'ಬಹಿರಂಗ ಚರ್ಚೆಗೆ ಸಿದ್ಧ' ಎಂದು ಅಳುಮೋರೆ ಮಾಡಿತು.

'ನಾನೂ ತಯಾರು, ವೇಳೆ ಸ್ಥಳ ನಿರ್ಧರಿಸಿ' ಎಂದು ಆರ್ಭಟಿಸಿದ ದುಷ್ಟ ವ್ಯಾಘ್ರ ಕೇಶವಕೃಪಾಕ್ಕೆ ಬೇಕಾದರೂ ಬರಲು ಸಿದ್ಧ' ಎಂದಿತು.

ಪವಿತ್ರ ಗೋವುಗಳ ಆವಾಸ ಸ್ಥಾನಕ್ಕೆ ಈ ಶೂದ್ರ ವ್ಯಾಘ್ರವನ್ನು ಆಹ್ವಾನಿಸುವುದೆ?



ಮಾತು ಬದಲಿಸಿತು.

'ಪ್ರಧಾನಿ ಮುಂದೆ ನಡೆಯಲಿ ಚರ್ಚೆ' ಎಂದಿತು ಸಾಧು ಗೋವು.

'ಬರುವೆ ನಾ ದೆಹಲಿಗೆ, ಪ್ರಧಾನಿ ಮುಂದಕೆ' ಎಂದು ಘರ್ಜಿಸಿತು ದುಷ್ಟಮೃಗ.

ನೈಸ್ ಚರ್ಚೆ ನಡೆಯಿತೆ?

ಅಷ್ಟರಲ್ಲಿ....

'ಯಾವೋನ್ರಿ ಅವ್ನು ಯಡ್ಯೂರಪ್ಪ, ಬ್ಲಡಿ ಬಾಸ್ಟರ್ಡ್' ಬಂದಿತು ಮಾಜಿ ಪ್ರಧಾನಿ ಬಾಯಿಂದ.

ಯಡ್ಯೂರಪ್ಪನವರು ಉಲ್ಲಾಸಗೊಂಡರು!

ಇಷ್ಟು ಫ್ಲಾಷ್ ಬ್ಯಾಕು.

ಈಗ ರಾಜ್ಯ ಚರ್ಚಿಸಬೇಕೇನನ್ನು? ಭಾಜಪ ಸರ್ಕಾರದ ದುರಾಡಳಿತವನ್ನಲ್ಲ, ಕಳಂಕಿತ ಮಂತ್ರಿಗಳ ಕುರಿತೂ ಅಲ್ಲ, ಗಣಿ ಹಗರಣದ ಮಾತನ್ನಲ್ಲ, ಪರಂತು ಚರ್ಚಿಸಬೇಕಾದ್ದು-ಮಾಜಿ ಪ್ರಧಾನಿಯಿಂದ ಇಂತಹ ಅವಾಚ್ಯ ಶಬ್ದ ಬರಬಹುದೆ ಎಂಬುದನ್ನ!

ಇದು ಚರ್ಚೆಯ ವಿಷಯವೇ ಅಲ್ಲ. ಇಂತ ಮಾತನ್ನ ಬಳಸಬಾರದಾಗಿತ್ತು ಎಂಬುದು ನಿರ್ವಿವಾದ. ಇದು ದೇವೇಗೌಡರಿಗೂ ಅರಿವಾಗಿದೆ. ಅದಕ್ಕೆ ಕ್ಷಮೆಯನ್ನೂ ಕೋರಿದ್ದಾರೆ. ಚರ್ಚೆಯ ವಿಷಯ ಅದಲ್ಲ. ಇದು ನೈಸ್ ಕಂಪನಿ ವಿವಾದ. ಅದರ ಚರ್ಚೆ ಆಗಬೇಡವೆ?

ಅದೂ ಮಾಡೋಣವಂತೆ-ಮೊದಲು ಇದು ನಿರ್ಧಾರ ಆಗಲಿ!

ಇದನ್ನು ನೋಡಿದರೆ ಶನಿ ಮಹಾರಾಜ-ವಿಕ್ರಮಾದಿತ್ಯನ ಕತೆ ನೆನಪಿಗೆ ಬರುತ್ತೆ. ಆ ಕತೆಯಲ್ಲಿ ವಿಕ್ರಮಾದಿತ್ಯ ಮಹಾರಾಜನಿಗೆ ಶನಿ ವಕ್ಕರಿಸುತ್ತಾನೆ. ಶನಿಕಾಟ ಅಂದರೆ ಅಂತಿಂತಹದ್ದಲ್ಲವಲ್ಲ. ಮಾಡದೇ ಇರುವ ತಪ್ಪು ಅಪರಾಧವಾಗಿ ಗೋಚರಿಸುವಂತೆ ಮಾಡ್ತಾನೆ ಆ ಶನಿದೇವರು. ಶನಿ ಕಾಟದಿಂದ ಮಹಾರಾಜ ಮಾಜಿ ಆಗ್ತಾನೆ. ಊರುರು ಅಲೆಯುತ್ತಾ ಯಾವುದೋ ಸೂಳೆ ಮನೆಗೆ ಬಂದು ಮಲಗ್ತಾನೆ. ಅವಳು ರಾತ್ರಿ ಮಲಗುವಾಗ ತನ್ನ ಅಪರೂಪದ ಮಣಿ ಸರವನ್ನು ಬಣ್ಣದ ಗಿಳಿಯ ಪ್ರತಿಮೆಗೆ ಹಾಕ್ತಾಳೆ. ಶನಿಕಾಟ. ಆ ಗಿಣಿ ನಿಜ ರೂಪದ ಗಿಳಿಯಾಗಿ ಬಂದು ಮಣಿ ಸರವನ್ನೇ ನುಂಗಿಕೊಳ್ಳುತ್ತೆ. ಬೆಳಿಗ್ಗೆ ಎದ್ದು ನೋಡಿದರೆ ಸರ ಇಲ್ಲ. ಇದ್ದೋರು ಇಬ್ಬರಲ್ಲಿ ಕದ್ದೋರು ಯಾರು ಎಂದು ವಿಕ್ರಮಾದಿತ್ಯ ಮಹಾರಾಜನ ಮೇಲೆ ಅಪವಾದ ಹೊರುಸ್ತಾಳೆ. ದೊರೆಗೆ ದೂರು ನೀಡ್ತಾಳೆ. ಆಮೇಲೆ ಯಥಾಪ್ರಕಾರ ವಿಕ್ರಮಾದಿತ್ಯನಿಗೆ ಶಿಕ್ಷೆ ಆಗುತ್ತೆ.

ಈ ನೈಸ್ ಅವ್ಯವಹಾರಾನೂ ವಿಕ್ರಮಾದಿತ್ಯನ ಹಾದೀನೆ ಹಿಡಿಯುವಂತೆ ತೋರುತ್ತೆ. ಮಣಿ ಸರ ನುಂಗಿದ ಗಿಣಿ ತರಹಾನೆ ಈ ಭಾಜಪ ಸರ್ಕಾರದ ಹಗರಣಗಳನ್ನೆಲ್ಲ ಗೌಡರ ಮಾತು ನುಂಗಿ ಹಾಕಿದೆ!

ಭಾವನೆಗಳ ಮೇಲೇ ನರ್ತಿಸೋ ಭಾಜಪಕ್ಕೆ ಸಿಕ್ಕೀತೆ ಇದಕ್ಕಿಂತ ಒಳ್ಳೆಯ ಅವಕಾಶ!

ಅಲ್ಲಿ ನೋಡು ಇಲ್ಲಿ ನೋಡು
ಎಲ್ಲಿಯೇ ನೋಡು
ಹಗರಣಗಳ ಮಾತೇ ಇಲ್ಲ
ಗೌಡರ ಮಾತೇ ಇಲ್ಲೆಲ್ಲ! ●

ಒಬ್ಬ ಡಾನ್, ಮತ್ತೊಬ್ಬ ಕ್ಲೌನ್



ಕರಾವಳಿಯ 'ಕಾವಿ ರಾಜಕಾರಣ'ದ ಕಿಂಗ್ ಮೇಕರ್ ಇಬ್ಬರು ಎಂಬ 'ಲಂಕೇಶ್' ಅಭಿಪ್ರಾಯ (ಪೇಜಾವರ-ಕಾಗೇರಿ ಧರ್ಮ ಕಾರಣ, ಲಂಕೇಶ್-ಜನವರಿ 13) ಸತ್ಯ. ಒಂದರ್ಥದಲ್ಲಿ ರಾಜ್ಯ ಬಿಜೆಪಿ ಸರ್ಕಾರದ ಹೆಡ್ ಆಫೀಸ್ ಇರೋದೇ ದಕ್ಷಿಣ ಕನ್ನಡದಲ್ಲಿ, ಎಲುಬಿಲ್ಲದ ಸೋಗಲಾಡಿ ಮುಖ್ಯಮಂತ್ರಿ ಯಡಿಯೂರಪ್ಪನನ್ನು ತಮ್ಮ ಕಿರುಬೆರಳಿನಲ್ಲಿ ಕುಣಿಸುವಂತ ಆಸಾಮಿಗಳೇ (ರಾಜ್ಯಾಧ್ಯಕ್ಷ ಸದಾನಂದ ಗೌಡರನ್ನು ಬಿಟ್ಟು) ಇಲ್ಲಿದ್ದಾರೆ. ಅವರಲ್ಲೊಬ್ಬ ದೇಶಭಕ್ತಿಯ ಹೆಸರಲ್ಲಿ ಹಿಂದೂ ಡಾನ್ ಆಗಿ ಮೆರೆಯುತ್ತಿರುವ ಕಲಡ್ಕ ಭಟ್ಟನಾದರೆ, ಮತ್ತೊಬ್ಬ ತನ್ನ ರಾಜಕೀಯ ಹಾಗೂ ಹಿಂದೂತ್ವದ ತೆವಲುಗಳ ಹೆಸರಲ್ಲಿ ಆಗಾಗ ನಗೆಪಾಟಲಿಗೆ ಗುರಿಯಾಗುತ್ತಿರುವ ಕ್ಲೌನ್ ಶ್ರೀ ಶ್ರೀ ಶ್ರೀ ಪೇಜಾವರರು.

ಬಾವ ರಾಮಭಟ್ಟರನ್ನೇ ಮೂಲೆಗೆಸೆದು ಜಯಶಾಲಿಯಾದ ಮೇಲೆ ತನಗಿಂತ ತಾಕತ್ ವಾಲ ಯಾರೂ ಇಲ್ಲವೆಂಬ ಭ್ರಮೆಗೊಳಗಾಗಿರುವ ಕಲಡ್ಕ ಭಟ್ರ ಪಾಳೇಗಾರಿಕೆ ಎಂಥದೆಂಬುದಕ್ಕೆ ಮೊನ್ನೆ ಸುಳ್ಯದಲ್ಲಿ ನಡೆದಂತಹ ಘಟನೆಯೇ ಸಾಕ್ಷಿ. ಈತ ಹೇಳಿಕೇಳಿ ಮಂತ್ರಿಯೂ ಅಲ್ಲ, ಶಾಸಕನೂ ಅಲ್ಲ, ಯಾವ ಕಾಲಕ್ಕೂ ಜನಪ್ರತಿನಿಧಿ ಕೂಡ ಆದವನಲ್ಲ, ಆದರೂ ಈತನಿಗೆ ಭದ್ರತಾಪಡೆಯನ್ನ ಒದಗಿಸಲಾಗಿದೆ. ಮೊನ್ನೆ ಸುಳ್ಯ ದಾರಿಯಾಗಿ ಈ ಹಿಂದೂ ಡಾನ್ ಬರುತ್ತಿರುವಾಗ ರಸ್ತೆ ದಾಟುತ್ತಿದ್ದ ದಾರಿಹೋಕನ ಕೈ ವಾಹನದ ಕನ್ನಡಿಗೆ ತಾಗಿತೆಂಬ ಕ್ಷುಲ್ಲಕ ಕಾರಣಕ್ಕೆ ಇದೇ ಡಾನ್ ಹಿಂದೂವೇ ಆದ ಮೋನಪ್ಪ ಎಂಬ ದಾರಿಹೋಕನಿಗೆ ಬಡಿಯಲು ಕಲಿಸಿ ಥಳಿಸಿದ್ದು 'ಲವ್ ಜಿಹಾದ್' ಬಗ್ಗೆ ಪ್ರತಿನಿತ್ಯ ಬಾಯಿ ಬಡಕೊಳ್ಳುವ ಯಾವ ಪತ್ರಿಕೆಯಲ್ಲೂ (ಸ್ಥಳೀಯ ಪತ್ರಿಕೆಯೊಂದನ್ನು ಬಿಟ್ಟು) ಸುದ್ದಿಯಾಗಲೇ ಇಲ್ಲ. ಒಂದು ಕಾಲದಲ್ಲಿ ಬೆಂಗಳೂರಲ್ಲಿ ಮೆರೆದ ಪುತ್ತೂರು ಮೂಲದ ನಿಜವಾದ ಡಾನ್ ಕೂಡ ಇಂತಹ ಉದ್ಧಟತನ ತೋರಲು ಹೋಗಲಾರ ಎಂಬುದು ಸ್ಥಳೀಯರ ಮಾತು.

ನಾನು ಯಾರಿಗೂ ಕ್ಯಾರ್ ಮಾಡಲ್ಲ, ಯಾರ ಟೀಕೆಗಳಿಗೂ ತಲೆಕೆಡಿಸಿಕೊಳ್ಳಲ್ಲ ಅಂತ ಪದೇಪದೇ ಹೇಳುವ ಯಡಿಯೂರಪ್ಪ ರೀತಿಯ ಮಾತುಗಳಿಗೆ ಮನಶಾಸ್ತ್ರಜ್ಞರು ಹೇಳುವ ಉತ್ತರವೆಂದರೆ, ಇಂತಹವರು ತಮ್ಮ 'ಈ' ದೌರ್ಬಲ್ಯವನ್ನ ಮುಚ್ಚಿಕೊಳ್ಳುವ ಸಲುವಾಗಿ ಇಂತಹ ಮಾತುಗಳನ್ನು ಹೆಚ್ಚೆಚ್ಚು ಆಡುತ್ತಾರೆಂಬುದು. ಅಂದರೆ ಇಂಥ ಮಾತನ್ನ ಆತ ಹೆಚ್ಚೆಚ್ಚು ಹೇಳಿದಷ್ಟು ವಾಸ್ತವವಾಗಿ ಆತ ಅದೇ ಆಗಿರುತ್ತಾನೆ. ತನ್ನ ವಿರೋಧಾಭಾಸದ ಕೆಲಸ ಕಾರ್ಯಗಳಿಂದ ಸದಾ ಟೀಕೆಗಳಿಗೊಳಗಾಗುವ ಪೇಜಾವರರ "ಟೀಕೆಗಳಿಗೆ ತಲೆಕೆಡಿಸಿಕೊಳ್ಳಲಾರೆ" ಎಂಬ ಮಾತು ಇಲ್ಲಿ ಗಮನಾರ್ಹವಾದುದು.

-ಎಸ್.ಎಸ್.ಗೇರುಕಟ್ಟೆ



ಡಿಸೆಂಬರ್ 30ರ ಸಂಚಿಕೆಯಲ್ಲಿ ಪ್ರಕಟವಾದ ಮುಖಗಳ ಕುರಿತ ವರದಿಗೆ ನನ್ನ ಪ್ರತಿಕ್ರಿಯೆ. ನಿಮ್ಮ ಪತ್ರಿಕೆ ರಾಘವೇಶ್ವರ ಸ್ವಾಮಿಯ ಬೆನ್ನು ಬಿಟ್ಟ ಹಾಗೆ ಕಾಣುವುದಿಲ್ಲ, ನಿಮ್ಮ ಈ ಪ್ರಯತ್ನಕ್ಕೆ ನಮ್ಮ ಬೆಂಬಲವೂ ಇದೆ. ಸಮಾಜದಲ್ಲಿರುವ ಅಸಹಾಯಕರಿಗೆ, ಮುಗ್ಧರಿಗೆ, ಆಧ್ಯಾತ್ಮಿಕ ಹಸಿವು ಉಳ್ಳವರಿಗೆ, ಹೀಗೆ ಹತ್ತು ಹಲವು ವಿಧದ ಮನೋಭಾವದವರಿಗೆ ಒಂದು ನಂಬಿಕೆಯ ತಾಣವಾಗಬೇಕಿದ್ದ ಮಠಗಳು ಇಂದು ಒಬ್ಬ ಸಾಮಾನ್ಯ ಮನುಷ್ಯನಿಗಿರುವ ವಿವೇಕವೂ ಇಲ್ಲದ ಅವುಗಳ ಮುಖ್ಯಸ್ಥರಿಂದಾಗಿ ಶೂನ್ಯ ಸ್ಥಿತಿಯನ್ನು ತಲುಪಿದ್ದಾರೆ ಎನಿಸುತ್ತಿದೆ.

ಪರಿಸರ, ಗೋವುಗಳಷ್ಟೆ ಪ್ರಮುಖವಾದ ವಿಷಯ ಮನುಕುಲದ ಸಮಾನತೆ. ಸಹಸ್ರಾರು ವರ್ಷಗಳಿಂದ ಅವಮಾನಿತರಾಗಿ ಬದುಕುತ್ತಿದ್ದರೂ ಅವರಿಗೊಂದು ಸ್ವಾಭಿಮಾನದ ಬದುಕು ನಡೆಸುವ ಹಕ್ಕಿದೆ ಎಂಬುದನ್ನು ತಿಳಿಯದ, ತಿಳಿದರೂ ಅದನ್ನು ಪಾಲಿಸದ ಮೂರ್ಖರು ಎಷ್ಟು ಭೋಜನ ನಡೆಸಿದರೇನು? ಎಷ್ಟು ಯಾಗ ಮಾಡಿದರೇನು? ಅನ್ನ-ಆಹಾರಗಳಲ್ಲಿ ಭಿನ್ನವೆಣಿಸುವ ಮನಗಳಿರುವಾಗ ನಾವೆಲ್ಲ ಒಂದು ಎಂಬುದೇ ಒಂದು ದೊಡ್ಡ ನಯವಂಚನೆಯಾಗಿ ಬಿಡುತ್ತದೆ. ಅಧಿಕಾರ, ಹಣದಾಸೆಗಾಗಿ ರಾಜಕಾರಣಿಗಳನ್ನೇ ನಾಚಿಸುವಂತೆ ವರ್ತಿಸುವ ಮಠಾಧೀಶರು ಒಮ್ಮೆ ಆತ್ಮಾವಲೋಕನ ಮಾಡಿಕೊಳ್ಳಬೇಕು.

ಜನರ ಸ್ವಾರ್ಥ, ವಂಚನೆ, ಕಪಟ, ಹೆಚ್ಚಾದಾಗ ಮನನೊಂದು ಮಠದಿಂದಲೇ ಹೊರಹೋಗುವ ಮಾಜಿ ಸ್ವಾಮಿಗಳಾದ ನಂದೀಶ್ವರರಂತಹ ಸೂಕ್ಷ್ಮಾತಿಗಳು ಇದ್ದಾರೆ ಎಂಬುದೇ ನೆಮ್ಮದಿಯ ಸಂಗತಿ. ಆದರೆ ನನಗೊಂದು ಅನುಮಾನ: ಈ ಜನ ಅವರನ್ನು ಅವರ ಪಾಡಿಗೆ ಬಿಡುತ್ತಾರ? ಅಥವಾ ಅಂದವಳ್ಳಿಯಲ್ಲೊಂದು ಅಂದದ ಮಠವ ಕಟ್ಟಿ ಬೆಳೆಸಿ ಮತ್ತೆ ಅಲ್ಲಿಂದಲೂ ಅವರನ್ನು ಓಡಿಸುತ್ತಾರ? ಏಕೆಂದರೆ ಕೆಲವೊಮ್ಮೆ 'ಗಂಡ ಬಿಟ್ರು ಗ್ರಹಚಾರ ಬಿಡೋದಿಲ್ಲ' ಎಂಬ ಮಾತೇ ಇದೆ.

ಹೋಗಲಿ, ಮಠಗಳು ತಮ್ಮ ಮೂಲ ಪಾವಿತ್ರ್ಯತೆಯನ್ನು ಉಳಿಸಿಕೊಂಡಿದ್ದಾವೆಯೇ ಎಂದರೆ ಅದೂ ಅಪರೂಪವಾಗಿದೆ. ಇಂದಿನ ಬಹುತೇಕ ಮಠಗಳು ರಾಜಕಾರಣಿಗಳ ಹಡಬೆ ಹಣ ಸಂಗ್ರಹಿಸುವ ರಹಸ್ಯ ಖಜಾನೆಗಳಾಗುತ್ತಿವೆ. ಲೋಕ ಕಲ್ಯಾಣಕ್ಕಾಗಿ ಪ್ರಾಣಾರ್ಪಣೆಗೈದ ಬಸವಣ್ಣನೆಲ್ಲಿ, ಸ್ವ-ಕಲ್ಯಾಣಕ್ಕಾಗಿ ಲೋಕವನ್ನೇ ಕೊಳ್ಳೆ ಹೊಡೆಯುವ ರಾಜಕಾರಣಿಗಳು ಮತ್ತವರ ಬೆಂಬಲಕ್ಕೆ ನಿಂತ ಸ್ವಾಮಿಗಳೆಲ್ಲಿ?

ಸಾರ್ವಜನಿಕವಾಗಿ ಹಾದರದ ಸಂತೆ ನಡೆಸಿದ ರೇಣುಕಾಚಾರಿಯನ್ನ ಮಂತ್ರಿ ಮಾಡಲು ಮಧ್ಯಸ್ಥಿಕೆ ವಹಿಸುವ ಸ್ವಾಮಿಗಳೇ ಸಚಿವ ಸಂಪುಟದಲ್ಲಿದ್ದ ಒಬ್ಬಳೇ ಒಬ್ಬ ಮಹಿಳೆಯನ್ನು ತೆಗೆಯುವಾಗ ಧ್ವನಿಯೆತ್ತಲಿಲ್ಲ. ಏಕೆಂದರೆ ಅವಳು 'ಲಿಂಗ' ಧರಿಸಿರಲಿಲ್ಲ. ಇದೇ ಅಲ್ಲವೇ ಸಿದ್ಧಗಂಗಾ ಮಠದ ಸ್ವಾಮಿಗಳ ಜಾತಿ ಪ್ರೀತಿ. ಇದಕ್ಕಲ್ಲವೇ ಅವರನ್ನು 'ಕರ್ನಾಟಕ ರತ್ನ' ಎಂದು ಕರೆದಿದ್ದು?!

ಈ ಮುಖ ಗೋಮುಖ (ನಂದೀಶ್ವರರು), ಆ ಮುಖ ಗೋಮುಖ ವ್ಯಾಘ್ರ (ರಾಘವೇಶ). ವೇದಿಕೆಯ ಮೇಲಿರುವ ಗೋವಿನ ಜೊಲ್ಲು ಒರೆಸಿ ಪ್ರೀತಿ ತೋರುವ ಸ್ವಾಮೀಜಿಗೆ ಸಮಾಜದಲ್ಲಿ ಮನುಷ್ಯರನ್ನು ಪ್ರಾಣಿಗಳಿಗಿಂತ ಕಡೆಯಾಗಿ ನೋಡಿಕೊಳ್ಳುವುದನ್ನು ತಪ್ಪೆಂದು ಹೇಳುವ ಮನವೇ ಇಲ್ಲದ ಮೇಲೆ ಅಂತಹವರು ಇದ್ದರೆಷ್ಟು? ಮಠಬಿಟ್ಟು ಹೋದರೆಷ್ಟು?

ಮುಖಕ್ಕೂ ಮುಖವಾಡಕ್ಕೂ ವ್ಯತ್ಯಾಸ ಇದೆ ಎಂಬುದನ್ನು ಹರ್ಷಕುಮಾರ ಮತ್ತು ನಹುಶರ ವರದಿಗಳು ತಿಳಿಸುತ್ತವೆ. ಇದು ಕೇವಲ ಒಂದೇ ಧರ್ಮಕ್ಕೆ ಸೀಮಿತವಾಗದಿರಲಿ. ಇಂತಹ ಕಳ್ಳರು ಎಲ್ಲೆಡೆಯೂ ಇದ್ದಾರೆ ಎಂಬುದು ಎಲ್ಲಾ ಧರ್ಮದ ಮುಗ್ಧ ಭಕ್ತರಿಗೆ ಮನವರಿಕೆಯಾಗಲಿ.

-ಮಂಜಣ್ಣ ಸೊರಬ

(ನಿಮ್ಮ ಅನಿಸಿಕೆ ಅಭಿಪ್ರಾಯಗಳನ್ನು ನುಡಿ/ಬರಹದಲ್ಲಿ lankesh70@rediffmail.comಗೆ ಕಳಿಸಬಹುದು)

• ಲಾಭಕ್ಕಾಗಿ ವಿಷ್ಣು ಭಜನೆ! •

ವಿಷ್ಣುವರ್ಧನ್ ನಿಧನದ ನಂತರ ಅವರಿಗೆ ಶ್ರದ್ಧಾಂಜಲಿ ಅರ್ಪಿಸಲು ಗಾಂಧಿನಗರದಲ್ಲಿ ವಿಚಿತ್ರ ರೀತಿಯ ಪೈಪೋಟಿ ನಡೆಯುತ್ತಿದೆ.

ವಿಷ್ಣು ನಿಧನದ ಅನುಕಂಪದ ಅಲೆಯಲ್ಲಿ ತಮ್ಮ ಚಿತ್ರವನ್ನು ತೇಲಿಬಿಡಲು ನಿರ್ಮಾಪಕರಾದ ಮನೋಹರ್ ಮತ್ತು ಕೃಷ್ಣಕುಮಾರ್ ತುದಿಗಾಲಲ್ಲಿ ನಿಂತಿದ್ದಾರೆ. ಇನ್ನೂ ಒಂದೆರಡು ದಿನದ ಶೂಟಿಂಗ್ ಬಾಕಿಯಿದ್ದರೂ 'ಸ್ಕೂಲ್ ಮಾಸ್ಟರ್' ಚಿತ್ರದ ನಿರ್ಮಾಪಕ ಮನೋಹರ್ 12ರಂದು ಚಿತ್ರ ಬಿಡುಗಡೆ ಮಾಡುತ್ತೇನೆಂದು ಘೋಷಿಸಿದ್ದಾರೆ.

ಇದರಿಂದ 'ಆಪ್ತರಕ್ಷಕ' ಚಿತ್ರದ ನಿರ್ಮಾಪಕ ಕೃಷ್ಣಕುಮಾರ್ ಕಂಗಾಲಾಗಿದ್ದಾರೆ. ಯಾಕೆಂದರೆ ರೀ-ರೆಕಾರ್ಡಿಂಗ್ ಮುಗಿಸಿದ ನಂತರ ಫೆಬ್ರವರಿ 5ರಂದು ಚಿತ್ರ ಬಿಡುಗಡೆ ಮಾಡುತ್ತೇನೆಂದು ಅವರು ಥಿಯೇಟರ್ ಮಾಲೀಕರ ಜೊತೆ ಒಪ್ಪಂದವನ್ನು ಈಗಾಗಲೇ ಮಾಡಿಕೊಂಡಿದ್ದಾರೆ.

'ಸ್ಕೂಲ್ ಮಾಸ್ಟರ್' ಚಿತ್ರದ ನಿರ್ಮಾಪಕ ಮನೋಹರ್ ಮತ್ತು ಅವರ ಸಹನಿರ್ಮಾಪಕರಾದ ಉಮೇಶ್ ಬಣಕಾರ್ ಮತ್ತು ಗಣೇಶ್ ಕ್ಯೂ ಪದ್ಧತಿಯನ್ನು ಓವರ್‌ಟೇಕ್ ಮಾಡಿ ಚಿತ್ರ ಬಿಡುಗಡೆ ಮಾಡಲು ಹೊರಟಿರುವುದು ಎಲ್ಲ ಸಮಸ್ಯೆಗಳಿಗೆ ಮೂಲವಾಗಿದೆ. ಇದರೊಂದಿಗೆ 'ಸ್ಕೂಲ್ ಮಾಸ್ಟರ್' ಚಿತ್ರ ಬಿಡುಗಡೆಯಾದ ನಂತರ ವಿಷ್ಣು ಸಾರ್‌ಗೆ ಗೌರವ ಸೂಚಿಸುವ ದೃಷ್ಟಿಯಿಂದ ಕನಿಷ್ಠ 3-4 ವಾರ ಬೇರೆ ಯಾವುದೇ ಹೊಸ ಚಿತ್ರವನ್ನು ಬಿಡುಗಡೆ ಮಾಡಬಾರದು ಎಂದು ವಾಣಿಜ್ಯ ಮಂಡಳಿ ಉಪಾಧ್ಯಕ್ಷ ಸಾ.ರಾ.ಗೋವಿಂದು ತನ್ನ ಅನಿಸಿಕೆಯನ್ನು ಮುಂದಿಟ್ಟಿದ್ದು ಮತ್ತೊಂದು ಹೊಸ ಸಮಸ್ಯೆಯನ್ನು ಸೃಷ್ಟಿಸಿದೆ. ಗೋವಿಂದು ಅವರ ಅನಿಸಿಕೆ ಈಗಾಗಲೇ ಗಾಂಧಿನಗರದಲ್ಲಿ ಬಿಸಿಬಿಸಿ ಚರ್ಚೆಗೆ ಅವಕಾಶ ಮಾಡಿಕೊಟ್ಟಿದೆ.

ಇಂತಹ ಶ್ರದ್ಧಾಂಜಲಿ ವೀರರಿಗೆ ಸುದೀಪ್ ಸಿಡಿಲಿನ ಉತ್ತರ ಕೊಟ್ಟು ತನ್ನ ಅಸಮಾಧಾನವನ್ನು ವ್ಯಕ್ತಪಡಿಸಿದ್ದಾರೆ.


"ವಿಷ್ಣು ಸಾರ್‌ಗೆ ಗೌರವ ಹೇಗೆ ಕೊಡಬೇಕೆಂದು ಅವರು ನಮಗೆ ಪಾಠ ಕಲಿಸಿಕೊಡಬೇಕಾಗಿಲ್ಲ; ಆದರೂ ಹಿರಿಯರ ಮಾತಿಗೆ ಬೆಲೆಕೊಟ್ಟು ನನ್ನ 'ಜಸ್ಟ್ ಮಾತ್‌ಮಾತಲ್ಲಿ' ಬಿಡುಗಡೆ ದಿನಾಂಕವನ್ನು ಅವರೇ ಹೇಳಿದಂತೆ ಗೌರವದ ರೂಪದಲ್ಲೇ ಮುಂದೆ ಹಾಕಿದ್ದೇನೆ. ಆದರೆ ಮುಂದಿನ ದಿನಾಂಕವನ್ನು ಚೇಂಬರ್‌ನವರು ಸುಸೂತ್ರವಾಗಿ ನನಗೆ ನೀಡದಿದ್ದಲ್ಲಿ ಇಡೀ ಕರ್ನಾಟಕದಲ್ಲಿರುವ ನಟನಟಿಯರನ್ನು ಸೇರಿಸಿ ಚೇಂಬರ್ ಎದುರುಗಡೆ ಗಲಾಟೆ ಮಾಡುತ್ತೇನೆ" ಎಂದು ಸುದೀಪ್ ಗುಡುಗಿದ್ದಾರೆ.

ಈಗ ವಿಷ್ಣು ನಟಿಸಿರುವ 'ಆಪ್ತರಕ್ಷಕ' ಮತ್ತು 'ಸ್ಕೂಲ್ ಮಾಸ್ಟರ್' ಚಿತ್ರಗಳೆರಡೂ ಎರಡು 'ಕೋಹಿನೂರ್ ವಜ್ರಗಳಿದ್ದಂತೆ. ಅದನ್ನು ಚೆನ್ನಾಗಿ ಮಾಡಿ ಮಾರ್ಕೆಟಿಂಗ್, ಪಬ್ಲಿಸಿಟಿ ಮಾಡಿ ಆ ಚಿತ್ರ ಗೆಲ್ಲುವಂತೆ ಮಾಡಬೇಕು. ಅದು ಬಿಟ್ಟು ಹಸಿಹಸಿಯಾಗಿ ಹಣ ಮಾಡುವ ಏಕೈಕ ದೃಷ್ಟಿಯಿಂದ ಇವರು ಪೈಪೋಟಿಯಲ್ಲಿ ಬಿಡುಗಡೆ ಮಾಡುತ್ತಿರುವುದು ಸರಿಯಲ್ಲ ಎನ್ನುತ್ತಾರೆ ಸುದೀಪ್. ಈ ಚಿತ್ರ ಬಾಕ್ಸಾಫೀಸ್‌ನಲ್ಲಿ ಸೋತರೆ ಅದು ವಿಷ್ಣು ಸಾರ್‌ಗೆ ಅಗೌರವ ತೋರಿಸಿದಂತಾಗುತ್ತದೆ. ಹಾಗಾಗದಂತೆ ನೋಡಬೇಕೆ ವಿನಃ ಈ ಪೈಪೋಟಿ ಸರಿಯಲ್ಲ ಎಂಬುದು ಸುದೀಪ್ ಅಭಿಪ್ರಾಯ.

'ಸ್ಕೂಲ್ ಮಾಸ್ಟರ್' ಚಿತ್ರ ಎರಡು ವರ್ಷಗಳ ಹಿಂದೆ ಆರಂಭವಾಗಿತ್ತು. ಮಧ್ಯದಲ್ಲಿ ಅದರ ನಿರ್ಮಾಪಕ ಮನೋಹರ್ ಚುನಾವಣೆಗೆ ನಿಂತಿದ್ದರಿಂದ ಅರ್ಧಕ್ಕೆ ನಿಂತು ಹೋಗಿತ್ತು. ಅನಂತರ ಅವರು ತೆಲುಗಿನಲ್ಲಿ ನಟ ಶ್ರೀಕಾಂತ್ ಅವರ 100ನೇ ಚಿತ್ರ 'ಮಹಾತ್ಮ'ನನ್ನು ಮಾಡಲು ಹೊರಟರು. 'ಸ್ಕೂಲ್ ಮಾಸ್ಟರ್' ಮತ್ತೆ ಅರ್ಧಕ್ಕೆ ನಿಂತಿತ್ತು. ಇತ್ತೀಚೆಗಷ್ಟೇ ವಿಷ್ಣುವರ್ಧನ್ ತಮ್ಮ ಮನೆಯಲ್ಲಿ ಕರೆದ ಕೊನೆಯ ಪತ್ರಿಕಾಗೋಷ್ಠಿಯಲ್ಲಿ 'ಸ್ಕೂಲ್ ಮಾಸ್ಟರ್' ಚಿತ್ರದ ನಿರ್ದೇಶಕ ದಿನೇಶ್ ಬಾಬು ಬಗ್ಗೆ ತೀವ್ರ ಅಸಮಾಧಾನ ವ್ಯಕ್ತಪಡಿಸಿದ್ದರು. ಅಷ್ಟೇ ಅಲ್ಲ, ಅನೇಕ ಭಾಗಗಳನ್ನು ರೀ-ಶೂಟ್ ಮಾಡುವ ವಿಷಯವನ್ನು ಕೂಡಾ ಪ್ರಸ್ತಾಪಿಸಿದ್ದರು. ಈಗ ಅದೆಲ್ಲದಕ್ಕೂ ದೊಡ್ಡ ಸಲಾಂ ಹಾಕಿರುವ ದಿನೇಶ್ ಬಾಬು ಚಿತ್ರ ಬಿಡುಗಡೆ ಮಾಡಲು ಹೊರಟಿರುವುದು ಅಗೌರವವಲ್ಲವೇ?

ವಿಷ್ಣು ಬದುಕಿರುವಾಗ ಅವರಿಗೆ ಗೌರವ ಕೊಡುವುದನ್ನು ಮರೆತಿದ್ದ ಜನ ಈಗ ಉಳಿದವರಿಗೆ ಗೌರವದ ಪಾಠ ಕಲಿಸುವ ಬಗ್ಗೆ ಪ್ರಸ್ತಾಪಿಸುತ್ತಾ ಸುದೀಪ್ ಮಾರ್ಮಿಕವಾಗಿ ಮಾತನಾಡಿದ್ದನ್ನು ಇಲ್ಲಿ ಹೇಳಲೇಬೇಕು.

"'ಒಂದುವೇಳೆ ವಿಷ್ಣು ಬದುಕಿ ಬಂದರೆ 'ಅರೇ ನೀವು ಬದುಕಿದ್ದೀರಾ? ಚಿತ್ರ ಬಿಡಗಡೆ ಮಾಡಬೇಕು' ಎಂದು ಹೇಳಿ ಅವರ ತಲೆಗೆ ಹೊಡೆದು ಅವರನ್ನು ಸಾಯಿಸಿಬಿಡುವಷ್ಟು ನಮ್ಮ ಜನ ಕೆಟ್ಟುಹೋಗಿದ್ದಾರೆ. ಹೀಗೆ ಒಬ್ಬರ ಸಾವಿನ ಹೆಸರಿನಲ್ಲಿ ಅದರ ಅನುಕಂಪವನ್ನು ಪಡೆದು ವ್ಯಾಪಾರ ಮಾಡುವ ಜನರ ಬಗ್ಗೆ ನನಗೆ ಹೇಸಿಗೆಯಾಗುತ್ತದೆ" ಎಂದು ಸುದೀಪ್ ಆಕ್ರೋಶ ವ್ಯಕ್ತಪಡಿಸಿದ್ದಾರೆ.



ಇಂತಹ ಗೊಂದಲಮಯ ವಾತಾವರಣದಲ್ಲಿ ವಿಷ್ಣು ಅವರ 'ಆಪ್ತಮಿತ್ರ' ದ್ವಾರಕೀಶ್ ಕೂಡಾ ಉರಿಯುವ ಬೆಂಕಿಗೆ ತುಪ್ಪ ಸುರಿಯುವ ಕೆಲಸ ಮಾಡಿದ್ದಾರೆ. ವಿಷ್ಣು ಅವರಿಗೆ ಗೌರವ ಸೂಚಿಸುವ ದೃಷ್ಟಿಯಿಂದ ವಿಷ್ಣು ಅಭಿನಯದ 'ಆಪ್ತಮಿತ್ರ' ಚಿತ್ರವನ್ನು ಪುನಃ ಬಿಡುಗಡೆ ಮಾಡಲು ದ್ವಾರಕೀಶ್ ಯೋಚಿಸಿರುವುದು ಎಲ್ಲರ ನಿದ್ದೆಗೆಡಿಸಿದೆ. ಯಾಕೆಂದರೆ 'ಆಪ್ತಮಿತ್ರ' ಬಿಡುಗಡೆಯಾಗಿದ್ದೇ ಆದಲ್ಲಿ ಬಹುತೇಕ ಹೊಸ ಚಿತ್ರಗಳಿಗೂ ಇದರಿಂದಾಗಿ ತೊಂದರೆಯಾಗುವುದು ಗ್ಯಾರಂಟಿ.

ತಮಾಷೆಯೆಂದರೆ ಎಲ್ಲರೂ ಚಿತ್ರ ಬಿಡುಗಡೆ ಮಾಡುತ್ತಾರೆ, ಅಥವಾ ಮರುಬಿಡುಗಡೆ ಮಾಡುತ್ತಿರುವ ಈ ಸಂದರ್ಭದಲ್ಲಿ ನಾವ್ಯಾಕೆ ತೆಪ್ಪಗೆ ಕುಳಿತುಕೊಳ್ಳಬೇಕು ಎಂದು ಆಲೋಚಿಸಿ "ನಾವು ಕೂಡಾ ವಿಷ್ಣು ಆತ್ಮಕ್ಕೆ ಗೌರವ ಸೂಚಿಸುವ ದೃಷ್ಟಿಯಿಂದ ಚಿತ್ರವನ್ನು ಪುನಃ ಬಿಡುಗಡೆ ಮಾಡಬೇಕು" ಎಂದು 'ಬಳ್ಳಾರಿ ನಾಗ' ಚಿತ್ರದ ನಿರ್ಮಾಪಕರು ಆಲೋಚಿಸಿದ್ದಾರಂತೆ! ಇದಕ್ಕೆ ಪ್ರತಿಕ್ರಿಯಿಸಿದ ಗಾಂಧಿನಗರದ ಜನ 'ಬಳ್ಳಾರಿ ನಾಗ' ಪುನಃ ಬಿಡುಗಡೆಯಾದರೆ ವಿಷ್ಣು ಮತ್ತೊಮ್ಮೆ ಸಾಯುತ್ತಾರೆ ಎಂದು ಗಾಬರಿ ವ್ಯಕ್ತಪಡಿಸಿದ್ದಾರೆ.

ಹೀಗೆ ವಿಷ್ಣುಗೆ ಶ್ರದ್ಧಾಂಜಲಿ ಅರ್ಪಿಸುವ ನೆಪದಲ್ಲಿ ತಮ್ಮ ಚಿತ್ರಗಳನ್ನು ಬಿಡುಗಡೆ ಮಾಡಿ ಹಣ ಮಾಡಲು ಹೊರಟಿರುವುದು ಈ ಗಾಂಧಿನಗರದ ಜನರ ನಿಜವಾದ ಬಣ್ಣವನ್ನು ತೋರಿಸುತ್ತಿದೆ. ಚಿತ್ರ ಬಿಡುಗಡೆ ಮಾಡದೇ ವಿಷ್ಣು ಆತ್ಮಕ್ಕೆ ಗೌರವ ಸಲ್ಲಿಸಲು ಇವರಿಂದ ಸಾಧ್ಯವಿಲ್ಲವೆಂದು ತೋಚುತ್ತದೆ.

ಈ ಮಧ್ಯೆ ಕೆಲವು ಸಂಧಾನ ಸೂತ್ರಗಳನ್ನು ಉದ್ಯಮದ ಅನೇಕ ಪಂಡಿತರು ಮುಂದಿಟ್ಟಿದ್ದಾರೆ. ಅವುಗಳಲ್ಲಿ 'ಆಪ್ತರಕ್ಷಕ' ಮತ್ತು 'ಸ್ಕೂಲ್ ಮಾಸ್ಟರ್' ಚಿತ್ರಗಳನ್ನು ಒಂದೇ ದಿನ ಬಿಡುಗಡೆ ಮಾಡಿದರೆ ಹೇಗೆ ಎಂಬ ರಾಜಿ ಸೂತ್ರವೂ ಒಂದು. ಈ ರಾಜಿ ಸೂತ್ರಕ್ಕೆ 'ಸ್ಕೂಲ್ ಮಾಸ್ಟರ್' ನಿರ್ಮಾಪಕ ಮನೋಹರ್ ಸುತರಾಂ ಒಪ್ಪುತ್ತಿಲ್ಲ. "ನಾವು ಎರಡು ವರ್ಷಗಳ ಹಿಂದೆಯೇ ಚಿತ್ರ ಆರಂಭಿಸಿದ್ದೇವೆ. ಹೀಗಾಗಿ ನಮ್ಮ ಚಿತ್ರವೇ ಮೊದಲು ತೆರೆಕಾಣಬೇಕು" ಎಂಬುದು ಅವರ ಹಠ.

ಮತ್ತೊಂದು ಸೂತ್ರ ಹೀಗಿದೆ: ಯಾರ್ಯಾರು ವಿಷ್ಣು ಚಿತ್ರಗಳನ್ನು ಬಿಡುಗಡೆ ಮಾಡಬೇಕೋ ಅವರೆಲ್ಲರೂ ನಿಗದಿಪಡಿಸಿದ ಒಂದೇ ದಿನಾಂಕದಲ್ಲಿ ಬಿಡುಗಡೆ ಮಾಡಬೇಕು. ಯಾವ ಚಿತ್ರ ಗಟ್ಟಿ ಇದೆಯೋ ಅದು ಗೆಲ್ಲಲಿ ಎಂಬುದು ಈ ಸೂತ್ರದ ಉದ್ದೇಶ. ಇದಕ್ಕೂ ಯಾವುದೇ ನಿರ್ಮಾಪಕ ತಯಾರಿಲ್ಲವೆಂಬುದು ನಿಮಗೆ ಹೇಳಬೇಕಾದ ಅಗತ್ಯವಿಲ್ಲ ತಾನೇ?

ಹೀಗೆ ವಿಷ್ಣು ಶ್ರದ್ಧಾಂಜಲಿ ನೆಪದಲ್ಲಿ ಗಾಂಧಿನಗರದಲ್ಲಿ ಒಂದು ಸಣ್ಣ ವೈಮನಸ್ಸು, ಶೀತಲ ಸಮರದ ಅಧ್ಯಾಯ ಪ್ರಾರಂಭವಾಗಿದೆ. ಅಗಲಿದ ಮಹಾನ್ ನಟ ವಿಷ್ಣುವಿನ ಅಭಿಮಾನಿಗಳು ಎಲ್ಲಿ ಬೇಸರ ಮಾಡಿಕೊಳ್ಳುತ್ತಾರೋ ಎಂಬ ಅಂಜಿಕೆಯಲ್ಲಿ ಕೆಲವರು ಸುಮ್ಮನೆ ಕುಳಿತುಕೊಂಡಿದ್ದಾರೆ. ಆದರೆ ವಿಷ್ಣು ಜೊತೆಗೆ ನಿಕಟ ಸಂಬಂಧ-ಬಾಂಧವ್ಯ ಹೊಂದಿರುವ ಸುದೀಪ್ ಮಾತ್ರ ಚೇಂಬರ್‌ನವರ ಈ ಅರ್ಥಹೀನ, ವ್ಯಾಪಾರೀ ಮನೋಭಾವದ ಶ್ರದ್ಧಾಂಜಲಿಯನ್ನು ಹಿಗ್ಗಾಮುಗ್ಗಾವಾಗಿ ಬೈಯುತ್ತಾ ಬಯಲಿಗೆಳೆಯುತ್ತಿದ್ದಾರೆ.

ಒಂದು ಬೇಸರದ ವಿಷಯವೆಂದರೆ ಈ ಜನ ವಿಷ್ಣು ಅವರ ಧರ್ಮಪತ್ನಿ ಭಾರತಿ ವಿಷ್ಣುವರ್ಧನ್ ಅವರನ್ನು ಯಾವುದೇ ವಿಷಯಕ್ಕಾಗಿ ಸಂಪರ್ಕಿಸದಿರುವುದು. ಎಲ್ಲರೂ ಅವರವರ ಮೂಗಿನ ನೇರಕ್ಕೆ ಮಾತನಾಡಿಕೊಳ್ಳುತ್ತಿದ್ದಾರೆಯೇ ವಿನಃ ವಿಷ್ಣುಗೆ ಯಾವ ರೀತಿಯಲ್ಲಿ ಶ್ರದ್ಧಾಂಜಲಿ ಅರ್ಪಿಸಿದರೆ ಸೂಕ್ತ ಎಂದು ಭಾರತಿಯವರೊಂದಿಗೆ ಚರ್ಚಿಸಿಲ್ಲ.

ವಿಷ್ಣು ನಿಧನದ ಅನುಕಂಪದ ಅಲೆಯಲ್ಲಿ ಹಣ ಮಾಡಲು ಹೊರಟಿರುವ ಈ ಜನರ ವರ್ತನೆ ಮತ್ತು ಮಾತುಗಳು ನಿಜಕ್ಕೂ ಎಲ್ಲರೂ ತಲೆತಗ್ಗಿಸುವಂತೆ ಮಾಡಿದೆ. ಇಂತಹ ವರ್ತನೆಗಳಿಗೆ ಕಡಿವಾಣ ಹಾಕದಂತಹ ಅಸಹಾಯಕ ಪರಿಸ್ಥಿತಿಯಲ್ಲಿ ಚೇಂಬರ್ ಅಧ್ಯಕ್ಷೆ ಜಯಮಾಲಾ ಇದ್ದಾರೆ. ಹೀಗಾಗಿ ವಿಷ್ಣು ಸಾವಿನ ದುಃಖ ಮರೆಯಾಗುವ ಮೊದಲೇ ನಿರ್ಮಾಪಕರ ಕಚ್ಚಾಟಗಳು ಎಲ್ಲರೂ ಅಸಹ್ಯ ಪಡುವಂತಾಗಿದೆ.

ಹೀಗಾದರೆ ನಿಜವಾಗಲೂ ವಿಷ್ಣು ಆತ್ಮಕ್ಕೆ ಶಾಂತಿ ಸಿಗಲು ಸಾಧ್ಯವೇ?

● ಸದಾಶಿವ ಶೆಣೈ

ಹಳೇ ವೈರಿಗಳು ಈಗ ಹೊಸ ಸ್ನೇಹಿತರು



"ಜಯಮಾಲಾ ವಿರುದ್ಧ ಹೋರಾಟಕ್ಕಿಳಿಯುವ ನನಗೆ ನನ್ನ ಸ್ನೇಹಿತ ದರ್ಶನ್ ಕೂಡಾ ಬೆಂಬಲ ನೀಡಿದ್ದಾರೆ" ಎನ್ನುತ್ತಾರೆ ಸುದೀಪ್. "ಒಂದು ಕಾಲದಲ್ಲಿ ನಾನು ಮತ್ತು ದರ್ಶನ್ ಮಾತನಾಡುತ್ತಿರಲಿಲ್ಲ; ನಮ್ಮ ನಡುವೆ ಶೀತಲ ಸಮರ ನಡೆಯುತ್ತಿತ್ತು. ಅದೆಲ್ಲ ಐದಾರು ವರ್ಷಗಳ ಹಿಂದಿನ ಕತೆ. ಈಗ ನಾವಿಬ್ಬರೂ ಪ್ರಬುದ್ಧರಾಗಿದ್ದೇವೆ. ಇಬ್ಬರೂ ಪರಸ್ಪರ ಮಾತನಾಡುತ್ತೇವೆ. ಆತ ಕೂಡಾ ತನ್ನ ನಟನೆಯ 'ಪೊರ್ಕಿ' ಚಿತ್ರವನ್ನು ಮುಂದೂಡುವುದಿಲ್ಲ ಎಂದು ಘೋಷಿಸಿರುವುದನ್ನು ನಾನು ಸ್ವಾಗತಿಸುತ್ತೇನೆ" ಎನ್ನುತ್ತಾರೆ ಸುದೀಪ್. ಅಮೃತ ಮಹೋತ್ಸವದ ಸಂದರ್ಭದಲ್ಲಿ ಜಯಮಾಲಾ ಮತ್ತು ದರ್ಶನ್ ನಡುವೆ ದೊಡ್ಡ ವಾಕ್ಸಮರವೇ ನಡೆದುಹೋಗಿತ್ತು. ಆಗ ತನ್ನ ತಂದೆ ತೂಗುದೀಪ್ ಶ್ರೀನಿವಾಸ್‌ರವರ ಆತ್ಮಚರಿತ್ರೆಯನ್ನು ಪುಸ್ತಕ ರೂಪದಲ್ಲಿ ಹೊರತರದ ಚೇಂಬರ್ ನಿರ್ಧಾರದ ಬಗ್ಗೆ ದರ್ಶನ್ ಕೆಂಡಕಾರಿದ್ದರು. ಅಂದಿನಿಂದ ಜಯಮಾಲಾ ವಿರುದ್ಧ ಅಸಮಾಧಾನ ಮತ್ತು ಆಕ್ರೋಶವನ್ನು ಸಮಯಸಿಕ್ಕಾಗಲೆಲ್ಲಾ ದರ್ಶನ್ ವ್ಯಕ್ತಪಡಿಸುತ್ತಲೇ ಇದ್ದಾರೆ.


ಈಗ ಹೊಸ ವೈರಿಯ ವಿರುದ್ಧ ಹಳೆ ವೈರಿಗಳು ತಮ್ಮ ವೈರತ್ವವನ್ನು ಸ್ನೇಹಿತರಂತೆ ಒಟ್ಟು ಸೇರಿ ಹೋರಾಡುತ್ತಿರುವುದು ವಿಶೇಷವೇ ಸರಿ.





ಲಿಂಗರಾಜ್ ಕೈಪಿಡಿ

ಇತ್ತೀಚೆಗೆ ನಡೆದ ಅಮೃತಮಹೋತ್ಸವದಲ್ಲಿ ಚಿತ್ರರಂಗದ ಎಲ್ಲರನ್ನೂ ಒಂದೆಡೆ ಸೇರಿಸಲು ಚಲನಚಿತ್ರ ವಾಣಿಜ್ಯ ಮಂಡಳಿಯೇ ವಿಫಲವಾಗಿತ್ತು. ಆದರೆ ಚಿತ್ರರಂಗದ 51 ವಿಭಾಗಗಳ 5000ಕ್ಕೂ ಹೆಚ್ಚು ಜನರ ವಿಳಾಸ, ದೂರವಾಣಿ ಸಂಖ್ಯೆ ಮತ್ತು 500ಕ್ಕೂ ಹೆಚ್ಚು ಇಮೇಲ್ ಅಡ್ರಸ್‌ಗಳನ್ನು ಒಳಗೊಂಡ ಮಾಹಿತಿ ಕೈಪಿಡಿ ಬಿಡುಗಡೆಯಾಗಿದೆ.



ಸಿನಿಮಾ ಪಿ.ಆರ್.ಓಗಳಾದ ಎಂ.ಜಿ. ಲಿಂಗರಾಜ್ ಮತ್ತು ಕಲ್ಲೇಶ್ ಸಹೋದರರು ಪ್ರತೀ ಎರಡು ವರ್ಷಕ್ಕೊಮ್ಮೆ ಹೊರತರುವ 'ಸಿನಿಮಾ ಟಿವಿ ಕೈಪಿಡಿ' ಈಗ ಹೊರಬಂದಿದೆ. ಇದು ಲಿಂಗರಾಜ್ ಹೊರತಂದಿರುವ 5ನೇ ಮಾಹಿತಿ ಪುಸ್ತಿಕೆಯಾಗಿದೆ. 11 ವರ್ಷದ ತಮ್ಮ ಮಗಳು ನಂದಿನಿ ಆಕಸ್ಮಿಕವಾಗಿ ಸಾವಿಗೀಡಾದ ನಂತರ ಆ ಪುಟಾಣಿಯ ಹೆಸರಿನಲ್ಲಿ ಸುಮಾರು ಹತ್ತು ವರ್ಷದಿಂದ ಲಿಂಗರಾಜ್ ಈ ಸಿನಿಮಾ ಡೈರೆಕ್ಟರಿಯನ್ನು ಪ್ರಕಟಿಸುತ್ತಾ ಬಂದಿದ್ದಾರೆ.

ಆಕರ್ಷಕ ವಿನ್ಯಾಸದೊಂದಿಗೆ ಗುಣಮಟ್ಟವನ್ನೂ ಹೊಂದಿರುವ ಈ ವಿಳಾಸ ಕೈಪಿಡಿ ಚಿತ್ರರಂಗ ಮಾತ್ರವಲ್ಲದೆ, ಪತ್ರಕರ್ತರು ಮತ್ತು ಕಲಾವಿದ, ತಂತ್ರಜ್ಞರಿಗೂ ಉಪಯುಕ್ತವಾಗುವಂತಿದೆ.

ಪಲ್ಲವಿಯ ಅನುಪಲ್ಲವಿ...

'ಸ್ವರ ಸ್ಮರಣೆ' ಎಂಬ ಅಪೂರ್ವ ಕಾರ್ಯಕ್ರಮಕ್ಕೆ ಎಂ.ಡಿ.ಪಲ್ಲವಿ ಮುನ್ನುಡಿ ಬರೆದಿದ್ದಾರೆ. ಸುಗಮ ಸಂಗೀತ ಕ್ಷೇತ್ರದಲ್ಲಿ ಕವಿಗಳ ಹಾಡುಗಳಿಗೆ ಸ್ವರಸಂಯೋಜನೆ ಮಾಡಿದ ಸಂಗೀತ ದಿಗ್ಗಜರುಗಳನ್ನು ನೆನೆಯುವುದು ಈ ಕಾರ್ಯಕ್ರಮದ ಉದ್ದೇಶ.



ದಿವಂಗತ ಕಾಳಿಂಗರಾವ್, ಸಿ.ಅಶ್ವತ್ಥ್, ಮೈಸೂರು ಅನಂತಸ್ವಾಮಿ, ರಾಜು ಅನಂತಸ್ವಾಮಿ... ಹೀಗೆ ಎಲ್ಲರನ್ನೂ ನೆನೆಯುತ್ತಾ ಅವರ ಶೈಲಿಯಲ್ಲಿ ಹಾಡುವುದು ಪಲ್ಲವಿಯ ಕನಸು. ಈ ಕನಸಿನ ಕಾರ್ಯಕ್ರಮವನ್ನು ಅಶ್ವತ್ಥ್ ಅವರಿಂದಲೇ ಉದ್ಘಾಟಿಸುವುದು ಅವರ ಬಯಕೆಯಾಗಿತ್ತು. ಆ ಕನಸು ಈಡೇರದ ಬಗ್ಗೆ ವಿಷಾದವಿದೆ ಎನ್ನುತ್ತಾರೆ ಪಲ್ಲವಿ.

ಈ ಒಂದು ಕಾರ್ಯಕ್ರಮವನ್ನು ಮಾಡಲು ತನ್ನ ಪತಿ ಅರುಣ್ ಜೊತೆ ಸೇರಿ 'ಸಮುದ್ರ' ಎಂಬ ಸಂಸ್ಥೆಯನ್ನು ಈಕೆ ಹುಟ್ಟುಹಾಕಿದ್ದಾರೆ. ಅದೇನೇ ಇರಲಿ ತಮ್ಮ ಗುರುಗಳನ್ನು ನೆನೆಯುತ್ತಾ ಆ ಮೂಲಕ ಅವರ ಹಾಡುಗಳನ್ನು ಮತ್ತೊಮ್ಮೆ ಜನರಿಗೆ ತಲುಪಿಸುವ ಈ ವಿಶಿಷ್ಟ ಕಾರ್ಯಕ್ರಮ ಮಾಡಲು ಹೊರಟಿರುವ ಪಲ್ಲವಿ ಸುಗಮ ಸಂಗೀತ ಕ್ಷೇತ್ರದಲ್ಲಿ ಸದ್ಯಕ್ಕೆ ಅತ್ಯಂತ ಚಾಲ್ತಿಯಲ್ಲಿರುವ ಹೆಸರು ಎಂಬುದು ನಿಮಗೆ ಗೊತ್ತೇ ಇದೆ ತಾನೇ?


ಶಾಸಕಿ ಅನಿತಕ್ಕನ ಸಿನಿಮಾ



ಅನಿತಾ ಕುಮಾರಸ್ವಾಮಿ ಸಿನಿಮಾ ಮಾಡಲು ಹೊರಟಿದ್ದಾರೆ. ಈಗಾಗಲೇ ಕಸ್ತೂರಿ ಚಾನೆಲ್‌ನ ವ್ಯವಸ್ಥಾಪಕಿಯಾಗಿ ಮತ್ತು ಮಧುಗಿರಿ ಶಾಸಕಿಯಾಗಿ ಮನೆ ಮಾತಾಗಿರುವ ಅನಿತಾ ಕುಮಾರಸ್ವಾಮಿ ಅವರಿಗೆ ಸಿನಿಮಾ ನಿರ್ಮಾಣ ಒಂದು ಹೊಸ ಅನುಭವ. ಈ ಹಿಂದೆ ಅವರ ಪತಿ ಕುಮಾರಸ್ವಾಮಿ ಚಿತ್ರ ನಿರ್ಮಿಸುವಾಗ ಅವರೊಂದಿಗೆ ಓಡಾಡಿಕೊಂಡು ಪಡೆದ ಒಂದಿಷ್ಟು ಅನುಭವವೇ ಸದ್ಯಕ್ಕೆ ಇವರಿಗೆ ದಾರಿದೀಪ.

ಆದರೂ ಅನಿತಾ ಒಂದು ಹೊಸ ಮತ್ತು ವಿಭಿನ್ನವಾದ ಪ್ರಯೋಗದ ಮುಖಾಂತರ ನಿರ್ಮಾಪಕಿಯಾಗಿ ತನ್ನ ಛಾಪನ್ನು ಒತ್ತಲು ಹೊರಟಿದ್ದಾರೆ. ಅದೇನೆಂದರೆ ಅವರ ಕಸ್ತೂರಿ ಚಾನೆಲ್‌ನ ಒಂದು ರಿಯಾಲಿಟಿ ಷೋನಲ್ಲಿ ಮೊದಲ ಪ್ರಶಸ್ತಿಯನ್ನು ಪಡೆದಾತನಿಗೆ ಅವರ ಚಿತ್ರದಲ್ಲಿ ನಾಯಕನ ಪಾತ್ರವನ್ನು ನೀಡುತ್ತಾರಂತೆ! ಈ ಬಗ್ಗೆ ಈಗಾಗಲೇ ಅವರ ಚಾನೆಲ್‌ನಲ್ಲಿ ಪ್ರಕಟಣೆ ನೀಡಲಾಗಿದೆ. ಚಿತ್ರದ ನಾಯಕಿಯಾಗಿ ಪೂಜಾ ಗಾಂಧಿಯನ್ನು ಆಯ್ಕೆ ಮಾಡಿದ್ದಾರೆ. ಅಂತೂ ರಿಯಾಲಿಟಿ ಷೋಗಳ ವಿಜೇತರಿಗೆ ಮೊಬೈಲ್ ಮತ್ತು ಬೆಂಕಿ ಪೊಟ್ಟಣಗಳನ್ನು ನೀಡುವವರಿಗಿಂತ ತಾನು ವಿಭಿನ್ನ ಎಂಬುದನ್ನು ಅನಿತಾ ಕುಮಾರಸ್ವಾಮಿ ತೋರಿಸಿದ್ದಾರೆ. ಇಲ್ಲಿಗೆ ಟಿವಿ ಮತ್ತು ಸಿನಿಮಾ ಉದ್ಯಮ ಭಾಯಿ-ಭಾಯಿ ಆದಂತೆ.

Regd.No.KA/RNP/BGS/2036/2008-10 Posted at : Basavanagudi, B'lore-4. R B P LANKESH, Kannada Weekly Price Rs. 12/- 27 -01-2010 RNI No. KARKAN2005/14048



'ಸುಪ್ರಭಾತ', 'ಅಮೃತವರ್ಷಿಣಿ', 'ಲಾಲಿ'ಯಂಥ ಸದಭಿರುಚಿ ಸಿನಿಮಾಗಳನ್ನು ಮಾಡುತ್ತಾ ಕ್ರಿಯೇಟಿವ್ ಡೈರೆಕ್ಟರ್ ಎನಿಸಿಕೊಂಡಿದ್ದ ದಿನೇಶ್ ಬಾಬು ಇತ್ತೀಚೆಗೆ ಹಣದ ಬೆನ್ನೇರಿ ಹೆಸರು ಕೆಡಿಸಿಕೊಂಡಿದ್ದಾರೆ. ಹೋಗಲಿ ಹಗಲೂ ರಾತ್ರಿ ಸಿನಿಮಾ, ಶೂಟಿಂಗು ಎಂದು ದುಡಿದರೂ, ಬಂದ ಹಣವನ್ನು ಜೂಜು, ಶೋಕಿಗಳಿಗೆ ಸುರಿದಿದ್ದಾರೆ.

• ಅರುಣ್

ದಿನೇಶ್ ಬಾಬು ದಿವಾಳಿ

ನಿರ್ದೇಶಕ ದಿನೇಶ್ ಬಾಬು ಸಂಪೂರ್ಣ ದಿವಾಳಿ ಎದ್ದುಹೋಗಿದ್ದಾರೆ.

ಕಳೆದ ಒಂದು ತಿಂಗಳಿಂದ ತಮ್ಮ ಮೊಬೈಲ್‌ಗಳನ್ನು ಸ್ವಿಚ್ ಆಫ್ ಮಾಡಿಕೊಂಡಿರುವ ದಿನೇಶ್ ಬಾಬು ಈಗ ಯಾರ ಕೈಗೂ ಸಿಗದಂತೆ ನಾಪತ್ತೆಯಾಗಿದ್ದಾರೆ. ವಿಷ್ಣುವರ್ಧನ್ ಅವರ ಅತ್ಯುತ್ತಮ ಹಾಗೂ ಅತೀ ಕಳಪೆ ಸಿನಿಮಾಗಳನ್ನೂ ನಿರ್ದೇಶಿಸಿರುವ ದಿನೇಶ್ ಬಾಬುರಿಂದ ವಿಷ್ಣು ಕುರಿತಂತೆ ಒಂದಿಷ್ಟು ಬೈಟ್ಸ್‌ಗಳನ್ನು ತೆಗೆದುಕೊಳ್ಳಲು ಕೆಲವು ಚಾನೆಲ್‌ನವರು ಹರಸಾಹಸ ಮಾಡಿದರೂ ಈ ಮನುಷ್ಯ ಫೋನ್ ರಿಸೀವ್ ಮಾಡಲಿಲ್ಲ. ಕೆಲವು ಪತ್ರಕರ್ತರಿಗೆ ಸ್ವತಃ ಬಾಬು ಅವರೇ ಕರೆ ಮಾಡಿ 'ನನಗೆ ಮಂಡಿನೋವು ಜಾಸ್ತಿ ಆಗಿದೆ. ಅದಕ್ಕೇ ಎಲ್ಲೂ ಬರಲು ಆಗುತ್ತಿಲ್ಲ' ಎಂದು ಪಿಳ್ಳೆ ನೆಪ ಹೇಳಿದ್ದಾರೆ. ಕಡೇ ಪಕ್ಷ ದಿನೇಶ್ ಬಾಬು ನಿರ್ದೇಶಿಸಿರುವ 'ಮಾಸ್ಟರ್' ಚಿತ್ರದ ಆಡಿಯೋ ಬಿಡುಗಡೆಗಾದರೂ ಅವರು ಬರಬಹುದು ಎಂದು ಬಹಳಷ್ಟು ಜನ ಕಾದಿದ್ದರು. ಚಿತ್ರರಂಗದ ಗಣ್ಯಾತಿಗಣ್ಯರೆಲ್ಲ 'ಮಾಸ್ಟರ್' ಮುಂದೆ ಹಾಜರಾದರೂ ದಿನೇಶ್ ಬಾಬು ಮಾತ್ರ ಆಟೆಂಡೆನ್ಸ್ ಹಾಕಲಿಲ್ಲ.

ದುಡಿದದ್ದೆಲ್ಲಾ ಜೂಜು ಪಾಲು

ಹೀಗೆ ಇದ್ದಕ್ಕಿದ್ದಂತೆ ದಿನೇಶ್ ಬಾಬು 'ನಾಟ್ ರೀಚಬಲ್' ಆಗಲು ಆತ ಮೈತುಂಬ ಮಾಡಿಕೊಂಡಿರುವ ಸಾಲವೇ ಕಾರಣ. ವರ್ಷವಿಡೀ ಹತ್ತಾರು ಸಿನಿಮಾಗಳನ್ನು ಮಾಡಿಕೊಂಡು ನಿರ್ಮಾಪಕರಿಂದ ಒಳ್ಳೇ ಅಮೌಂಟು ಪೀಕುವ ದಿನೇಶ್ ಬಾಬುಗೆ ಯಾಕಿಷ್ಟೊಂದು ಸಾಲ? ಸಾಯಿಪ್ರಕಾಶ್‌ನಂತೆ ದಿನೇಶ್ ಬಾಬು ಸಿನಿಮಾ ನಿರ್ಮಾಣಕ್ಕೆ ಇಳಿದು ನಷ್ಟವನ್ನೇನು ಅನುಭವಿಸದಿರುವಾಗ ಯಾಕಿಂತಹ ಸ್ಥಿತಿ? ದಿನೇಶ್ ಬಾಬು ಇಷ್ಟು ದಿನ ಗಳಿಸಿದ ಸಂಪಾದನೆ, ಕೂಡಿಟ್ಟ ಹಣವೆಲ್ಲ ಏನಾಯ್ತು?

ಎಲ್ಲವೂ ಪೋಕರ್ ಪಾಲು

ಬಡವರ್ಗದವರು ತಮ್ಮ ಸಂಪಾದನೆಯೆಲ್ಲಾ ಕಳೆದುಹಾಕಲು ಇಸ್ಪೀಟು, ರೇಸು, ಲಾಟರಿ ಇದ್ದಂತೆ ವಿಲಾಸೀ ಮಂದಿಯನ್ನು ಬರ್ಬಾದ್ ಮಾಡಲು ಇರುವ ದುಬಾರಿ ಆಟವೇ ಪೋಕರ್. ಈ ಗೇಮ್‌ನಲ್ಲಿ ಒಂದೇ ಬಾರಿಗೆ ಲಕ್ಷಾಂತರ ರೂಪಾಯಿಗಳನ್ನು ಇನ್‌ವೆಸ್ಟ್ ಮಾಡಿ ಅದರ ದುಪ್ಪಟ್ಟು ಹಣ ಬಾಚುವುದು ಆ ಆಟವನ್ನಾಡುವವರ ಲೆಕ್ಕಾಚಾರ. ಆದರೆ ಎಲ್ಲಾ ಲೆಕ್ಕಾಚಾರಗಳು ತಲೆಕೆಳಗಾಗಿ, ಹೂಡಿದ ಬಂಡವಾಳವನ್ನೂ ಕಳೆದುಕೊಂಡು ನೀರಿನೊಂದಿಗೆ ಚೊಂಬನ್ನೂ ಕಳೆದುಕೊಳ್ಳುವವರೇ ಹೆಚ್ಚು. ಒಂದು ಕಾಲದಲ್ಲಿ ಕ್ರೇಜಿ ಸ್ಟಾರ್ ರವಿಚಂದ್ರನ್ ಕೂಡಾ ಈ ಪೋಕರ್ ಆಟದ ಚಟಕ್ಕೆ ಬಿದ್ದು ಲಕ್ಷಗಟ್ಟಲೆ ಹಣ ಕಳೆದುಕೊಂಡು ಬರಿಗೈ ಆಗಿದ್ದರು.

ಈಗ ದಿನೇಶ್ ಬಾಬು ದಿವಾಳಿ ಆಗಲೂ ಕಾರಣವಾಗಿರುವುದು ಇದೇ ಪೋಕರ್ ಆಟವೇ. ದಿನೇಶ್ ಬಾಬು ಅದ್ಯಾವ ಪರಿ ಎಕ್ಕಾ ಎದ್ದಿದ್ದಾರೆಂದರೆ, ಸಿಕ್ಕಸಿಕ್ಕಲ್ಲೆಲ್ಲಾ ಲಕ್ಷಗಳ ಲೆಕ್ಕದಲ್ಲಿ ಸಾಲ ಎತ್ತುವ ಕಾಯಕಕ್ಕೆ ಇಳಿದಿದ್ದಾರೆ. ಯಾರಾದರೂ ಹೊಸಬರು ಪರಿಚಯವಾದರೆ ಮಾರನೇ ದಿನವೇ ಅವರಿಗೆ ಫೋನು ಮಾಡಿ 'ಐ ವಾಂಟ್ ಟೂ ಲಾಕ್ಸ್ ಅರ್ಜೆಂಟ್ಲೀ. ಪ್ಲೀಸ್ ಗೀವ್ ಮಿ' ಎನ್ನುತ್ತಾರೆ. ಇಷ್ಟು ದೊಡ್ಡ ನಿರ್ದೇಶಕ ಅಂಗಲಾಚುವುದನ್ನು ಕಂಡು ಎಂಥವರೂ ಹಣ ಹೊಂದಿಸಿಕೊಂಡು ಈತನ ಕೈಗೆ ಇಡುತ್ತಾರೆ. ಹೀಗೆ ಹಣ ಪಡೆದ ದಿನೇಶ್ ಬಾಬು ಇನ್ನೆಂದೂ ಅವರ ಫೋನು ರಿಸೀವ್ ಮಾಡುವುದೇ ಇಲ್ಲ, ಇನ್ನೇನಿದ್ದರೂ ಹೊಸ ಸಾಲಗಾರರ ಹಂಟಿಂಗ್ ಅಷ್ಟೇ.

ನಿರ್ಮಾಪಕ ಬಸವರೆಡ್ಡಿ ಅವರಿಂದ ಐದು ಲಕ್ಷ ಸಾಲ ಪಡೆದು ವರ್ಷವೇ ಉರುಳಿದರೂ ಇನ್ನೂ ಹಣ ವಾಪಸಾಗಿಲ್ಲವಂತೆ. ಹೀಗಾಗಿ ಬಸವರೆಡ್ಡಿ "ಬಾಬು ನನ್ನ ಕೈಗೆ ಸಿಕ್ಕರೆ ಧರ್ಮದೇಟು ಗ್ಯಾರೆಂಟಿ" ಎನ್ನುತ್ತಿದ್ದಾರೆ. ಇನ್ನೊಂದಿಷ್ಟು ಹೊಸ ನಿರ್ಮಾಪಕರನ್ನು ಹಿಡಿದು, ಸಿನಿಮಾ ಮಾಡಿಕೊಡುತ್ತೇನೆ ಎಂದು ಆಸೆ ಹುಟ್ಟಿಸಿ ಅಡ್ವಾನ್ಸ್ ಹಣ ಪಡೆದಿರುವ ದಿನೇಶ್ ಬಾಬು ಈಗ ಅವರ್‍ಯಾರ ಕೈಗೂ ಸಿಗದಂತೆ ಟಕಾಯಿಸುತ್ತಿದ್ದಾರೆ.


ಒಳ್ಳೆ ಹಗಲುಕುಡುಕನ ಹಾಗೆ ಎದುರಿಗೆ ಸಿಕ್ಕವರ ಬಳಿಯೆಲ್ಲಾ ಕಾಸಿಗಾಗಿ ಕೈಯೊಡ್ಡುವಷ್ಟು ಹೀನ ಸ್ಥಿತಿಗಿಳಿದಿರುವ ದಿನೇಶ್ ಬಾಬು ಕನ್ನಡದಲ್ಲಿ ಇವತ್ತಿಗೂ ಒಳ್ಳೆಯ ಪೇಮೆಂಟು ಪಡೆಯುವ ಡೈರೆಕ್ಟರ್. ಇನ್ನು ಈತ ಭಾರತದ ಐದಾರು ಭಾಷೆಗಳ ನೂರಕ್ಕೂ ಹೆಚ್ಚು ಸಿನಿಮಾಗಳಿಗೆ ಕ್ಯಾಮೆರಾಮನ್ ಆಗಿ ಕೆಲಸ ಮಾಡಿದ್ದಾರೆ; ಇನ್ನೂ ಮಾಡುತ್ತಲೂ ಇದ್ದಾರೆ.

ಯಾವ ನಿರ್ದೇಶಕನಿಗೂ ವರ್ಷಕ್ಕೆ ಮೂರಕ್ಕಿಂತ ಹೆಚ್ಚು ಸಿನೆಮಾಗಳನ್ನು ಮಾಡಲು ಸಾಧ್ಯವಿಲ್ಲ, ಚಿತ್ರದ ಸ್ಟೋರಿ ಡಿಸ್ಕಷನ್ನು, ಚಿತ್ರಕಥೆ, ಸಂಭಾಷಣೆ, ಶೂಟಿಂಗು, ಪೋಸ್ಟ್‌ಪ್ರೊಡಕ್ಷನ್ನು ಎಂದು ಒಂದು ಸಿನಿಮಾ ಏನಿಲ್ಲವೆಂದರೂ ಐದಾರು ತಿಂಗಳುಗಳ ದೀರ್ಘವಾದ ಸಮಯಾವಕಾಶವನ್ನು ಬೇಡುತ್ತದೆ. ಹೀಗಿರುವಾಗ ದಿನೇಶ್ ಬಾಬು ಮಾತ್ರ ವರ್ಷಕ್ಕೆ ಆರರಿಂದ ಎಂಟು ಸಿನಿಮಾಗಳನ್ನು ನಿರ್ದೇಶಿಸುತ್ತಾರೆ. ಆದರೆ ಇತ್ತೀಚೆಗೆ ದಿನೇಶ್ ಬಾಬು ತಾವು ನಿರ್ದೇಶಿಸಿದ ಯಾವ ಚಿತ್ರದಲ್ಲೂ ತಮ್ಮನ್ನು ಸಂಪೂರ್ಣವಾಗಿ ತೊಡಗಿಸಿಕೊಂಡಿಲ್ಲ. ಶೂಟಿಂಗ್ ಮುಗಿಯುವ ತನಕ ಇದ್ದು ತನ್ನ ಪಾಲಿನ ಬಾಬ್ತು ಸಂದಾಯವಾಗುತ್ತಿದ್ದಂತೇ ಎಡಿಟಿಂಗು, ಡಬ್ಬಿಂಗು ಯಾವುದಕ್ಕೂ ಹೋಗದೆ ಆ ಚಿತ್ರತಂಡದಿಂದ ಕಳಚಿಕೊಳ್ಳುತ್ತಾರೆ. ವಿಷ್ಣು ನಟಿಸಿದ್ದ 'ಬಳ್ಳಾರಿ ನಾಗ'ಕ್ಕೂ ಈತ ಬೇಕಾಬಿಟ್ಟಿ ಕೆಲಸ ಮಾಡಿದ್ದಕ್ಕೇ ಸಿನಿಮಾ ಒಂದೇ ವಾರಕ್ಕೆ ಡಬ್ಬಾ ಸೇರಿತ್ತು. ದಿನೇಶ್ ಬಾಬು ಅವರ ಈ ಕಾರ್ಯವೈಖರಿಯನ್ನು ಕಂಡೇ ವಿಷ್ಣುವರ್ಧನ್ ಇತ್ತೀಚೆಗೆ ಈತನ ಮೇಲೆ ಕೆಂಡಾಮಂಡಲರಾಗಿ ಪತ್ರಕರ್ತರ ಎದುರು ಗುಡುಗಿದ್ದರು. ಗಂಡುಗಲಿ ನಿರ್ಮಾಪಕ ಕೊಬ್ರಿ ಮಂಜು ಅಂತೂ "ಆ ವಯ್ಯನ ಸವಾಸವೇ ಬೇಡ" ಎನ್ನುತ್ತಿದ್ದಾರೆ.

ಇನ್ನು ದಿನೇಶ್ ಬಾಬು ದಿನೇದಿನೇ ಏರಿಕೊಳ್ಳುತ್ತಿರುವ ತಮ್ಮ ಸಾಲಕ್ಕಾಗಿ ಹಾಗು ಮತ್ತೆ ಪೋಕರ್ ಆಟಕ್ಕೆ ಹಣ ಹೂಡುವ ಕಾರಣಕ್ಕಾಗಿ ಬೇರೆ ಬೇರೆ ಭಾಷೆಗಳ ಕಥೆಗಳನ್ನು ಕದ್ದು, ಎಂಟು ದಿನಕ್ಕೆ, ಹನ್ನೆರಡು ದಿನಕ್ಕೆ ಒಂದರಂತೆ ಸಿನಿಮಾ ನಿರ್ದೇಶಿಸಿ ಕೊಡಲು ಕಮಿಟ್ ಆಗುತ್ತಿದ್ದಾರೆ. ಹೀಗೆ ಎಂಟು ಹತ್ತು ದಿನಗಳಲ್ಲಿ ಚಿತ್ರ ಮುಗಿಸಿಕೊಡುವ ದಿನೇಶ್ ಬಾಬು ತಾವು ಪಡೆಯುವ ಸಂಭಾವನೆಯಲ್ಲಂತೂ ನಯಾ ಪೈಸೆಗೂ ರಾಜಿಯಾಗುವುದಿಲ್ಲ.

'ಸುಪ್ರಭಾತ', 'ಅಮೃತವರ್ಷಿಣಿ', 'ಲಾಲಿ'ಯಂಥ ಸದಭಿರುಚಿ ಸಿನಿಮಾಗಳನ್ನು ಮಾಡುತ್ತಾ ಕ್ರಿಯೇಟಿವ್ ಡೈರೆಕ್ಟರ್ ಎನಿಸಿಕೊಂಡಿದ್ದ ದಿನೇಶ್ ಬಾಬು ಇತ್ತೀಚೆಗೆ ಹಣದ ಬೆನ್ನೇರಿ ಹೆಸರು ಕೆಡಿಸಿಕೊಂಡಿದ್ದಾರೆ. ಹೋಗಲಿ ಹಗಲೂ ರಾತ್ರಿ ಸಿನಿಮಾ, ಶೂಟಿಂಗು ಎಂದು ದುಡಿದರೂ, ಬಂದ ಹಣವನ್ನು ಜೂಜು, ಶೋಕಿಗಳಿಗೆ ಸುರಿದಿದ್ದಾರೆ.

ದಿನೇಶ್ ಬಾಬು ವಿರುದ್ಧ ಏನೇ ಆರೋಪಗಳಿದ್ದರೂ 'ಆತ ಉತ್ತಮ ತಂತ್ರಜ್ಞ' ಎಂಬುದನ್ನು ಒಪ್ಪಲೇಬೇಕು. ಇನ್ನಾದರೂ ಮಲೆಯಾಳಿ ಬಾಬು ಜೂಜು, ಜಂಜಾಟಗಳಿಂದ ಹೊರಬಂದು ಉತ್ತಮ ಸಿನಿಮಾ ನೀಡುವಂತಾಗಲಿ.



ದೇವನಹಳ್ಳಿ ಮಂಜನ ದೋಖಾ

ನಿರ್ಮಾಪಕನಿಗೆ 'ರಾಮ್' ನಾಮ!

ಪುನೀತ್ ರಾಜ್‌ಕುಮಾರ್ ಅಭಿನಯದ 'ರಾಮ್' ಚಿತ್ರ ಬಿಡುಗಡೆಗೊಂಡು ಯಶಸ್ವಿ ಪ್ರದರ್ಶನ ಕಾಣುತ್ತಿದೆ. ಬರಗೆಟ್ಟಿರುವ ಚಿತ್ರರಂಗದಲ್ಲಿ ಒಳ್ಳೆ ಬಾಕ್ಸ್ ಆಫೀಸ್ ಕಲೆಕ್ಷನ್‌ನಿಂದ ಹೊಸ ಕಳೆ ಸೃಷ್ಟಿಸಿದೆ. ಬಿಡುಗಡೆಗೊಂಡ ಮೊದಲೆರಡು ವಾರದ 'ಬಕೆಟ' ಕಲೆಕ್ಷನ್ನೇ ಒಂದು ಕೋಟಿ ಅರವತ್ತೆಂಟು ಲಕ್ಷ ರೂಪಾಯಿಗಳು.

'ರಾಮ್'ನ ಕಲೆಕ್ಷನ್ ಕಂಡು ಈ ಚಿತ್ರದಲ್ಲಾದರೂ ನಿರ್ಮಾಪಕ ಸೇಫ್ ಆದನಲ್ಲಾ ಎನ್ನುವ ಹೊತ್ತಿಗೇ ಅಲ್ಲೊಬ್ಬ ವಿಲನ್ ಹುಟ್ಟಿಕೊಂಡಿದ್ದಾನೆ.

ಆತ ಕಾರ್ಯಕಾರಿ ನಿರ್ಮಾಪಕ ದೇವನಹಳ್ಳಿ ಮಂಜು.

ಮೊದಲೆರಡು ವಾರವೇ ಒಂದು ಕೋಟಿ ಅರವತ್ತೆಂಟು ಲಕ್ಷ ರೂಪಾಯಿಯ ದೊಡ್ಡ ಮೊತ್ತದ ಶೇರು ಬಂದಿದ್ದರೂ ದೇವನಹಳ್ಳಿ ಮಂಜು ನಿರ್ಮಾಪಕ ಆದಿತ್ಯ ಬಾಬುಗೆ ನೀಡಿರುವುದು ಬರೀ ಒಂದು ಕೋಟಿ ಎಂಟು ಲಕ್ಷ, ಮಿಕ್ಕ ಅಷ್ಟೂ 60 ಲಕ್ಷ ರೂಪಾಯಿಗಳನ್ನು ಮಂಜು ತನ್ನ ಕಿಸೆಗೆ ಇಳಿಸಿಕೊಂಡಿದ್ದಾನೆ. ದೇವನಹಳ್ಳಿ ಮಂಜನ ಈ ನಂಬಿಕೆ ದ್ರೋಹದಿಂದ ಬೇಸತ್ತಿರುವ ನಿರ್ಮಾಪಕ ಆದಿತ್ಯ ಬಾಬು ಈಗ ಮಂಜನನ್ನು ತನ್ನ ಸಂಸ್ಥೆಯಿಂದ ಹೊರದಬ್ಬುವ ಪ್ರಯತ್ನದಲ್ಲಿದ್ದಾರೆ.



ಎಲ್ಲರಿಗೂ ತಿಳಿದಿರುವಂತೆ ಆದಿತ್ಯ ಬಾಬು ತೆಲುಗಿನ ಖ್ಯಾತ ನಿರ್ಮಾಪಕ ಜೆ.ಡಿ.ರಾಮ್ ಅವರ ಮಗ. ಕನ್ನಡದಲ್ಲಿ ನಾಯಕನಟನಾಗುವ ಬಯಕೆಯಿಂದ 'ಅಂತೂ ಇಂತೂ ಪ್ರೀತಿ ಬಂತು' ಎಂಬ ಸಿನಿಮಾವನ್ನು ನಿರ್ಮಿಸಿ ಸ್ವತಃ ನಾಯಕನಟನೂ ಆಗಿದ್ದ, ರಮ್ಯಾ ನಾಯಕಿಯಾಗಿದ್ದರೂ ಸಹ ಸಿನಿಮಾ ಒಂದೇ ವಾರಕ್ಕೆ ಬೋರಲು ಬದ್ದಿತ್ತು.

ನಂತರ ತಮ್ಮದೇ 'ಆದಿತ್ಯ ಆರ್ಟ್ಸ್' ಸಂಸ್ಥೆಯ ಮೂಲಕ ಶಿವರಾಜ್‌ಕುಮಾರ್ ನಟಿಸಿದ್ದ 'ಪರಮೇಶ ಪಾನ್ ವಾಲಾ' ಚಿತ್ರವನ್ನು ನಿರ್ಮಿಸಿದ್ದರು. ಆದರೆ ಆ ಚಿತ್ರವೂ ತೋಪಾಗಿದ್ದರಿಂದ ಅಲ್ಲೂ ನಿರ್ಮಾಪಕನಿಗೆ ಅಪಾರ ನಷ್ಟವಾಗಿತ್ತು. ಹೀಗೆ ನಿರ್ಮಾಪಕ ನಷ್ಟದ ಮೇಲೆ ನಷ್ಟ ಅನುಭವಿಸುತ್ತಿದ್ದರೂ ಅವರ ಎಲ್ಲ ಚಿತ್ರಗಳಿಗೂ ಕಾರ್ಯಕಾರಿ ನಿರ್ಮಾಪಕನಾಗಿದ್ದ ದೇವನಹಳ್ಳಿ ಮಂಜು ಮಾತ್ರ ಕೊಬ್ಬುತ್ತಾ ಬೆಳೆದ.



ಒರೆದಕ್ಕೆ ಎರಡರಷ್ಟು ಲೆಕ್ಕ ತೋರಿಸುತ್ತಿದ್ದ ಮಂಜು 'ಆದಿತ್ಯ ಆರ್ಟ್ಸ್'ನ ಸಿನಿಮಾಗಳಿಗೆ ದುಡಿದ ಯಾವೊಬ್ಬ ತಂತ್ರಜ್ಞರಿಗೂ ಸರಿಯಾಗಿ ಪೇಮೆಂಟ್ ಸೆಟಲ್‌ಮೆಂಟ್ ಮಾಡಿಲ್ಲ. ಇನ್ನು 'ವಂಶಿ' ಚಿತ್ರಕ್ಕಾಗಿ ಬೆಂಗಳೂರು ನಗರದಲ್ಲಿ ನಾಲ್ಕಾರು ಬಸ್‌ಗಳನ್ನು ಬಿಟ್ಟು ವಿನೂತನ ಪ್ರಚಾರ ಮಾಡಲಾಗಿತ್ತು. ಅಲ್ಲೂ ಸಹ ಜಾಹೀರಾತು ಸಂಸ್ಥೆಯೊಡನೆ ವ್ಯವಹಾರ ಕುದುರಿಸಿಕೊಂಡು ಸಾಕಷ್ಟು ಹಣ ಹೊಡೆದಿದ್ದ ಈ ಮಂಜ.

ಇಂಥ ದೇವನಹಳ್ಳಿ ಮಂಜ ಅದೆಂಥಾ ದುರಹಂಕಾರಿ ಎಂದರೆ ಸ್ವತಃ ಪುನೀತ್ ಅವರೇ ಪತ್ರಕರ್ತರನ್ನು ಕರೆದು ಸಂದರ್ಶನ ನೀಡುತ್ತಿದ್ದರೆ, ಅವರನ್ನು ಪಕ್ಕಕ್ಕೆ ಕರೆದು, 'ಪುನೀತ್ ಅವರನ್ನ ಡಿಸ್ಟರ್ಬ್ ಮಾಡ್ಬೇಡ್ರಿ...' ಎಂದು ಪತ್ರಕರ್ತರ ಮೇಲೇ ಎಗರಿಬೀಳುತ್ತಿದ್ದ.

ಈಗ ಹಣ ಹೂಡಿದ ನಿರ್ಮಾಪಕನಿಗೇ ದೋಖಾ ಕೊಡುವ ಮೂಲಕ ದೇವನಹಳ್ಳಿ ಮಂಜು ತಾನೆಷ್ಟು ಪ್ರಾಮಾಣಿಕ ಎಂಬುದನ್ನು ತೋರಿದ್ದಾನೆ. ಭಾಷೆ ತಿಳಿಯದಿದ್ದರೂ, ಕನ್ನಡದ ಮೇಲಿನ ಅಭಿಮಾನದಿಂದ ಮತ್ತು ಒಂದಷ್ಟು ಉತ್ತಮ ಚಿತ್ರಗಳನ್ನು ನಿರ್ಮಿಸುವ ಉದ್ದೇಶ ಹೊಂದಿದ್ದ ಆದಿತ್ಯ ಬಾಬುರಂಥ ನಿರ್ಮಾಪಕರನ್ನು ದೇವನಹಳ್ಳಿ ಮಂಜುರಂಥವರು ಇನ್ನೆಂದೂ ಇತ್ತ ಸುಳಿಯದಂತೆ ಮಾಡಿದ್ದಾರೆ. ಹೀಗಿರುವಾಗ ಕನ್ನಡ ಚಿತ್ರರಂಗದತ್ತ ಹೊರಗಿನವರು ಅನುಕಂಪ ತೋರುವುದಾದರೂ ಹೇಗೆ ಸಾಧ್ಯ?

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427, Fax : 26604536, E-mail :lankesh70@rediffmail.com, Printed at Rajhans Enterprises, # 134, 4th Main, Industrial Estate, Rajajinagar, Bangalore-44